ಸಂಪುಟ: 05 ಸಂಚಿಕೆ: 90 ಪುಟಗಳು: 08 ಶುಕ್ರವಾರ 13 ಜೂನ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ನನ್ನ ಮಟ್ಟಿಗಂತೂ ಆತ್ಮಗೌರವವನ್ನು ಬಿಟ್ಟು ಉಳಿಸಿಕೊಳ್ಳಬೇಕಾದ ಯಾವ ಕಲೆಯೂ ಪ್ರಪಂಚದಲ್ಲಿ ಇಲ್ಲ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಪವರ್ ಪಾಲಿಟಿಕ್ಸ್‌ನಲ್ಲಿ ಕಾಂಪ್ರಮೈಸ್ ಬಹಳ ಮುಖ್ಯ

• ಉದಯವಾಹಿನಿ, ಬೆಂಗಳೂರು

ಜಾತಿಗಣತಿ ಮರು ಸಮೀಕ್ಷೆಯ ನಿರ್ಧಾರದ ನಡುವೆ, ಚಿಕ್ಕಬಳ್ಳಾಪುರ ಕಾಂಗ್ರೇಸ್ ಶಾಸಕ ಪ್ರದೀಪ್ ಈಶ್ವರ್ ಅವರ ಹೇಳಿಕೆಯೊಂದು ಕುತೂಹಲಕ್ಕೆ ಕಾರಣವಾಗಿದೆ. ಪವರ್ ಪಾಲಿಟಿಕ್ಸ್ ನಲ್ಲಿ ಕಾಂಪ್ರಮೈಸ್ ಬಹಳ ಮುಖ್ಯ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಕಾಂಗ್ರೇಸ್, ಎಲ್ಲಾ ಸಮುದಾಯದವರನ್ನು ಒಗ್ಗೂಡಿಸಿಕೊಂಡು ಹೋಗುವ ಪಾರ್ಟಿ ಎಂದು ಅವರು ಸಾರಿದ್ದಾರೆ. ಸಚಿವ ಸಂಪುಟ ಸಭೆಯಲ್ಲಿ ಜಾತಿಗಣತಿ ವರದಿ ಅನುಮೋದನೆಯನ್ನು ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧರಿಸಿದ್ದರು. ಆದರೆ, ದೆಹಲಿಯಲ್ಲಿ ನಡೆದ ಬೆಳವಣಿಗೆಯಿಂದಾಗಿ, ತುರ್ತಾಗಿ ರಾಜಧಾನಿಗೆ ಸಿಎಂ ಮತ್ತು ಡಿಸಿಎಂ ಹೋಗಿದ್ದರು.

ಅಲ್ಲಿ, ಜಾತಿಗಣತಿ ಮರು ಸಮೀಕ್ಷೆ ನಡೆಸಲು ಹೈಕಮಾಂಡ್ ಸೂಚನೆಯನ್ನು ನೀಡಿದ್ದರು. ಯಾವುದೇ ಬದಲಾವಣೆ ಮಾಡದೇ ಜಾತಿಗಣತಿ ಅನುಮೋದನೆ ನೀಡಲು ಸಿಎಂ ಹಠ ಹಿಡಿದಿದ್ದರು. ಆದರೆ, ಬದಲಾದ ಸನ್ನಿವೇಶದಲ್ಲಿ ಮರುಸಮೀಕ್ಷೆ ನಡೆಸಲು ನಿರ್ಧರಿಸಿರುವುದು ಅವರಿಗಾದ ಹಿನ್ನಡೆ ಎಂದು ವ್ಯಾಖ್ಯಾನಿಸಲಾಗುತ್ತಿತ್ತು.

## ಕಮಿಷನರೇಟ್ ವ್ಯಾಪ್ತಿಯಲ್ಲಿ ಡಿಸಿಪಿ ವಿಭಾಗ 8 ರಿಂದ 11 ಕ್ಕೆ ಏರಿಕೆ

• ಉದಯವಾಹಿನಿ, ಬೆಂಗಳೂರು

ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ3 ಹೊಸ ಡಿಸಿಪಿ ವಿಭಾಗಗಳನ್ನು ಸೃಜಿಸಲಾಗಿದೆ. ಆ ಮೂಲಕ ಡಿಸಿಪಿ ವಿಭಾಗಗಳ ಸಂಖ್ಯೆ 8ರಿಂದ 11ಕ್ಕೆ ಏರಿಕೆಯಾಗಿದೆ. ಹೊಸದಾಗಿ ಡಿಸಿಪಿ ವಾಯುವ್ಯ ವಿಭಾಗ, ಡಿಸಿಪಿ ಎಲೆಕ್ಟ್ರಾನಿಕ್ ಸಿಟಿ ವಿಭಾಗ, ಡಿಸಿಪಿ ದೇವನಹಳ್ಳಿ ವಿಭಾಗ ಸೃಜಿಸಲಾಗಿದೆ. ಈ ಹಿಂದೆ ಇದ್ದ ಆಗ್ನೇಯ ವಿಭಾಗವನ್ನು ವಿಭಜಿಸಿ ಹೊಸದಾಗಿ ಎಲೆಕ್ಟ್ರಾನಿಕ್ ಸಿಟಿ ವಿಭಾಗ ಎಂದು ಹೆಸರಿಸಲಾಗಿದೆ. ಈಶಾನ್ಯ ವಿಭಾಗವನ್ನು ವಿಭಜಿಸಿ ದೇವನಹಳ್ಳಿ ವಿಭಾಗ ಎಂದು ಹೆಸರಿಸಲಾಗಿದೆ.

ಉಳಿದಂತೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ, ವೈಟ್ ಫೀಲ್ಡ್ ವಿಭಾಗಗಳು ಯಥಾಸ್ಥಿತಿಯಲ್ಲಿ ಮುಂದುವರಿಯಲಿದೆ. ಆದರೆ, ಕೆಲ ಠಾಣೆಗಳನ್ನು ವಿಭಾಗವಾರು ಅದಲು-ಬದಲಾಗಿ ಮಾಡಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ ಕರ್ತವ್ಯಲೋಪ ಆರೋಪದ ಕಾರಣ ನೀಡಿ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ ಅವರನ್ನು ಅಮಾನತುಗೊಳಿಸಿದ ರಾಜ್ಯ ಸರಕಾರದ ಕ್ರಮಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ.

## ಬೆಸ್ಕಾಂಗೆ ವರುಣಾಘಾತ, 1.46 ಲಕ್ಷ ಕಿ.ಮೀ. ವಿದ್ಯುತ್ ಮಾರ್ಗಕ್ಕೆ ಹಾನಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕೆಲ ದಿನಗಳಿಂದ ಅಬ್ಬರಿಸುತ್ತಿರುವ ಮಳೆಯು ಬೆಸ್ಕಾಂಗೆ ದೊಡ್ಡ ಹೊಡೆತ ಕೊಟ್ಟಿದ್ದು, ವರುಣಾಘಾತಕ್ಕೆ ಕೋಟಿ ಕೋಟಿ ನಷ್ಟವಾಗಿದೆ. ಪೂರ್ವ ಮುಂಗಾರು ಮತ್ತು ಮುಂಗಾರು ಆರಂಭದ ನಂತರ ಕಳೆದ ಎರಡು (ಏಪ್ರಿಲ್ ಮತ್ತು ಮೇ) ತಿಂಗಳಲ್ಲಿ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ 1,581 ವಿದ್ಯುತ್ ಕಂಬಗಳು ಧರೆಗುರುಳಿವೆ ಮತ್ತು 229 ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿ 5 ಕೋಟಿ ರೂ. ನಷ್ಟವಾಗಿದೆ. ಅವಧಿಗೂ ಮುನ್ನವೇ ರಾಜ್ಯ ಪ್ರವೇಶಿಸಿದ ಮುಂಗಾರು ಮಳೆಯು ರೈತರ ಮೊಗದಲ್ಲಿ ಸಂತಸ ಮೂಡಿಸಿದೆ. ಮತ್ತೊಂದೆಡೆ ಮಳೆಯೊಂದಿಗೆ ಬೀಸಿದ ಬಿರುಗಾಳಿಯು ರೈತರನ್ನು ಸಂಕಷ್ಟಕ್ಕೆ ದೂಡಿದೆ. ಗಾಳಿಯ ತೀವ್ರತೆಗೆ ವಿದ್ಯುತ್ ಕಂಬಗಳು ನೆಲಕಚ್ಚಿವೆ. ಹಲವೆಡೆ ವಿದ್ಯುತ್ ಪರಿವರ್ತಕಗಳು ಬಿದ್ದು ಹೋಗಿವೆ.

ವಿದ್ಯುತ್ ಪೂರೈಕೆ ಮಾರ್ಗಕ್ಕೂ ಹಾನಿಯಾಗಿದೆ. ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿ ಕೃಷಿ ಬಳಕೆ ಪಂಪ್‌ಸೆಟ್, ಮೋಟರ್ ಸುಟ್ಟು ಹೋಗಿವೆ. ಸುಮಾರು 1.46 ಲಕ್ಷ ಕಿ.ಮೀ. ವಿದ್ಯುತ್ ಮಾರ್ಗಕ್ಕೆ ಹಾನಿಯಾಗಿದ್ದು, ಸಾಕಷ್ಟು ಕಡೆ ವಿದ್ಯುತ್ ತಂತಿಗಳು ತುಂಡಾಗಿವೆ. ಹೊಸದಾಗಿ ವಿದ್ಯುತ್ ತಂತಿ ಅಳವಡಿಕೆಗೆ 1.02 ಕೋಟಿ ರೂ. ವ್ಯಯಿಸಲಾಗಿದೆ. ಎರಡು ಕಂಬಗಳ ಸ್ಟ್ರಕ್ಚರ್(ಡಿ.ಪಿ) ಹಾನಿಯಾಗಿದ್ದು, ಇವುಗಳ ದುರಸ್ತಿಗೆ ಸುಮಾರು 15 ಲಕ್ಷ ರೂ. ಖರ್ಚು ಮಾಡಲಾಗಿದೆ.

## ಅಧಿಕಾರ ಪಡೆವ ದುರಾಸೆಗಾಗಿ ಅಕ್ರಮ ಗಣಿಗಾರಿಕೆ ಆರೋಪ

• ಉದಯವಾಹಿನಿ, ಬೆಂಗಳೂರು

ಸಿಬಿಐ ಕೋರ್ಟ್ ವಿಧಿಸಿದ್ದ ಶಿಕ್ಷೆಯ ವಿರುದ್ಧ ತೆಲಂಗಾಣ ಹೈಕೋರ್ಟ್‌ನಿಂದ ತಾತ್ಕಾಲಿಕ ತಡೆಯಾಜ್ಞೆ ಪಡೆದು ಇವತ್ತು ಜೈಲಿನಿಂದ ಹೊರಬಂದ ಗಾಲಿ ಜನಾರ್ಧನ ರೆಡ್ಡಿ ಮಾಧ್ಯಮಗಳೊಂದಿಗೆ ಮಾತಾಡುತ್ತಾ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರ ಪಡೆಯಬೇಕೆಂಬ ರಾಜಕೀಯ ದುರಾಸೆಯಿಂದ ಬಳ್ಳಾರಿವರೆಗೆ ಪಾದಯಾತ್ರೆ ಮಾಡಿ, ತನ್ನ ವಿರುದ್ಧ ಅಕ್ರಮ ಗಣಿಗಾರಿಕೆಯ ಆರೋಪ ಹೊರೆಸಿ ಜೈಲಿಗೆ ಹೋಗುವಂತೆ ಮಾಡಿದ್ದರು ಎಂದು ಹೇಳಿದರು. ಆದರೆ, ಸಿಬಿಐ ಕೋರ್ಟ್ ತನ್ನ ತೀರ್ಪಿನಲ್ಲಿ ಅಕ್ರಮ ಗಣಿಗಾರಿಕೆ ನಡೆದಿಲ್ಲ ಎಂದು ಹೇಳಿದೆ ಮತ್ತು ಓಬಳಪುರಂ ಮೈನಿಂಗ್ ಕಂಪನಿಯಿಂದ ಬೇರೆ ದೇಶಗಳಿಗೆ ಅದಿರನ್ನು ರಫ್ತು ಮಾಡಿದರೆಂಬ ಅರೋಪವನ್ನೂ ನ್ಯಾಯಾಲಯ ಹೊಡೆದು ಹಾಕಿದೆ ಎಂದು ರೆಡ್ಡಿ ಹೇಳಿದರು.

# ಅಯ್ಯೋ... ಅಪಘಾತ ದೇವ್ರೇ..!

### ವೈದ್ಯರ ವಸತಿ ಸಮುಚ್ಚಯಕ್ಕೆ ಅಪ್ಪಳಿಸಿದ ವಿಮಾನ...!



• ಉದಯವಾಹಿನಿ, ಗುಜರಾತ್

ಗುಜರಾತ್‌ನ ಅಹಮದಾಬಾದ್‌ನಲ್ಲಿ ಗುರುವಾರ ಸಂಭವಿಸಿದ ವಿಮಾನ ಅಪಘಾತದಲ್ಲಿ 240 ಜನರು ಮೃತಪಟ್ಟಿದ್ದಾರೆ. ಕೇವಲ ಓರ್ವ ವ್ಯಕ್ತಿ ಬಚಾವಾಗಿದ್ದಾರೆ. ಈ ದುರಂತ ನಡೆದ ಸ್ಥಳಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ನೀಡಿ ಪರಿಶೀಲನೆ ನಡೆಸಿ, ಘಟನೆಯ ಬಗ್ಗೆ ಮಾಹಿತಿ ಪಡೆದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಗುಜರಾತ್ ಸಿಎಂ, ರಾಜ್ಯದ ಗೃಹ ಸಚಿವರು ಮತ್ತು ಡಿಜಿಪಿ ಅವರೊಂದಿಗೆ ಮಾತನಾಡಿದ್ದರು. ತಕ್ಷಣ ದೆಹಲಿಯಿಂದ ಅಹಮದಾಬಾದ್‌ಗೆ ಹೊರಟಿದ್ದ ಅಮಿತ್ ಶಾ ಇದೀಗ ದುರಂತ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಈ ವೇಳೆ ಗುಜರಾತ್ ಸಿಎಂ ಭೂಪೇಂದ್ರ ಪಟೇಲ್, ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಕಿಂಜರಾಪು, ನಾಗರಿಕ ವಿಮಾನಯಾನ ಸಚಿವ ಮುರಳೀಧರ್ ಮೊಹೋಲ್, ಗುಜರಾತ್ ಗೃಹ ಸಚಿವ ಹರ್ಷ ಸಂಘವಿ ಅವರು ಕೂಡ ಅವರೊಂದಿಗೆ ಇದ್ದರು.

1. ಗುಜರಾತ್‌ನ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಇಬ್ಬರು ಪ್ರಯಾಣಿಕ ಪಾರು.
2. ಪವಾಡಸದೃಶ್ಯವಾಗಿ ಪಾರಾದ ವಿಶ್ವಾಸ್ ಕುಮಾರ್ ರಮೇಶ್.
3. ನಾನು ಎದ್ದಾಗ, ನನ್ನ ಸುತ್ತಲೂ ಮೃತದೇಹಗಳು ಬಿದ್ದಿದ್ದವು ಎಂದು ವಿವರಿಸಿದ ವಿಶ್ವಾಸ್.

230 ಪ್ರಯಾಣಿಕರಲ್ಲಿ 169 ಮಂದಿ ಭಾರತೀಯರು, ಪತನಗೊಂಡ ವಿಮಾನದಲ್ಲಿ 230 ಪ್ರಯಾಣಿಕರು, ಪೈಲಟ್ - ಕೋ ಪೈಲಟ್ ಹಾಗು ವಿಮಾನ ಸಿಬ್ಬಂದಿ ಸೇರಿ ಒಟ್ಟು 242 ಜನರಿದ್ದರು. ಪ್ರಯಾಣಿಕರಲ್ಲಿ 52 ಮಂದಿ ಬ್ರಿಟನ್ ನಾಗರಿಕರಾಗಿದ್ದು, 7 ಮಂದಿ ಪೋರ್ಚಗಲ್ ನಾಗರಿಕರಾಗಿದ್ದರು.

ಇನ್ನು, ಒಬ್ಬ ಕೆನಡಾದವರು ಇದ್ದರು. ಉಳಿದ 169 ಮಂದಿ ಭಾರತೀಯರು. ಇವರಲ್ಲಿ 10 ಮಕ್ಕಳೂ ಸೇರಿದ್ದರು ಎಂದು ಹೇಳಲಾಗಿದೆ. ವಿಮಾನದಲ್ಲಿದ್ದ ಎಲ್ಲಾ ಪ್ರಯಾಣಿಕರ ಮಾಹಿತಿ ಬೇಕೆಂದು ಕೇಂದ್ರ ನಾಗರಿಕ ವಿಮಾನ ಯಾನ ಸಚಿವಾಲಯ ಗುಜರಾತ್ ಸರ್ಕಾರವನ್ನು ಕೇಳಿದೆ. ಜೊತೆಗೆ, ಪತನಗೊಂಡಿರುವ ವಿಮಾನದ ಪರಿಹಾರ ಕಾರ್ಯಗಳಿಗೆ ಬೇಕಾದ ಎಲ್ಲಾ ನೆರವನ್ನು ನೀಡುವುದಾಗಿ ಕೇಂದ್ರ ಸರ್ಕಾರ, ಗುಜರಾತ್ ಸರ್ಕಾರಕ್ಕೆ ತಿಳಿಸಿದೆ.

ವಿಮಾನ ಪತನಗೊಂಡು ಧಗಧಗನೆ ಹೊತ್ತಿ ಉರಿಯಿತು. ದಿಢೀರ್ ವಿಮಾನ ಅಪಘಾತಕ್ಕೀಡಾಗಿದ್ದರಿಂದ ಏನಾಗುತ್ತಿದೆ ಎಂಬುದು ಗೊತ್ತಾಗಲೇ ಇಲ್ಲ. ವಿಮಾನದಲ್ಲಿದ್ದ ಪ್ರಯಾಣಿಕರ ಚೀರಾಟ ಆಕ್ರಂದನ ಮುಗಿಲು ಮುಟ್ಟಿದೆ. ಸುದ್ದಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿದೆ. ಆದರೆ, ವಿಮಾನ ಹೊತ್ತಿ ಉರಿಯುತ್ತಿದ್ದ ಕಾರಣ ಅದರಲ್ಲಿದ್ದವರನ್ನು ರಕ್ಷಣೆ ಮಾಡಲು ಸಾಧ್ಯವಾಗಿಲ್ಲ. ತಕ್ಷಣ ಬೆಂಕಿ ನಂದಿಸಲು ಮುಂದಾಗಿದೆ. ತುರ್ತು ಸೇವೆಗಳೂ ಸೇರಿದಂತೆ 7 ಅಗ್ನಿಶಾಮಕ ವಾಹನಗಳು ಸ್ಥಳದಲ್ಲಿ ಬೀಡುಬಿಟ್ಟಿದ್ದು, ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತವಾಗಿದೆ. ಬೆಂಕಿಯನ್ನು ನಂದಿಸಿ ತೀವ್ರವಾಗಿ ಗಾಯಗೊಂಡ ಪ್ರಯಾಣಿಕರನ್ನು ಆಂಬ್ಯುಲೆನ್ಸ್ ಮೂಲಕ ಸಮೀಪದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕೆಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಲಾಗಿದೆ.

**ಲಕ್ಕಿ ಲೇಡಿ ಬಚಾವ್...!:** ಮಹಿಳೆಯೊಬ್ಬರು ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿದ್ದರಿಂದ ಏರ್ ಇಂಡಿಯಾ ವಿಮಾನ ಅಪಘಾತದಿಂದ ಪಾರಾಗಿದ್ದಾರೆ. ಅಹಮದಾಬಾದ್‌ನ ಭೂಮಿ ಚೌಹಾಣ್ ಲಂಡನ್‌ಗೆ ಹೊರಟಿದ್ದರು. ಆದರೆ, ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿದ್ದರಿಂದ ಅಹಮದಾಬಾದ್ ವಿಮಾನ ನಿಲ್ದಾಣವನ್ನು 10 ನಿಮಿಷ ತಡವಾಗಿ ತಲುಪಿದ್ದರು.

ಇದರಿಂದ ಅವರಿಗೆ ವಿಮಾನ ಏರಲು ಅನುಮತಿ ನಿರಾಕರಿಸಲಾಗಿತ್ತು. ಇದಾದ ಕೆಲವೇ ನಿಮಿಷಗಳಲ್ಲಿ ವಿಮಾನ ಅಪಘಾತದ ಸುದ್ದಿ ಬಂದಿದ್ದು, ಮಹಿಳೆ, ಮಾಧ್ಯಮಗಳ ಮುಂದೆ ಗದ್ಗದಿತರಾಗಿದ್ದಾರೆ. ಈ ವಿಚಾರ ಕೇಳಿ ನನಗೆ ಭಯವಾಗಿ ಕೈಕಾಲುಗಳು ನಡುಗಲು ಪ್ರಾರಂಭಿಸಿದವು. ನಾನು ತುಂಬಾ ಹೊತ್ತು ಅದೇ ಆಘಾತದಲ್ಲಿದ್ದೆ. ಕೇವಲ 10 ನಿಮಿಷ ತಡವಾಗಿ ಬಂದಿದ್ದರಿಂದ ವಿಮಾನ ತಪ್ಪಿಸಿಕೊಂಡು ಬದುಕುಳಿದೆ. ನನ್ನ ನೆಚ್ಚಿನ ದೇವರಾದ ಗಣಪತಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಗಣಪತಿ ಬಪ್ಪಾ ನನ್ನನ್ನು ಉಳಿಸಿದ ಎಂದು ಹೇಳಿಕೊಂಡಿದ್ದಾರೆ.




### ಏರ್ ಇಂಡಿಯಾ ವಿಮಾನ ದುರಂತದಿಂದ ದಿಗ್ಭ್ರಮೆಗೊಂಡಿದ್ದೇನೆ

ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ದುರಂತಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಸಂತಾಪ ಸೂಚಿಸಿದ್ದಾರೆ.ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ದುರಂತದಿಂದ ದಿಗ್ಭ್ರಮೆಗೊಂಡಿದ್ದೇನೆ. ಇದರಿಂದ ಎಲ್ಲಾರಿಗೂ ಅತೀವ ನೋವು ಉಂಟಾಗಿದೆ. ದುರಂತದಲ್ಲಿ ಸಿಲುಕಿರುವವರಿಗೆ ನೆರವು ನೀಡುವ ವಿಚಾರವಾಗಿ ಸಚಿವರು ಹಾಗೂ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಅಲ್ಲದೇ ನಿರಂತರವಾಗಿ ಅವರ ಜೊತೆ ಸಂಪರ್ಕದಲ್ಲಿದ್ದೇನೆ ಎಂದು ತಿಳಿಸಿದ್ದಾರೆ. ಇನ್ನೂ ಅವಘಡದ ಕುರಿತು ಅವರು, ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರೊಂದಿಗೆ ಮಾತನಾಡಿದ್ದು, ವಿಮಾನ ಅಪಘಾತದ ಕುರಿತು ಮಾಹಿತಿ ಪಡೆದಿದ್ದಾರೆ.



'ಅಹಮದಾಬಾದ್‌ನಿಂದ ಲಂಡನ್‌ಗೆ ಪ್ರಯಾಣಿಸುತ್ತಿದ್ದ ಏರ್ ಇಂಡಿಯಾ ವಿಮಾನ (ಎಐ-171) ದುರಂತವು ನನಗೆ ತೀವ್ರ ಆಘಾತ, ದಿಗ್ಭ್ರಮೆ ಉಂಟು ಮಾಡಿದೆ. ಅತ್ಯಂತ ಹೃದಯವಿದ್ರಾವಕವಾದ ಈ ದುರ್ಘಟನೆಯಲ್ಲಿ ಅಸುನೀಗಿದ ಪ್ರಯಾಣಿಕರ ಕುಟುಂಬಗಳಿಗೆ ನನ್ನ ದುಃಖತಪ್ತ ಸಂತಾಪಗಳು. ದೇವರ ದಯೆಯಿಂದ ಪ್ರಾಣಾಪಾಯದಿಂದ ಪಾರಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಎಲ್ಲಾರೂ ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ

-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ



ಏರ್ ಇಂಡಿಯಾ ವಿಮಾನ ಪತನಗೊಂಡಿದೆ. ಈ ಸುದ್ದಿ ತಿಳಿದು ತುಂಬಾ ಆಘಾತವಾಗಿದೆ. ಇದು ಅತ್ಯಂತ ದುರದೃಷ್ಟಕರ ಮತ್ತು ನೋವಿನ ಘಳಿಗೆ, ಈ ಅಪಘಾತದಿಂದ ಹೆಚ್ಚಿನ ಹಾನಿಯಾಗದಿರಲಿ. ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿರಲಿ ಎಂದು ಪ್ರಾರ್ಥಿಸೋಣ.

- ಸಿದ್ದರಾಮಯ್ಯ ಸಿಎಂ



ಗುಜರಾತ್‌ನ ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನ ಆಗಿದೆ. ಈ ಘಟನೆ ನಡೆದಿರುವುದು ನನಗೆ ಆಶ್ಚರ್ಯ ತರಿಸಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ವಿಮಾನಗಳು ಉತ್ತಮವಾಗಿ ಸಂಚಾರ ಆಗ್ತಿತ್ತು. ನಾನು ಕೆಲ ದೃಶ್ಯಗಳನ್ನ ನೋಡಿದ್ದೇನೆ. ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು. ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ದೇಶದಲ್ಲಿ ಹೆಚ್ಚು ಸಾವು ಆಗಬಾರದು. ದುರಂತದಲ್ಲಿ ಸಾವನ್ನಪ್ಪಿದವರ ಆತ್ಮಕ್ಕೆ ದೇವರು ಶಾಂತಿ ನೀಡಲಿ

-ಡಿ.ಕೆ ಶಿವಕುಮಾರ್ ಡಿಸಿಎಂ

### ಮಾಜಿ ಸಿಎಂ ವಿಜಯ್ ರೂಪಾನಿ ಸಾವು



ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ವಿಮಾನ ದುರಂತದಲ್ಲಿ ಮೃತಪಟ್ಟಿದ್ದಾರೆ. ಲಂಡನ್‌ಗೆ ಪ್ರಯಾಣಿಸುತ್ತಿದ್ದ ವಿಜಯ್ ರೂಪಾನಿ 12ನೇ ಸೀಟಿನಲ್ಲಿ ಕುಳಿತುಕೊಂಡಿದ್ದರು. ಲಂಡನ್‌ನಲ್ಲಿರುವ ಮಗಳ ಮನೆಗೆ ತೆರಳಲು ರೂಪಾನಿ ವಿಮಾನ ಹತ್ತಿದ್ದರು. ಇಬ್ಬರು ಪೈಲಟ್, 10 ಸಿಬ್ಬಂದಿ ಸೇರಿ ಒಟ್ಟು 242 ಮಂದಿ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ಈಗಾಗಲೇ 130ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು ಸಾವಿನ ಸಂಖ್ಯೆ ಕ್ಷಣ ಕ್ಷಣಕ್ಕೂ ಏರಿಕೆ ಆಗುತ್ತಿದೆ. ಆಸ್ಪತ್ರೆಗೆ ಸೇರಿದ ಹಲವು ಮಂದಿಯ ಸ್ಥಿತಿ ಗಂಭೀರವಾಗಿದೆ. ವಿಮಾನ ಮೆಡಿಕಲ್ ಕಾಲೇಜಿನ ಹಾಸ್ಟೆಲಿನ ಅಡುಗೆ ಮನೆ ಮೇಲೆ ಬಿದ್ದಿದೆ. ಮಧ್ಯಾಹ್ನ ವಿದ್ಯಾರ್ಥಿಗಳು ಊಟ ಮಾಡುವ ಸಮಯದಲ್ಲೇ ಪತನ ಗೊಂಡಿರುವ ಕಾರಣ ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ.

### ಪತನಗೊಂಡ ವಿಮಾನ ಅವ್ಯವಸ್ಥೆಯಿಂದ ಕೂಡಿತ್ತು

ದುರಂತಕ್ಕೀಡಾದ ಏರ್ ಇಂಡಿಯಾ ವಿಮಾನ ಟೇಕಾಫ್ ಆಗುವ ಮೊದಲೇ ಸರಿ ಇರಲಿಲ್ಲ, ಅವ್ಯವಸ್ಥೆಯಿಂದ ಕೂಡಿತ್ತು ಎಂದು ಪ್ರಯಾಣಿಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆಕಾಶ್ ವತ್ಸಾ ಎಂಬವರು ದೆಹಲಿಯಿಂದ ಅಹಮದಾಬಾದ್‌ಗೆ ಎಐ-171 ವಿಮಾನದಲ್ಲಿ ಬಂದಿದ್ದರು. ತಮ್ಮ ಪ್ರಯಾಣದ ವೇಳೆ ಕೆಟ್ಟ ಅನುಭವ ಆಗಿತ್ತು ಎಂದು ಅವರು ಎಕ್ಸ್‌ನಲ್ಲಿ ಬರೆದು ಸಿಟ್ಟು ಹೊರಹಾಕಿದ್ದರು. ಅಹಮದಾಬಾದ್ ನಲ್ಲಿ ಗುರುವಾರ ಮಧ್ಯಾಹ್ನ ಪತನಗೊಂಡ ಏರ್ ಇಂಡಿಯಾ ವಿಮಾನದಲ್ಲಿ 2 ಗಂಟೆ ಮೊದಲು ಪ್ರಯಾಣಿಸಿದ್ದೆ. ಅಲ್ಲಿನ ಅವ್ಯವಸ್ಥೆಯ ದೃಶ್ಯಗಳನ್ನು ಸೆರೆಹಿಡಿದು ಏರ್ ಇಂಡಿಯಾಗೆ ಟ್ವೀಟ್ ಮಾಡಬೇಕು ಎಂದುಕೊಂಡಿದ್ದೆ. ಅಷ್ಟರಲ್ಲೇ ವಿಮಾನ ಪತನಗೊಂಡಿದೆ ಎಂದಿದ್ದಾರೆ. ವಿಮಾನ ಕೆಲವೊಂದು ಅವ್ಯವಸ್ಥೆಯನ್ನು ನಾನು ಹಂಚಿಕೊಂಡಿದ್ದೇನೆ.



### ನನ್ನ ಸುತ್ತಲೂ ಮೃತದೇಹಗಳಿದ್ದವು ಎಂದ ವಿಶ್ವಾಸ್

ಟೇಕ್ ಆಫ್ ಆದ 30 ಸೆಕೆಂಡುಗಳ ನಂತರ, ಜೋರಾದ ಶಬ್ದ ಕೇಳಿಸಿತು. ತಕ್ಷಣವೇ ವಿಮಾನವು ಪತನಗೊಂಡಿತು. ಎಲ್ಲಾವೂ ಕ್ಷಣಾರ್ಧದಲ್ಲಿ ಸಂಭವಿಸಿತು . ನಾನು ಎದ್ದಾಗ, ನನ್ನ ಸುತ್ತಲೂ ಮೃತದೇಹಗಳು ಬಿದ್ದಿದ್ದವು. ನಾನು ಹೆದರಿದೆ. ಎದ್ದು ಓಡಿದೆ. ವಿಮಾನದ ತುಂಡುಗಳು ಎಲ್ಲೆಡೆ ಬಿದ್ದಿದ್ದವು. ಯಾರೋ ನನ್ನನ್ನು ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದುಕೊಂಡ ಬಂದರು ಎಂದು ವಿಶ್ವಾಸ್ ಕುಮಾರ್ ರಮೇಶ್ ಹೇಳಿದ್ದಾರೆ. ವಿಶ್ವಾಸ್ ಕಳೆದ 20 ವರ್ಷಗಳಿಂದ ಲಂಡನ್‌ನಲ್ಲಿ ವಾಸಿಸುತ್ತಿದ್ದಾರೆ. ಅವರ ಪತ್ನಿ ಮತ್ತು ಮಗು ಕೂಡ ಲಂಡನ್ ನಲ್ಲಿಯೇ ಇದ್ದಾರೆ. ವಿಮಾನದಲ್ಲಿ ತಮ್ಮ ಸಹೋದರ ಅಜಯ್ ಬೇರೆ ಸಾಲಿನಲ್ಲಿ ಕುಳಿತಿದ್ದರು. ನಾವು ದಿಯುಗೆ ಭೇಟಿ ನೀಡಿದ್ದೆವು. ಅವರು ನನ್ನೊಂದಿಗೆ ಪ್ರಯಾಣಿಸುತ್ತಿದ್ದರು. ಆದರೆ ಈಗ ಅವರನ್ನು ಹುಡುಕಲು ಸಾಧ್ಯವಾಗುತ್ತಿಲ್ಲ. ದಯವಿಟ್ಟು ಅವರನ್ನು ಹುಡುಕಲು ಸಹಾಯ ಮಾಡಿ ಎಂದು ವಿಶ್ವಾಶ್ ಆಸ್ಪತ್ರೆಯಲ್ಲಿ ಮನವಿ ಮಾಡುತ್ತಿದ್ದರು.




## ಅದ್ದೂರಿ ದಸರೆಗೆ 41 ಕೋಟಿ ವೆಚ್ಚ!: 8 ತಿಂಗಳ ಬಳಿಕ ಲೆಕ್ಕ ಕೊಟ್ಟ ಜಿಲ್ಲಾಡಳಿತ

• ಉದಯವಾಹಿನಿ, ಮೈಸೂರು

ಹೋದ ವರ್ಷ ವಿಜೃಂಭಣೆಯಿಂದ ನಡೆಸಲಾದ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಬರೋಬ್ಬರಿ 41.69 ಕೋಟಿ ಖರ್ಚು ಮಾಡಲಾಗಿದೆ.

ಜಿಲ್ಲಾಡಳಿತದಿಂದ ಇದೇ ಮೊದಲ ಬಾರಿಗೆ ಬಹಳ ವಿಳಂಬವಾಗಿ ಅಂದರೆ, ಎಂಟು ತಿಂಗಳ ನಂತರ ಖರ್ಚು-ವೆಚ್ಚದ ಮಾಹಿತಿಯನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರದಿಂದ 25 ಕೋಟಿ ಅನುದಾನ ನೀಡಲಾಗಿತ್ತು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 10 ಕೋಟಿ ಬಂದಿತ್ತು. ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಂದ



**ಉನ್ನತ ಮಟ್ಟದ ಸಮಿತಿ ಸಭೆ**

ಪ್ರಾಯೋಜಕತ್ವದ ಮೂಲಕ 2.15 ಕೋಟಿ ಸಂಗ್ರಹವಾಗಿತ್ತು. ಯುವದಸರಾ, ಮೆರವಣಿಗೆ, ಪಂಜಿನ ಕವಾಯತು ಟಿಕೆಟ್‌ಗಳು ಮತ್ತು 'ಗೋಲ್ಡ್ ಕಾರ್ಡ್'ಗಳ ಮಾರಾಟದಿಂದ 4.76 ಕೋಟಿ ಸೇರಿದಂತೆ ಒಟ್ಟು 41.91 ಕೋಟಿ ಸಂಗ್ರಹವಾಗಿತ್ತು ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

18 ಉಪ ಸಮಿತಿಗಳಿಗೆ 31.27 ಕೋಟಿ ಬಿಡುಗಡೆ ಮಾಡಲಾಗಿತ್ತು. ಉತ್ಸವಕ್ಕೆ ಅಗತ್ಯವಾದ ಸಿವಿಲ್ ಹಾಗೂ ವಿದ್ಯುತ್ ಕಾಮಗಾರಿಗಳಿಗೆ 5.91 ಕೋಟಿ ಕೊಡಲಾಗಿತ್ತು. ಚಾಮರಾಜನಗರಕ್ಕೆ 1.75 ಕೋಟಿ, ಮಂಡ್ಯಕ್ಕೆ 2 ಕೋಟಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ 75 ಲಕ್ಷ ಹಾಗೂ 'ಪ್ರಭುತ್ವ ಮತ್ತು ಸಂವಿಧಾನದ ಆಶಯ' ಕುರಿತು ರಾಜ್ಯಮಟ್ಟದ ಕಾರ್ಯಾಗಾರ ಆಯೋಜನೆಗೆ ಹುಣಸೂರು ಉಪವಿಭಾಗಾಧಿಕಾರಿಗೆ 1 ಲಕ್ಷ ನೀಡಲಾಗಿತ್ತು ಎಂದು ತಿಳಿಸಿದೆ. ಈ ಬಾರಿಯ ದಸರಾ ಮಹೋತ್ಸವಕ್ಕೆ ಸಿದ್ಧತೆ ಆರಂಭಿಸಲು ಸಿಎಂ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ಸಭೆಯನ್ನು ಜೂನ್ 26ರಂದು ವಿಧಾನಸೌಧದಲ್ಲಿ ನಿಗದಿಪಡಿಸಲಾಗಿದೆ. ಇಲ್ಲಿನ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

## ಜಾತಿ ಗಣತಿ ಮರು ಸಮೀಕ್ಷೆ: 165 ಕೋಟಿ ಖರ್ಚು ನೀರಲ್ಲಿ ಹೋಮ!

### ● ಕಾಂತರಾಜು ದತ್ತಾಂಶ ಹಾಗೂ ಜಯಪ್ರಕಾಶ್ ಹೆಗ್ಡೆ ಜಾತಿ ಸಮೀಕ್ಷೆ ರದ್ದು ● ತೆರಿಗೆದಾರರ ತಲೆಗೆ ಮತ್ತಷ್ಟು ಹೊರೆ

• ಉದಯವಾಹಿನಿ, ಬೆಂಗಳೂರು

ಸಾಕಷ್ಟು ನಿರೀಕ್ಷೆ ಹಾಗೂ ಕುತೂಹಲ ಸೃಷ್ಟಿಸಿದ್ದ ಜಾತಿ ಗಣತಿ ವರದಿಯ ಬಗ್ಗೆ ರಾಜ್ಯ ಕಾಂಗ್ರೇಸ್ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಾತಿ ಗಣತಿ ಹೊಸ ಸಮೀಕ್ಷೆಯನ್ನು ನಡೆಸಲು ತೀರ್ಮಾನ ಮಾಡಲಾಗಿದೆ. ಈ ಮೂಲಕ ಕಾಂತರಾಜು ದತ್ತಾಂಶ ಹಾಗೂ ಜಯಪ್ರಕಾಶ್ ಹೆಗ್ಡೆ ಅವರು ನೀಡಿರುವ ವರದಿ ಕಸದ ಬುಟ್ಟಿಗೆ ಬಿದ್ದಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆದಿತ್ತು. ಸಂಪುಟ ಸಭೆಯಲ್ಲಿ ಜಾತಿ ಗಣತಿ ಮರು ಸಮೀಕ್ಷೆಯ ಬಗ್ಗೆ ಏನಾದ್ರೂ ತೀರ್ಮಾನ ಆಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಪೂರ್ಣ ಪ್ರಮಾಣದಲ್ಲಿ ಮರು ಸಮೀಕ್ಷೆಗೆ ನಿರ್ಧಾರ ಕೈಗೊಳ್ಳಲಾಗಿದೆ. ಈ ಮೂಲಕ 10 ವರ್ಷಗಳ ಹಿಂದಿನ ಸಮೀಕ್ಷೆ ನೆನೆಗುದಿಗೆ ಬಿದ್ದಿದೆ.

**ಸಮರ್ಥನೆ ಏನು:** ಜಾತಿ ಗಣತಿ ಮರು ಸಮೀಕ್ಷೆಗೆ ಸರ್ಕಾರದ ತನ್ನದೇ ಆದ ಸಮರ್ಥನೆಯನ್ನು ನೀಡಿದೆ. ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ- 1995ರ ಸೆಕ್ಷನ್ 9 (2) ರಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ, ಸಮಸ್ಯೆಗಳ ಬಗ್ಗೆ ಸಮೀಕ್ಷೆ ನಡೆಸಬೇಕು ಎಂದು ಹೇಳಿದೆ.



**165 ಕೋಟಿ ಖರ್ಚು ನೀರು ಪಾಲು!**

ಜಾತಿ ಗಣತಿ ವರದಿಯನ್ನು ಸಿದ್ಧಪಡಿಸಲು ಒಟ್ಟು 165 ಕೋಟಿ ವೆಚ್ಚ ಮಾಡಲಾಗಿತ್ತು. ಆದರೆ ಇವೆಲ್ಲವೂ ಇದೀಗ ನೀರಿನಲ್ಲಿ ಮಾಡಿದ ಹೋಮದಂತಾಗಿದೆ. ಇದೀಗ ಹೊಸತಾಗಿ ಮಾಡಬೇಕಾಗಿರುವ ಸಮೀಕ್ಷೆಗೆ ಎಷ್ಟು ಕೋಟಿ ಖರ್ಚು ಆಗಲಿದೆ ಎಂಬ ಮಾಹಿತಿಯನ್ನು ಸಿಎಂ ಸಿದ್ದರಾಮಯ್ಯ ನೀಡಿಲ್ಲ. ಆದರೆ 90 ದಿನಗಳಲ್ಲಿ ಸಮೀಕ್ಷೆ ನಡೆಸಿ ವರದಿ ಕೊಡಲು ಸೂಚಿಸಲಾಗುವುದು ಎಂದಿದ್ದಾರೆ. ಒಟ್ಟಿನಲ್ಲಿ ಜಾತಿ ಗಣತಿ ವರದಿ ವಿಚಾರವಾಗಿ ಕಾಂಗ್ರೇಸ್ ಸರ್ಕಾರ ಹಿನ್ನಡೆಯನ್ನು ಅನುಭವಿಸಿದೆ. ಸಿಎಂ, ಡಿಸಿಎಂ ಹಾಗೂ ಸಚಿವರ ಹೇಳಿಕೆಗಳು ಗೊಂದಲ ಸೃಷ್ಟಿಸಿವೆ. ಮುಂದಿನ ಸಮೀಕ್ಷೆಯಲ್ಲಾದರೂ ಮತ್ತೆ ಗೊಂದಲ ಸೃಷ್ಟಿಯಾಗದಂತೆ ಸರ್ಕಾರ ನೋಡಿಕೊಳ್ಳುತ್ತಾ ಎಂಬುವುದು ಕುತೂಹಲಕ್ಕೆ ಕಾರಣವಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾಡಬೇಕು ಎಂದು ಸೆಕ್ಷನ್ (3) ರಲ್ಲಿ ಹೇಳಿದೆ. ಸೆಕ್ಷನ್ 9 (1) ರ ಅನ್ವಯ ಅರ್ಜಿಗಳನ್ನು ಪರಿಶೀಲಿಸಿ ಹಿಂದುಳಿದ ವರ್ಗಗಳಿಗೆ ಸೇರಿಸುವ ಅಥವಾ ತೆಗೆದು ಹಾಕುವ ಅಧಿಕಾರ ಆಯೋಗಕ್ಕೆ ಇರುತ್ತದೆ ಎಂದು ಹೇಳಲಾಗಿದೆ. ಕಾಂತರಾಜು ನೇತೃತ್ವದ ಆಯೋಗ ಸಮೀಕ್ಷೆ ಮಾಡಿ ಹತ್ತು ವರ್ಷಗಳು ಕಳೆದಿದೆ. ಹತ್ತು ವರ್ಷಗಳಾದ ನಂತರ ಹೊಸದಾಗಿ ಸಮೀಕ್ಷೆ ನಡೆಸಬೇಕೆಂದು ಸೆಕ್ಷನ್ 11(1) ರಲ್ಲಿ ಹೇಳಲಾಗಿದ್ದು ಅದರ ಪ್ರಕಾರ ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಅವರು ಸಂಪುಟದ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

**ಬಿಜೆಪಿ ಮಾಡಿದ್ದ ಆರೋಪ ಒಪ್ಪಿಕೊಂಡಂತೆ ಅಲ್ಲವೇ:** ಜಾತಿ ಗಣತಿ ಸಮೀಕ್ಷೆಗೆ 10 ವರ್ಷಗಳಾಗಿವೆ. ಹಾಗಿರುವ ರಾಜ್ಯದ ಸ್ಥಿತಿಗತಿಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಹಾಗಾಗಿ ಜಾತಿ ಗಣತಿ ವರದಿಯ ದತ್ತಾಂಶಗಳು ಸರಿಯಾಗಿಲ್ಲ ಎಂದು ವಿರೋಧ ಪಕ್ಷಗಳು ವಾದಿಸಿದ್ದವು. ಆದರೆ ಇದಕ್ಕೆ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು. ಕಾಂತರಾಜು ಆಯೋಗದ ದತ್ತಾಂಶಗಳನ್ನು ಸಮರ್ಥಿಸಿಕೊಂಡಿತ್ತು. ಆದರೆ ಇದೀಗ ಬಿಜೆಪಿ ಮತ್ತು ಜಾತಿ ಗಣತಿ ವಿರೋಧ ಮಾಡಿದವರ ವಾದಕ್ಕೆ ಸರ್ಕಾರ ಅಧಿಕೃತವಾಗಿ ಒಪ್ಪಿಗೆ ಸೂಚಿಸಿದಂತಾಗಿದೆ. ಕಾನೂನಿನಲ್ಲಿರುವ ಅವಕಾಶವನ್ನು ಮುಂದಿಟ್ಟುಕೊಂಡು ಮರು ಸಮೀಕ್ಷೆ ನಡೆಸಲು ತೀರ್ಮಾನ ಮಾಡಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,928/Gram24ct ₹9,100/Gram22ct ಬೆಳ್ಳಿ: ₹108.90/Gram

# ಜುಲೈ 7ರಂದು ಪೌರಡಳಿತ ನಿರ್ದೇಶನಾಲಯದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಪಾಲಿಕೆ ಅಧಿಕಾರಿಗಳು ನೌಕರರು ತಮ್ಮ ವಿವಿಧ ನ್ಯಾಯ ಸಮ್ಮತ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಜು.7ರಿಂದ ಉಗ್ರ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದಾರೆ.

ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತಿತರ ಹಲವರಿಗೆ ಹಲವು ಬಾರಿ ಮನವಿ ಪತ್ರ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷ ಅಮೃತ್ ರಾಜ್ ತಿಳಿಸಿದ್ದಾರೆ.

ಸಿಎಂ, ಡಿಸಿಎಂ ಅಲ್ಲದೆ ನಗರಾಭಿವೃದ್ಧಿ ಸಚಿವರು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಪೌರಾಡಳಿತ ಇಲಾಖೆ ಮುಖ್ಯಸ್ಥರುಗಳಿಗೂ ಮನವಿ ನೀಡಿದ್ದರೂ ನಮಗೆ ಸಕಾರಾತ್ಮಕ ಉತ್ತರ ಸಿಗದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿರುವ ಈ ಪ್ರತಿಭಟನೆಗೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಅಧಿಕಾರಿಗಳು ಮತ್ತು ನೌಕರರು



ಕೈ ಜೋಡಿಸಿ ಹೋರಾಟ ಯಶಸ್ವಿಯಾಗಲು ಸಹಕರಿಸಬೇಕು ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.

**ಪ್ರಮುಖ ಬೇಡಿಕೆಗಳು;** 7ನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರಿಗೆ ವಿಸ್ತರಿಸಿದಂತೆ, ಮಹಾನಗರ ಪಾಲಿಕೆ ಅಧಿಕಾರಿ ನೌಕರರಿಗೆ ಯಥಾವತ್ತಾಗಿ ಸರ್ಕಾರದ ಆರ್ಥಿಕ ಇಲಾಖೆಯಿಂದಲೇ ಅನುದಾನವನ್ನು ಬಿಡುಗಡೆ ಮಾಡುವುದು. ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ ಆರೋಗ್ಯ ಸಂಜೀವಿನಿ ಯೋಜನೆಯನ್ನು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ, ನೌಕರರಿಗೂ ಸಹ ಜಾರಿ ಮಾಡುವುದು. ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ವೃಂದ, ನೇಮಕಾತಿ ನಿಯಮಾವಳಿಯ ಕರಡು ತಿದ್ದುಪಡಿಯನ್ನು ಕೂಡಲೇ ಪ್ರಚಾರ ಪಡಿಸುವುದು. ಪೌರಾಡಳಿತ ನಿರ್ದೇಶಾನಾಲಯದಲ್ಲಿ ಪಾಲಿಕೆ ಅಧಿಕಾರಿ ನೌಕರರ ಆಡಳಿತ /ಸೇವಾ ಸೌಲಭ್ಯವಾದ ಮುಂಬಡ್ತಿ ವೈದ್ಯಕೀಯ ವೆಚ್ಚಮರುಪಾವತಿ, ಪರೀಕ್ಷಾರ್ಥ ಅವಧಿ ಘೋಷಿಸಲು, ಮತ್ತು ವರ್ಗಾವಣೆ ಸಂದರ್ಭದಲ್ಲಿ ನೀರಿಕ್ಷಣಾ ಅವಧಿಯಲ್ಲಿರುವ ಅಧಿಕಾರಿನೌಕರರಿಗೆ ನಿಯೋಜಿಸಲು ಇಲ್ಲವೆ ವರ್ಗಾಹಿಸಲು, ಸದರಿ ಅವಧಿಯಲ್ಲಿ ವೇತನ ಮಂಜೂರಾತಿಗಾಗಿ ಮಾನ್ಯ ನಿರ್ದೇಶಕರು ಪೌರಡಳಿತ ನಿರ್ದೇಶನಾಲಯ ಆಡಳಿತ ಶಾಖೆಯಲ್ಲಿ ಕೆಲವು ಅಧಿಕಾರಿ ನೌಕರರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದು, ಹಣ ನೀಡದ ಅಧಿಕಾರಿ ನೌಕರರಿಗೆ ಮನಸಿಕ ಹಿಂಸೆ ನೀಡುತ್ತಿರುವುದನ್ನು ತಪ್ಪಿಸುವುದು ಸೇರಿದಂತೆ ನಮ್ಮ ಎಲ್ಲಾ ನ್ಯಾಯಯುತ ಬೇಡಿಕೆಗಳನ್ನು ಹೋರಾಟದ ಮೂಲಕ ಪಡೆಯಲು ಅನಿವಾರ್ಯವಾಗಿರುವುದರಿಂದ ನಾವು ಈ ತೀರ್ಮಾನ ಕೈಗೊಂಡಿದ್ದೇವೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ಹರಿದಾಸ ಮಂಜರಿ

• **ಉದಯವಾಹಿನಿ, ಬೆಂಗಳೂರು**

ತ್ಯಾಗರಾಜನಗರದ ಶ್ರೀ ಕಂಭದ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಜೂನ್ 13, ಶುಕ್ರವಾರ ಸಂಜೆ 6-30ಕ್ಕೆ ಡಾ|| ಶ್ರೀಮತಿ ಲಾವಣ್ಯ ವೆಂಕಟೇಶ್ ಮತ್ತು ಶ್ರೀ ಕಿರಣ್ ರವರಿಂದ ಹರಿದಾಸ ಮಂಜರಿ ಗಾಯನ ಕಾರ್ಯಕ್ರಮ. ವಾದ್ಯ ಸಹಕಾರ



ಶ್ರೀ ಅಮಿತ್ ಶರ್ಮಾ (ಕೀ-ಬೋರ್ಡ್), ಶ್ರೀ ಸರ್ವೋತ್ತಮ (ತಬಲಾ) ಸ್ಥಳ : ಶ್ರೀ ಕಂಭದ ನರಸಿಂಹಸ್ವಾಮಿ ದೇವಸ್ಥಾನ, ವಜ್ರಕ್ಷೇತ್ರ, 152/1, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ತ್ಯಾಗರಾಜನಗರ 3ನೇ ಬ್ಲಾಕ್, ಬೆಂಗಳೂರು-28

## ಹೈಕೋರ್ಟ್ ಜಾಮೀನು ಮಂಜೂರು, ಪಾಸ್‌ಪೋರ್ಟ್ ಒಪ್ಪಿಸಲು ಸೂಚನೆ

• **ಉದಯವಾಹಿನಿ, ಬೆಂಗಳೂರು**

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಜೂನ್ 4ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನರು ಸಾವಿಗೀಡಾದ ಘಟನೆಗೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿದ್ದ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಸೇರಿದಂತೆ ನಾಲ್ವರ ಬಿಡುಗಡೆ ಮಾಡುವಂತೆ ಕರ್ನಾಟಕ ಹೈಕೋರ್ಟ್ ಆದೇಶಿಸಿದೆ. ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ತಮ್ಮನ್ನು ಬಿಡುಗಡೆ ಮಾಡುವಂತೆ ಕೋರಿ ಆರ್‌ಸಿಬಿ ಮತ್ತು ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಪದಾಧಿಕಾರಿ ಗಳು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಪರ ಅವರ ಪತ್ನಿ ಮಾಳವಿಕಾ ನಾಯಕ್, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಡೆಟ್ ಕಂಪನಿ ನಿರ್ದೇಶಕ ಆರ್ ಸುನೀಲ್ ಮ್ಯಾಥ್ಯೂ ಪರವಾಗಿ ಅವರ ಪತ್ನಿ ರೋಷನಿ ಸುನೀಲ್, ಎಸ್ ಕಿರಣ್ ಕುಮಾರ್ ಪರವಾಗಿ ಅವರ ಪತ್ನಿ ಕೆ ನಂದಿನಿ ಮತ್ತು ಶಮಂತ್ ಎನ್‌ಪಿ ಮಾವಿನಕೆರೆ ಅವರ ತಾಯಿ ನಿರ್ಮಲಾ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್‌ಆರ್ ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ಪೀಠ, ಬಂಧಿತರಿಗೆ ಷರತ್ತುಬದ್ಧ ಮಧ್ಯಂತರ ಜಾಮೀನು ನೀಡಿದ್ದು, ಅರ್ಜಿದಾರರು ತಮ್ಮ ಪಾಸ್‌ಪೋರ್ಟ್ ಅನ್ನು ಒಪ್ಪಿಸುವಂತೆ ಸೂಚಿಸಿದೆ.

## ಕೋವಿಡ್ ಪರೀಕ್ಷೆ ಹೆಸರಿನಲ್ಲಿ ದುಬಾರಿ ಶುಲ್ಕ ವಿಧಿಸಿದರೆ ಸೂಕ್ತ ಕ್ರಮ

• **ಉದಯವಾಹಿನಿ, ಬೆಂಗಳೂರು**

ಕೋವಿಡ್ ಪರೀಕ್ಷೆ ಹೆಸರಿನಲ್ಲಿ ಖಾಸಗಿ ಆಸ್ಪತ್ರೆಗಳು ದುಬಾರಿ ಶುಲ್ಕ ವಿಧಿಸುತ್ತಿರುವ ದೂರುಗಳು ಬಂದರೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಚ್ಚರಿಕೆ ನೀಡಿದರು. ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿ ಕುರಿತು ಮುಖ್ಯಮಂತ್ರಿಗಳು ಅಧಿಕಾರಿಗಳೊಂದಿಗೆ ಬುಧವಾರ ಸಂಜೆ ಪರಿಶೀಲನಾ ಸಭೆ ನಡೆಸಿದರು. ಈ ವೇಳೆ ಮಾತನಾಡಿದ ಮುಖ್ಯಮಂತ್ರಿಗಳು, ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಈವರೆಗೆ 11 ಸಾವು ಸಂಭವಿಸಿವೆ. ಆದರೂ ಇದರಲ್ಲಿ 10 ಪ್ರಕರಣಗಳಲ್ಲಿ ಕೋವಿಡ್ ಕಾರಣದಿಂದ ಸಾವು ಸಂಭವಿಸಿಲ್ಲ. ವಿವಿಧ ರೀತಿಯ ದೀರ್ಘಕಾಲದ ಅನಾರೋಗ್ಯಕ್ಕೆ ತುತ್ತಾಗಿದ್ದ ರೋಗಿಗಳು ಸಾವನ್ನಪ್ಪಿದ್ದು, ಸಾವು ಸಂಭವಿಸಿದಾಗ ಅವರಿಗೆ ಕೊರೋನಾ ಪಾಸಿಟಿವ್ ಇತ್ತು ಅಷ್ಟೇ ಎಂದು ಹೇಳಿದರು. ಮತ್ತೊಂದು ಡೆತ್ ಆಡಿಟ್ ವರದಿ ಬರಬೇಕಾಗಿದೆ ಎಂದು ತಿಳಿಸಿದ್ದೀರಿ. ಹೀಗಾಗಿ ಪ್ರತಿ ಬಾರಿ ಕೊರೋನಾ ಸಾವು ಆದಾಗಲೂ ಅದು ಕೊರೋನಾ ಸಾವೇ ಅಥವಾ ಅಲ್ಲವೇ ಎಂಬುದನ್ನು ಸ್ಪಷ್ಟವಾಗಿ ಜನರಿಗೆ ತಿಳಿಸಬೇಕು. ಜನರಲ್ಲಿ ಇರುವ ಆತಂಕವನ್ನು ಕಡಿಮೆ ಮಾಡಬೇಕು ಎಂದು ಸೂಚಿಸಿದರು. ರಾಜ್ಯದಲ್ಲಿ ಕೋವಿಡ್ ಪರೀಕ್ಷೆಯನ್ನು ಹೆಚ್ಚಿಸಲಾಗಿದ್ದು, ಪ್ರತಿದಿನ ಸರಾಸರಿ 500 ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ ಒಟ್ಟಾರೆಯಾಗಿ, ಕಳೆದ 10 ದಿನಗಳಲ್ಲಿ 5,000ಕ್ಕೂ ಹೆಚ್ಚು ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಇದರ ಪರಿಣಾಮವಾಗಿ 862 ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ. ಇದೂವರೆಗೆ 11 ಸಾವು ಸಂಭವಿಸಿದೆ. ಆದರೂ ಇದರಲ್ಲಿ 10 ಪ್ರಕರಣಗಳಲ್ಲಿ ಕೋವಿಡ್ ಕಾರಣದಿಂದ ಸಾವು ಸಂಭವಿಸಿಲ್ಲ. ವಿವಿಧ ರೀತಿಯ ಅನಾರೋಗ್ಯಕ್ಕೆ ತುತ್ತಾಗಿದ್ದ ರೋಗಿಗಳು ಈ ಪ್ರಕರಣಗಳಲ್ಲಿ ಸಾವನ್ನಪ್ಪಿದ್ದಾರೆ. ಒಂದು ಪ್ರಕರಣದ ಆಡಿಟ್ ವರದಿ ಬರಬೇಕಾಗಿದೆ. ಕೋವಿಡ್ ಬಗ್ಗೆ ಯಾರೂ ಅನಗತ್ಯ ಗೊಂದಲ ಮೂಡಿಸಬಾರದು. ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಪ್ರಕರಣಗಳನ್ನು ನಿಭಾಯಿಸಲು ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎಂಬ ಸೂಚನೆ ನೀಡಿದರು.

## ಅನಧಿಕೃತ ಕಟ್ಟಡಗಳ ಗುರುತಿಸಿ, ಕೂಡಲೇ ತೆರವುಗೊಳಿಸಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಅನಧಿಕೃತ ಕಟ್ಟಡಗಳ ಗುರುತಿಸಿ ಕೂಡಲೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಸೂಚನೆ ನೀಡಿದ್ದಾರೆ. ಬಿಬಿಎಂಪಿ ಮುಖ್ಯ ಆಯುಕ್ತರು ಮಹದೇವಪುರ ವ್ಯಾಪ್ತಿಯ ನಲ್ಲೂರು ಮೆಟ್ರೋ ಹಳ್ಳಿ ಸ್ಟೇಷನ್ ನಿಂದ ನಲ್ಲೂರಹಳ್ಳಿ ಬೋರ್ ವೆಲ್ ರಸ್ತೆ, ವೈಟ್ ಫೀಲ್ಡ್ ಮುಖ್ಯರಸ್ತೆವರೆಗೆ ಬುಧವಾರ ಪರಿಶೀಲನೆ ನಡೆಸಿದರು, ನಲ್ಲೂರಹಳ್ಳಿ ಕಾಲೋನಿಯ 3ನೇ ಅಡ್ಡರಸ್ತೆ, 7ನೇ ಅಡ್ಡ ರಸ್ತೆಯಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ನಿಯಮಾನುಸಾರ ಅನಧಿಕೃತ ಕಟ್ಟಡದ ಭಾಗವನ್ನು ತ್ವರಿತವಾಗಿ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಬಳಿಕ ನಲ್ಲೂರಹಳ್ಳಿ ಮೆಟ್ರೋ ಸ್ಟೇಷನ್ ನಿಂದ ನಲ್ಲೂರಹಳ್ಳಿ ಬೋರ್ವೆಲ್ ರಸ್ತೆ ಮುಖಾಂತರ ವೈಟ್ ಫೀಲ್ಡ್ ಮುಖ್ಯ ರಸ್ತೆವರೆಗೆ ರಸ್ತೆ ಅಗಲೀಕರಣಕ್ಕೆ ಸೂಚಿಸಿದರು. ಡಾಡ್ಸ್ ವರ್ತ್ ಎನ್‌ಕ್ಲೇವ್ ರೋಡ್ ಬಳಿ ಚರಂಡಿಯ ನೀರು ರಸ್ತೆಗೆ ಬರುತ್ತಿದ್ದು, ಪರಿಶೀಲನೆ ನಡೆಸಿ ಕಟ್ಟಡದ ಮಾಲೀಕರಿಗೆ ನೋಟಿಸ್ ನೀಡಲು, ಕಟ್ಟಡ ಮಾಲೀಕರಿಗೆ ದಂಡ ವಿಧಿಸಲು ನಿರ್ದೇಶಿಸಿದರು. ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳನ್ನು ನಿಲ್ಲಿಸಿ ರುವುದು ಕಂಡು ಬಂದ ಹಿನ್ನೆಲೆಯಲ್ಲಿ ವಾಹನ ಗಳಮಾಲೀಕರಿಗೆ ದಂಡ ವಿಧಿಸಿತೆರವು ಮಾಡುವಂತೆ ಸಂಚಾರಿ ಪೊಲೀಸರಿಗೆ ತಿಳಿಸಿದರು. ನಲ್ಲೂರಹಳ್ಳ ರಾಜಕಾಲುವೆಗೆ ತಡೆಗೋಡೆ ನಿರ್ಮಿಸುವ ಅಗತ್ಯವಿದ್ದು, ತ್ವರಿತವಾಗಿ ಸೂಕ್ತ ಕ್ರಮ ಕಗೊಂಡು ನಾಲಾ ಪಕ್ಕದಲ್ಲಿ ನಿರ್ಮಿಸಿರುವ ಅಕ್ರಮ ಕಟ್ಟಡ ತೆರವುಗೊಳಿಸಿ, ಬಫರ್‌ಜೋನ್‌ನಲ್ಲಿ ಯಾವುದೇ ಕಟ್ಟಡಗಳ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ನೀಡದಂತೆ ಸೂಚಿಸಿದರು.

# ರೈತರ ಸಂಕಷ್ಟಕ್ಕೆ ರಾಜ್ಯ ಸರ್ಕಾರ ಸ್ಪಂದನೆ

### ಪೂರ್ವ ಸಮಾಲೋಚನೆ ಅಥವಾ ಸಮನ್ವಯವಿಲ್ಲದೆ ತೆಗೆದುಕೊಳ್ಳುವ ಈ ರೀತಿಯ ಕ್ರಮ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದ ತೋತಾಪುರಿ ಮಾವು ಖರೀದಿ ನಿಷೇಧಿಸಿ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲಾಡಳಿತ ಹೊರಡಿಸಿದ್ದ ಆದೇಶ ಕೋಲಾರ ಮತ್ತು ಚಿಕ್ಕಬಳ್ಳಾಪುರದ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದು, ಇದರ ಬೆನ್ನಲ್ಲೇ ಮಧ್ಯ ಪ್ರವೇಶ ಮಾಡಿದ್ದ ಕರ್ನಾಟಕ ಸರ್ಕಾರದ ಆಂಧ್ರಪ್ರದೇಶ ರಾಜ್ಯಕ್ಕೆ ಪತ್ರ ಬರೆದಿದ್ದು, ನಿಷೇಧ ಆದೇಶ ಹಿಂಪಡೆಯುವಂತೆ ಮನವಿ ಮಾಡಿದೆ.



ಉದಯವಾಹಿನಿ ಚಿತ್ರ

ಸಿದ್ದರಾಮಯ್ಯ ಅವರು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಪತ್ರ ಬರೆದಿದ್ದು, ಚಿತ್ತೂರು ಜಿಲ್ಲಾಡಳಿತವು ಕರ್ನಾಟಕದ ತೋತಾಪುರಿ ಮಾವು ಖರೀದಿ ಮೇಲೆ ಹೇರಿದ್ದ ನಿರ್ಬಂಧವನ್ನು ತೆರವುಗೊಳಿಸುವಂತೆ ಜಿಲ್ಲಾಡಳಿತಕ್ಕೆ ಸೂಚಿಸಬೇಕು ಎಂದು ಮನವಿ ಮಾಡಿದ್ದಾರೆ. ಇತರ ರಾಜ್ಯಗಳಿಂದ ತೋತಾಪುರಿ ಮಾವಿನ ಹಣ್ಣುಗಳನ್ನು ಜಿಲ್ಲೆಗೆ ಪ್ರವೇಶಿಸುವುದನ್ನು ನಿಷೇಧಿಸಿ ಚಿತ್ತೂರು ಜಿಲ್ಲಾಧಿಕಾರಿಗಳು ಜೂನ್ 07 ರಂದು ಆದೇಶ ಹೊರಡಿಸಿರುವುದಾಗಿ ತಿಳಿದುಬಂದಿದೆ. ಈ ಹಠಾತ್ ಮತ್ತು ಏಕಪಕ್ಷೀಯ ಕ್ರಮವು ಕರ್ನಾಟಕದ ಮಾವು ಬೆಳೆಗಾರರಿಗೆ, ವಿಶೇಷವಾಗಿ ಗಡಿ ಪ್ರದೇಶಗಳಲ್ಲಿ ಗಣನೀಯ ಪ್ರಮಾಣದಲ್ಲಿ ತೋತಾಪುರಿ ಮಾವನ್ನು ಬೆಳೆಯುವವರಿಗೆ

**ಕರ್ನಾಟಕದ ತೋತಾಪುರಿ ಮಾವಿಗೆ ನಿಷೇಧ**

ಹೆಚ್ಚಿನ ತೊಂದರೆಯನ್ನುಂಟು ಮಾಡಿದೆ. ಈ ರೈತರು ಉತ್ಪನ್ನಗಳನ್ನು ಮಾರಾಟ ಮಾಡಲು ಚಿತ್ತೂರು ಮೂಲದ ಸಂಸ್ಕರಣಾ ಘಟಕಗಳೊಂದಿಗೆ ದೀರ್ಘಕಾಲದಿಂದ ಸಂಪರ್ಕ ಹೊಂದಿದ್ದಾರೆ.

ಪ್ರಸ್ತುತ ನಿರ್ಬಂಧವು ಈ ಸುಸ್ಥಾಪಿತ ಪೂರೈಕೆ ಸರಪಳಿ ಯನ್ನು ಅಡ್ಡಿಪಡಿಸಿದೆ, ಕೊಯ್ಲಿನ ನಂತರದ ಗಮನಾರ್ಹ ನಷ್ಟವನ್ನುಂಟು ಮಾಡಿದೆ, ಇದು ಸಾವಿರಾರು ರೈತರ ಜೀವನೋಪಾಯದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

> **ವಿಷಯದಲ್ಲಿ ನೀವು (ಚಂದ್ರಬಾಬು ನಾಯ್ಡು) ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸುತ್ತೇನೆ ಮತ್ತು ಚಿತ್ತೂರು ಜಿಲ್ಲಾಡಳಿತದ ಆದೇಶವನ್ನು ತಕ್ಷಣವೇ ರದ್ದುಗೊಳಿಸಲು ಜಿಲ್ಲೆಯ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಬೇಕೆಂದು ವಿನಂತಿಸುತ್ತೇನೆ ಎಂದು ತಿಳಿಸಿದ್ದಾರೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ರೈತರ ಕಲ್ಯಾಣದ ಹಿತದೃಷ್ಟಿಯಿಂದ ಕೃಷಿ ಉತ್ಪನ್ನಗಳ ಸರಾಗ ಸಾಗಣೆಯನ್ನು ಪುನಃಸ್ಥಾಪಿಸಲು ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದೂ ಆಗ್ರಹಿಸಿದ್ದಾರೆ.**

ಪೂರ್ವ ಸಮಾಲೋಚನೆ ಅಥವಾ ಸಮನ್ವಯವಿಲ್ಲದೆ ತೆಗೆದುಕೊಳ್ಳುವ ಈ ರೀತಿಯ ಕ್ರಮಗಳು ಸಹಕಾರಿ ಒಕ್ಕೂಟ ವ್ಯವಸ್ಥೆಯ ಮನೋಭಾವಕ್ಕೆ ವಿರುದ್ಧವಾಗಿವೆ. ಇದು ಉದ್ವಿಗ್ನತೆ ಪ್ರತೀಕಾರದ ಕ್ರಮಗಳಿಗೆ ಕಾರಣವಾಗಬಹುದು ಪಾಲುದಾರರು ಈಗಾಗಲೇ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ,

ಇದು ತರಕಾರಿಗಳು ಮತ್ತು ಇತರ ಕೃಷಿ ಸರಕುಗಳ ಅಂತರ-ರಾಜ್ಯ ಸಾಗಣೆ ಯನ್ನು ಅಡ್ಡಿಪಡಿಸಬಹುದು.

## ಉದ್ಯಮಿಗೆ ರೂ.38 ಲಕ್ಷ ವಂಚನೆ



• **ಉದಯವಾಹಿನಿ, ಬೆಂಗಳೂರು**

ಮದುವೆಗೆ ವೆಬ್‌ಸೈಟ್‌ವೊಂದರಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದ ಉದ್ಯಮಿಗೆ ಆನ್‌ಲೈನ್‌ನಲ್ಲಿ ಯುವತಿಯ ಪರಿಚಯವಾಗಿ 38.8 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮದುವೆಗೆ ಹುಡುಗಿಯ ಹುಡುಕಾಟದಲ್ಲಿದ್ದ ಸಾಗರ್ ಹೆಸರು ಬದಲಾವಣೆ ಮಾಡಲಾಗಿದೆ ಅವರು ಮಾರ್ಚ್‌ನಲ್ಲಿ ವೆಬ್‌ಸೈಟ್‌ನಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದರು.

ಆಗ ಲಕ್ಷ್ಮಿ ಪ್ರಿಯಾ ಎಂಬಾಕೆಯ ಪರಿಚಯವಾಗಿತ್ತು. ಹೂಡಿಕೆ ಸಂಸ್ಥೆಯಲ್ಲಿ ತನ್ನ ಚಿಕ್ಕಪ್ಪನ ಜೊತೆಗೆ ಕೆಲಸ ಮಾಡುತ್ತಿರುವುದಾಗಿ ಆಕೆ ಹೇಳಿಕೊಂಡಿದ್ದಳು. ಇಬ್ಬರು ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಂಡು ಮಾತುಕತೆ ನಡೆಸುತ್ತಿದ್ದರು. ವೀಡಿಯೋ ಕರೆಯಲ್ಲೂ ಮಾತನಾಡುತ್ತಿದ್ದರು. ಸಾಗರ್ ಅವರಿಗೆ ತನ್ನ ಕುಟುಂಬದ ಸದಸ್ಯರನ್ನೂ ಲಕ್ಷ್ಮಿ ಭೇಟಿ ಮಾಡಿಸಿದ್ದರು ಎಂದು ಮೂಲಗಳು ತಿಳಿಸಿವೆ. ನಂತರದ ದಿನಗಳಲ್ಲಿ ಆರೋಪಿ ಲಕ್ಷ್ಮಿ ಪ್ರಿಯಾ. ತನ್ನ ಚಿಕ್ಕಪ್ಪನ ಟ್ರೇಡ್ ಯು ಸಂಸ್ಥೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರಲಿದೆ ಎಂದು ದೂರುದಾರರಿಗೆ ಹೇಳಿ ನಂಬಿಸಿ ಹಂತಹಂತವಾಗಿ ಹಣ ಹೂಡಿಕೆ ಮಾಡಿಸಿಕೊಂಡು ಮೋಸ ಮಾಡಿದ್ದಾರೆ ಎಂದು ಪೊಲೀಸರು ಹೇಳಿದರು.

## ಉಪ್ಪಾರಪೇಟೆ ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್‌ಗಳ ಮಧ್ಯೆ ಗಲಾಟೆ

• **ಉದಯವಾಹಿನಿ, ಬೆಂಗಳೂರು**

ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರತ ಸಿಬ್ಬಂದಿ ಮಧ್ಯೆ ಗಲಾಟೆ ನಡೆದಿದ್ದು ಅದೇ ಠಾಣೆಯಲ್ಲಿ ಹೆಡ್ ಕಾನ್‌ಸ್ಟೇಬಲ್ ಒಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ. ಕಾನ್‌ಸ್ಟೇಬಲ್‌ರೇಣುಕಾ ಅವರು ನೀಡಿದ ದೂರಿನ ಮೇರೆಗೆ ಹೆಡ್ ಕಾನ್‌ಸ್ಟೇಬಲ್ ಬಿ.ಜಿ.ಗೋವಿಂದರಾಜು ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.



ಉದಯವಾಹಿನಿ ಚಿತ್ರ

ಜೂನ್ 10ರಂದು ರಾತ್ರಿ, ಕಂಪ್ಯೂಟರ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಮನೆ ಬಿಟ್ಟು ಬಂದಿದ್ದ ಇಬ್ಬರು ಹೆಣ್ಣು ಮಕ್ಕಳನ್ನು ನೋಡಿಕೊಳ್ಳುವಂತೆ, ಊಟ ನೀಡುವಂತೆ ಠಾಣೆಯ ಎಎಸ್‌ಐ ತಿಮ್ಮೇಗೌಡ ಸೂಚಿಸಿದ್ದರು. ರಾತ್ರಿ 2.30ರ ಸುಮಾರಿಗೆ ಆ ಮಕ್ಕಳನ್ನು ತನಿಖಾ ಸಹಾಯಕರ ಕೊಠಡಿಗೆ ಕರೆದೊಯ್ದು ಊಟ ಮಾಡಿಸುತ್ತಿದ್ದೆ. ಅದೇ ಸಮಯದಲ್ಲಿ ಬಿ.ಜಿ.ಗೋವಿಂದರಾಜು ಅವರು ಠಾಣೆಯ ಪ್ರವೇಶ ದ್ವಾರದ ಬಳಿ ಕುಳಿತು, ಹೆಣ್ಣು ಮಕ್ಕಳ ಕುರಿತು ಕೆಟ್ಟದಾಗಿ ಮಾತನಾಡುತ್ತಿದ್ದರು. ಅದನ್ನು ಕೇಳಿಸಿಕೊಂಡಿದ್ದ ಹೆಣ್ಣು ಮಕ್ಕಳು, ನನಗೆ ಮಾಹಿತಿ ನೀಡಿದ್ದರು. ಆಗ ಯಾಕೆ ಸರ್, ಹೆಣ್ಣು ಮಕ್ಕಳ ಕುರಿತು ಕೆಟ್ಟದಾಗಿ ಮಾತನಾಡುತ್ತಿದ್ದೀರಿ? ಇಲ್ಲಿ ಚಿಕ್ಕ ಮಕ್ಕಳು ಇದ್ದಾರೆ ಎಂದು ಪ್ರಶ್ನಿಸಿದ್ದೆ. ಆಗ ಗೋವಿಂದರಾಜು ಅವರು ನನ್ನನ್ನು ನಿಂದಿಸಿದರು' ಎಂದು ರೇಣುಕಾ ನೀಡಿರುವ ದೂರು ಆಧರಿಸಿ ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಅವಾಚ್ಯ ಶಬ್ದದಿಂದ ನಿಂದಿಸಿ ಶೂ ಧರಿಸಿದ್ದ ಕಾಲಿನಿಂದ ಒದ್ದಿದ್ದಾರೆ. ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ತಿಮ್ಮೇಗೌಡ, ಬಸಪ್ಪ, ಮಹೇಶ್ ಅವರು ಬಿಡಿಸಲು ಬಂದಿದ್ದರು. ಆಗಲೂ ನಿಂದಿಸಿ ಶೂ ಧರಿಸಿದ್ದ ಕಾಲಿನಿಂದ ಮತ್ತೆ ಒದ್ದರು' ಎಂಬುದಾಗಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

## ರಾಜ್ಯದಲ್ಲಿ ಹೊಸ ಜಾತಿ ಸಮೀಕ್ಷೆ ಸರ್ಕಾರಕ್ಕೆ ಕಠಿಣ ಸವಾಲು

• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಮುಂದಿನ 90 ದಿನಗಳಲ್ಲಿ ಹೊಸ ಸಾಮಾಜಿಕ-ಆರ್ಥಿಕ ಸಮೀಕ್ಷೆಗೆ ಒಪ್ಪಿಕೊಂಡಿರುವುದರಿಂದ, ರಾಜ್ಯ ಸರ್ಕಾರವು ಹಲವಾರು ಸವಾಲುಗಳನ್ನು ಜಯಿಸಬೇಕಾಗಿದೆ. ಅವುಗಳಲ್ಲಿ ಅತ್ಯಂತ ಕಠಿಣವಾದದ್ದು ಹಿಂದೆ ಶಾಲಾ ಶಿಕ್ಷಕರಾಗಿದ್ದ ಗಣತಿದಾರರನ್ನು ಕಂಡುಹಿಡಿಯುವುದು. ಆದರೆ ಈಗ ಶಾಲೆಗಳು ಮತ್ತೆ ತೆರೆದಿವೆ, ಸರ್ಕಾರವು ಈ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸಲು ಸಾಧ್ಯವಾಗುವುದಿಲ್ಲ. ಕಾಂತರಾಜು ಆಯೋಗವು 1.8 ಲಕ್ಷ



ಉದಯವಾಹಿನಿ ಚಿತ್ರ

ಗಣತಿದಾರರೊಂದಿಗೆ ಸಮೀಕ್ಷೆಯನ್ನು ಪೂರ್ಣಗೊಳಿಸಲು ಸುಮಾರು 50 ದಿನಗಳನ್ನು ತೆಗೆದುಕೊಂಡಿತು, ಅದರಲ್ಲಿ 1.3 ಲಕ್ಷ ಶಾಲಾ ಶಿಕ್ಷಕರಿದ್ದರು. ಸರ್ಕಾರ ಆಶಾ ಕಾರ್ಯಕರ್ತೆಯರು / ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳಬಹುದು, ಆದರೆ ಅದು ಕಾರ್ಯಸಾಧ್ಯವಾದ ಆಯ್ಕೆಯಾಗಿಲ್ಲದಿರಬಹುದು. ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಅಗತ್ಯ ಸೇವೆಗಳ ಭಾಗವಾಗಿದ್ದಾರೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು. ಎಸ್‌ಸಿ ಸಮುದಾಯಗಳಲ್ಲಿ ಆಂತರಿಕ ಮೀಸಲಾತಿ ಸಮೀಕ್ಷೆಗಾಗಿ ಶಾಲಾ ಶಿಕ್ಷಕರನ್ನು ಇತ್ತೀಚೆಗೆ ನೇಮಿಸಲಾಗಿದೆ ಎಂದು ಮಾಜಿ ಕಾನೂನು , ಶಿಕ್ಷಣ ಸಚಿವ ಸುರೇಶ್ ಕುಮಾರ್ ಹೇಳಿದರು.

## ಬನ್ನೇರುಘಟ್ಟ ಸಫಾರಿಗೆ ಶೀಘ್ರದಲ್ಲೇ ಎಲೆಕ್ಟ್ರಿಕ್ ವಾಹನ ಬಳಕೆ!

• **ಉದಯವಾಹಿನಿ, ಬೆಂಗಳೂರು**

ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ (ಬಿಬಿಪಿ) ಸಫಾರಿಗೆ ಶೀಘ್ರದಲ್ಲೇ ಎಲೆಕ್ಟ್ರಿಕ್ ವಾಹನಗಳನ್ನು ಬಳಕೆ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅರಣ್ಯ ಪ್ರದೇಶದ ಸಫಾರಿಯನ್ನು ಪರಿಸರ ಸ್ನೇಹಿಯನ್ನಾಗಿಸಲು ಬನ್ನೇರುಘಟ್ಟ ಸಫಾರಿಗೆ ವಿದ್ಯುತ್ ಚಾಲಿತ ವಾಹನ ಬಳಕೆಗೆ ನಿರ್ಧರಿಸಲಾಗಿದೆ ಎಂದು ಹೇಳಿದರು. ವಾಹನಗಳಿಂದ ಹೆಚ್ಚುತ್ತಿರುವ ಇಂಗಾಲದ ಹೊರಹೊಮ್ಮುವಿಕೆ ತಡೆಯಲು ಅರಣ್ಯ ಇಲಾಖೆ ಪ್ರಯತ್ನ ಸಫಲವಾಗಿದೆ. ಈ ಹಿನ್ನೆಲೆಯಲ್ಲಿ ದೇಶದಲ್ಲೇ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಬನ್ನೇರುಘಟ್ಟ ಸಫಾರಿಯಲ್ಲಿ ಹೊಗೆ ರಹಿತ ವಾಹನ ಬಳಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಬನ್ನೇರುಘಟ್ಟ ಜೈವಿಕ ಉದ್ಯಾನವನ ಕಾರ್ಯನಿರ್ವಾಹಕ ಎವಿ ಸೂರ್ಯ ಸೇನ್ ಅವರು ಮಾತನಾಡಿ, ಇವಿ ಬಸ್ ಅನ್ನು ಒಂದು ತಿಂಗಳ ಪ್ರಾಯೋಗಿಕ ಆಧಾರದ ಮೇಲೆ ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದು ಹೇಳಿದರು.

ಸಫಾರಿ ವಾಹನಗಳಿಗೆ ಬಳಸುವ ಎಲೆಕ್ಟ್ರಿಕ್ ವಾಹನಗಳಿಗೆ ಇವಿ ಚಾರ್ಜಿಂಗ್ ಘಟಕ ಸ್ಥಾಪಿಸುವಂತೆ ಬಿಎಂಟಿಸಿಗೆ ಮನವಿ ಮಾಡಲಾಗಿದೆ. ಎಲ್ಲವೂ ಅಂದುಕೊಂಡಂತೆಯೇ ಆದರೆ, ಎಲ್ಲಾ ಸಫಾರಿ ವಾಹನಗಳನ್ನು ಹಂತ ಹಂತವಾಗಿ ಎಲೆಕ್ಟ್ರಿಕ್ ವಾಹನಗಳಾಗಿ ಬದಲಾಯಿಸಲಾಗುವುದು ಎಂದು ತಿಳಿಸಿದರು.

## ಸ್ಥಳೀಯರ ವಿರೋಧ: ಯುಜಿ ಕೇಬಲ್ ಅಳವಡಿಕೆ ಸ್ಥಗಿತ

• **ಉದಯವಾಹಿನಿ, ಬೆಂಗಳೂರು**

ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಗರಬಾವಿ ಉಪವಿದ್ಯುತ್ ಕೇಂದ್ರದ ಭೂಗತ (ಯುಜಿ) ಕೇಬಲ್ ಅಳವಡಿಕೆ ಕಾರ್ಯ ಸ್ಥಗಿತಗೊಂಡಿರುವ ಕಾರಣ ಇತರೆ ಉಪ ಕೇಂದ್ರಗಳಿಗೆ ಹೆಚ್ಚುವರಿ ವಿದ್ಯುತ್ ಲೈನ್‌ಗಳ ಸಂಪರ್ಕ ನೀಡಲಾಗಿದೆ. ಇದರ ಪರಿಣಾಮ ಒತ್ತಡ ಹೆಚ್ಚಾಗಿ ವಿದ್ಯುತ್ ಕಡಿತಗೊಂಡು, ಸುತ್ತಮುತ್ತಲಿನ ಕೈಗಾರಿಕೆಗಳಿಗೆ ಹಾನಿಯಾಗುತ್ತಿದೆ ನಾಗರಬಾವಿ ಪ್ರದೇಶ ವ್ಯಾಪ್ತಿಯ ನಮ್ಮೂರು ತಿಂಡಿ' ಸ್ಥಳದಿಂದ ನಾಯಂಡಹಳ್ಳಿ ರಿಂಗ್ ರಸ್ತೆವರೆಗೆ (1.4 ಕಿ.ಮೀ.) 220 ಕೆ.ವಿ. ಸಾಮರ್ಥ್ಯದ ಕೇಬಲ್‌ಗಳನ್ನು ಅಳವಡಿಸಬೇಕಿದೆ.

ಸ್ಥಳೀಯರ ವಿರೋಧದ ಕಾರಣ ಒಂದು ವರ್ಷದಿಂದ ಕೆಲಸ ಸ್ಥಗಿತಗೊಂಡಿದೆ. ಇದರಿಂದ



ಉದಯವಾಹಿನಿ ಚಿತ್ರ

ಕೈಗಾರಿಕೆಗಳಿಗೆ ಸಮಸ್ಯೆಯಾಗುತ್ತಿದೆ. 300 ಮನೆಗಳಿಗೆ ವಿದ್ಯುತ್ ಒದಗಿಸುವ ಸಾಮರ್ಥ್ಯ ಹೊಂದಿರುವ ಉಪಕೇಂದ್ರಗಳಿಗೆ 500-600 ಲೈನ್ ಸಂಪರ್ಕ ಕಲ್ಪಿಸಲಾಗಿದೆ.

ಇದರಿಂದ ಅವುಗಳಿಗೆ ಒತ್ತಡ ತಡೆದುಕೊಳ್ಳಲು ಆಗುತ್ತಿಲ್ಲ. ವಿದ್ಯುತ್ ಪೂರೈಕೆ ಮೇಲಿನ ಒತ್ತಡ ಕಡಿಮೆ ಮಾಡಲು ಅಧಿಕಾರಿಗಳು ಒಂದು ಪ್ರದೇಶಕ್ಕೆ ವಿದ್ಯುತ್ ಕಡಿತಗೊಳಿಸಿ. ಮತ್ತೊಂದು ಕಡೆಗೆ ಪೂರೈಸುತ್ತಿದ್ದಾರೆ. ಪೀಣ್ಯ, ಮಾಚೋಹಳ್ಳಿ, ಸೀಗೆಹಳ್ಳಿ, ಹೆಗ್ಗನಹಳ್ಳಿ, ಕಮ್ಮಗೊಂಡನಹಳ್ಳಿ, ತಾವರೆಕೆರೆ, ದಾಬಸ್ ಪೇಟೆ, ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕಾ ಪ್ರದೇಶಗಳ ಸ್ಥಿತಿ ಇದೇ ರೀತಿ ಇದೆ. ಕೂಡಲೇ ಸಮಸ್ಯೆ ಬಗೆಹರಿಸಬೇಕು ಎಂದು ಉದ್ಯಮಿಗಳು ಆಗ್ರಹಿಸಿದ್ದಾರೆ. ಈ ಬಗ್ಗೆ ಸಣ್ಣ ಕೈಗಾರಿಕೆಗಳ ಸಂಘ

> **ಅಧಿಕಾರಿಗಳ ಈ ಕಾರ್ಯವೈಖರಿಯಿಂದ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳ ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಬೀರತೊಡಗಿದೆ. ನಿರ್ವಹಣೆ ಸಮಯದಲ್ಲಿ ವಿದ್ಯುತ್ ಕಡಿತಗೊಂಡರೆ ಕಚ್ಚಾವಸ್ತುಗಳು ಹಾಳಾಗುತ್ತವೆ. ಉತ್ಪಾದನೆಗೆ ಪೆಟ್ಟು ಬೀಳಲಿದೆ. ವಿದ್ಯುತ್ ಕೈ ಕೊಡುತ್ತಿರುವ ಕಾರಣ ಕೋಟ್ಯಂತರ ರೂಪಾಯಿ ಮೌಲ್ಯದ ಯಂತ್ರಗಳಲ್ಲಿ ತಾಂತ್ರಿಕ ದೋಷ ಉಂಟಾಗುತ್ತದೆ. ಅವುಗಳ ದುರಸ್ತಿಗೆ ಸಮಯ ವ್ಯರ್ಥವಾಗುವುದರ ಜತೆಗೆ ಹಣವೂ ಖರ್ಚಾಗುತ್ತದೆ' ಎಂದು ಉದ್ಯಮಿಗಳು ಬೇಸರ ವ್ಯಕ್ತಪಡಿಸಿದರು.**

(ಕಾಸಿಯಾ) ಹಲವು ಬಾರಿ ಮನವಿ ಮಾಡಿದೆ. 'ಹಗಲಿನಲ್ಲಿ ಮುನ್ಸೂಚನೆ ಇಲ್ಲದೇ ವಿದ್ಯುತ್ ಕಡಿತಗೊಳಿಸಲಾಗುತ್ತದೆ. ಸಮಸ್ಯೆಯನ್ನು ಯಾರಿಗೆ ಹೇಳಬೇಕು ಕೋಟ್ಯಂತರ ರೂಪಾಯಿ ಸಾಲ ಮಾಡಿ ಯಂತ್ರಗಳನ್ನು ಅಳವಡಿಸಲಾಗಿದೆ. ಮಾಹಿತಿ ನೀಡದೆ ವಿದ್ಯುತ್ ಕಡಿತ ಮಾಡಿದರೆ ಯಂತ್ರಗಳಿಗೆ ಹಾನಿಯಾಗುತ್ತದೆ ಎಂದು ಅಳಲು ತೋಡಿಕೊಂಡರು.

# ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯ ಕೊಟ್ಟ ಶಕ್ತಿ ಯೋಜನೆಗೆ 2 ವರ್ಷ

### ರಾಜ್ಯದಲ್ಲಿ ಜಾರಿಗೆ ತಂದ ಮೊದಲ ಗ್ಯಾರಂಟಿ ಯೋಜನೆ ಇದಾಗಿದ್ದು, ಯೋಜನೆಗೆ ಅಗಾಧ ಪ್ರತಿಕ್ರಿಯೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ 2 ವರ್ಷಗಳನ್ನು ಪೂರೈಸಿದ್ದು, ಯೋಜನೆಯಡಿ ಈ ವರೆಗೂ 475 ಕೋಟಿಗೂ ಹೆಚ್ಚುಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, ಸಾರಿಗೆ ನಿಗಮಗಳಿಗೆ 11,994 ಕೋಟಿ ರೂ. ಮೌಲ್ಯದ ಟಿಕೆಟ್‌ಗಳನ್ನು ನೀಡಲಾಗಿದೆ ಎಂದು ತಿಳಿದುಬಂದಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್‌ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಜಾರಿಗೆ ತಂದ ಮೊದಲ ಗ್ಯಾರಂಟಿ ಯೋಜನೆ ಇದಾಗಿದ್ದು, ಯೋಜನೆಗೆ ಅಗಾಧ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಯೋಜನೆಯು ಮಹಿಳಾ ಪ್ರಯಾಣಿಕರ ಸಂಖ್ಯೆಯನ್ನಷ್ಟೇ ಅಲ್ಲದೆ, ಪುರುಷ ಪ್ರಯಾಣಿಕರ ಸಂಖ್ಯೆಯಲ್ಲೂ ಹೆಚ್ಚಳವಾಗಲು ಸಹಾಯ ಮಾಡಿದೆ ಎಂದು ಸಾರಿಗೆ ಸಂಸ್ಥೆ ನಿಗಮದ ಅಧಿಕಾರಿಗಳು ಹೇಳಿದ್ದಾರೆ.

ಶಕ್ತಿ ಯೋಜನೆಗಳು ಇತರ ರಾಜ್ಯಗಳ ಗಮನವನ್ನೂ ಸೆಳೆದಿದ್ದು ಆಂಧ್ರಪ್ರದೇಶದ ಸಾರಿಗೆ ನಿಗಮದ ಅಧಿಕಾರಿಗಳೂ ಕೂಡ ರಾಜ್ಯಕ್ಕೆ ಭೇಟಿ ನೀಡಿ, ಯೋಜನೆ ಅನುಷ್ಠಾನ, ಸವಾಲುಗಳು, ಕಾರ್ಯನಿರ್ವಹಣೆ ಕುರಿತು ಮಾಹಿತಿ ಪಡೆದುಕೊಂಡಿದ್ದಾರೆಂದು



ಉದಯವಾಹಿನಿ ಚಿತ್ರ

ತಿಳಿಸಿದ್ದಾರೆ. ಈ ಯೋಜನೆಯು ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವವರ ಸಂಖ್ಯೆಯನ್ನು ಹೆಚ್ಚಿಸಿದ್ದು, ಇದರಿಂದ ಪ್ರವಾಸೋದ್ಯಮಕ್ಕೂ ಲಾಭವಾಗುವಂತೆ ಮಾಡಿದೆ. ಸರ್ಕಾರವು ಯೋಜನೆ ಮುಂದುವರೆಸುವುದಾಗಿ ಹೇಳಿದೆ. 2023 ಜೂನ್ 11 ರಿಂದ 2025 ಜೂನ್ 10 ವರೆಗೂ ಕರ್ನಾಟಕ ನಾಲ್ಕು ಸಾರಿಗೆ ನಿಗಮಗಳಲ್ಲಿ ಒಟ್ಟು 4,74,82,49,843 ಮಹಿಳಾ ಪ್ರಯಾಣಿಕರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ.

ಅಂದರೆ, ನಿತ್ಯ ಸರಾಸರಿ 65 ಲಕ್ಷ ಮಹಿಳೆಯರು ಈ ಸೌಲಭ್ಯ ಪಡೆದಂತಾಗಿದೆ.

> **ಶಕ್ತಿ ಯೋಜನೆ ಪ್ರಾರಂಭವಾದಾಗಿನಿಂದ (ಜೂನ್ 11, 2023 ರಿಂದ ಜೂನ್ 10, 2025 ರವರೆಗೆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ) ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯೂಕೆಆರ್‌ಟಿಸಿ) - ನಾಲ್ಕು ನಿಗಮಗಳ ಅಡಿಯಲ್ಲಿ ಸಾರಿಗೆ ಸಂಸ್ಥೆಗೆ ಸೇರಿದ ಬಸ್‌ಗಳಲ್ಲಿ ಪ್ರಯಾಣಿಸಿದ ಒಟ್ಟು ಪ್ರಯಾಣಿಕರ ಸಂಖ್ಯೆ (ಪುರುಷರು ಸೇರಿದಂತೆ) 801.54 ಕೋಟಿಯಾಗಿದೆ ಎಂದು ಕೆಎಸ್‌ಆರ್‌ಟಿಸಿ ಮಾಹಿತಿ ನೀಡಿದೆ.**

2023 ಜೂನ್ 11 ರಿಂದ 2025 ಜೂನ್ 10 ವರೆಗೂ ಮಹಿಳೆಯರಿಗೆ ಉಚಿತವಾಗಿ ನಾಲ್ಕು ಸಾರಿಗೆ ನಿಗಮಗಳಲ್ಲಿ ಒಟ್ಟು 11994,37,89,779 (11994 ಕೋಟಿ) ರೂ. ಮೊತ್ತದ ಟಿಕೆಟ್ ನೀಡಲಾಗಿದೆ. ಅಂದರೆ, ಕಳೆದ 2 ವರ್ಷದಲ್ಲಿ ಮಹಿಳೆಯರಿಗೆ ಸರಾಸರಿ ನಿತ್ಯ 16.5 ಕೋಟಿ ರೂಪಾಯಿ ಉಚಿತ ಟಿಕೆಟ್ ನೀಡಲಾಗುತ್ತಿದೆ. ಈ ಎಲ್ಲಾ ಮೊತ್ತವನ್ನು ಸರ್ಕಾರವು ನಾಲ್ಕು ಸಾರಿಗೆ ನಿಗಮಗಳಿಗೆ ನೀಡಲಿದೆ. ನಾಲ್ಕು ಬಸ್ ನಿಗಮಗಳಲ್ಲಿ ಬಿಎಂಟಿಸಿಯಲ್ಲಿ 150 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದರೆ, ಕೆಎಸ್‌ಆರ್‌ಟಿಸಿ 144 ಕೋಟಿ, ಕಲ್ಯಾಣ ಕರ್ನಾಟಕ ಸಾರಿಗೆ 68 ಕೋಟಿ ಹಾಗೂ ವಾಯವ್ಯ ಕರ್ನಾಟಕ ಸಾರಿಗೆ ಬಸ್‌ನಲ್ಲಿ 111 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದಾರೆ.

ಮಹಿಳಾ ಪ್ರಯಾಣಿಕರ ಒಟ್ಟು ಟಿಕೆಟ್ ಮೌಲ್ಯದಲ್ಲಿ, ಕೆಎಸ್‌ಆರ್‌ಟಿಸಿ 4,556 ಕೋಟಿ ರೂ.ಗಳೊಂದಿಗೆ ಮೊದಲ ಸ್ಥಾನದಲ್ಲಿದೆ, ನಂತರ ಎನ್‌ಡಬ್ಲ್ಯೂಆರ್‌ಟಿಸಿ 2,968 ಕೋಟಿ ರೂ, ಕೆಕೆಆರ್‌ಟಿಸಿ 2,408 ಕೋಟಿ ರೂ. ಮತ್ತು ಬಿಎಂಟಿಸಿ 2,061 ಕೋಟಿ ರೂ.ಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಶಕ್ತಿ ಯೋಜನೆ ಜಾರಿಗೆ ತಂದ ಬಳಿಕ ರಾಜ್ಯ ಸರ್ಕಾರ ಶಕ್ತಿ ಸ್ಮಾರ್ಟ್ ಕಾರ್ಡ್ ನೀಡುವುದಾಗಿ ಹೇಳಿತ್ತು. ಆದರೆ, ಇನ್ನೂ ವಿತರಣೆ ಮಾಡಿಲ್ಲ. ಹೀಗಾಗಿ ಮಹಿಳಾ ಪ್ರಯಾಣಿಕರು ಆಧಾರ್ ಕಾರ್ಡ್ ಬಳಸಿ ಉಚಿತ ಪ್ರಯಾಣದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

# ಮುಂಗಾರು ಚುರುಕು: ಐದು ದಿನ ರೆಡ್ ಅಲರ್ಟ್ ಘೋಷಣೆ

## ರಾಜ್ಯಾದ್ಯಂತ ಜೂನ್ 17ರವರೆಗೆ ವ್ಯಾಪಕ ಮಳೆಯಾಗಲಿದ್ದು, ಹಲವು ಜಿಲ್ಲೆಗಳಿಗೆ ಹವಾಮಾನ ಇಲಾಖೆ ಎಚ್ಚರಿಕೆ

• **ಉದಯವಾಹಿನಿ, ಮಡಿಕೇರಿ:**

ಜಿಲ್ಲೆಯಲ್ಲಿ ಮತ್ತೆ ಮುಂಗಾರು ಚುರುಕುಗೊಂಡಿದೆ. ಮಧ್ಯಾಹ್ನದ ವೇಳೆಗೆ ಮಡಿಕೇರಿ ನಗರ ಸೇರಿದಂತೆ ಹಲವೆಡೆ ಮಳೆಯಾಗಿದ್ದು, ಮಳೆ ಮುಂದುವರಿದಿದೆ. ಮುಂದಿನ ನಾಲ್ಕು ದಿನಗಳ ಕಾಲ ಭಾರಿ ಮಳೆಯ ಮುನ್ಸೂಚನೆಯಿದ್ದು, ರೆಡ್ ಅಲರ್ಟ್ ಘೋಷಣೆಯಾಗಿದೆ. ಮೇ ತಿಂಗಳಿನಲ್ಲಿಯೇ ಮುಂಗಾರು ಪ್ರವೇಶವಾದರೂ ಆರಂಭದ ಒಂದು ವಾರ ಕಳೆದಂತೆ ಮಳೆ ಕಡಿಮೆಯಾಗಿತ್ತು. ಜಿಲ್ಲೆಯಾದ್ಯಂತ ಜೂನ್ ಮೊದಲವಾರ ಬಿಸಿಲಿನ ವಾತಾವರಣದೊಂದಿಗೆ ಆಗೊಮ್ಮೆ ಈಗೊಮ್ಮೆ ಮಳೆಯಾಗುತ್ತಿತ್ತು. ಮುಂಗಾರು ಚುರುಕಾಗಿದ್ದು, ಅಲ್ಲಲ್ಲಿ ಮಳೆಯಾಗುತ್ತಿದೆ. ಜೂ. 12ರ ಬೆಳಗ್ಗೆ 8.30ರಿಂದ ಜೂ.16ರ ಬೆಳಗ್ಗೆ 8.30ರವರೆಗೆ ಹವಾಮಾನ ಇಲಾಖೆಯಿಂದ ರೆಡ್ ಅಲರ್ಟ್ ಘೋಷಣೆಯಾಗಿದೆ. ಮಧ್ಯಾಹ್ನದಿಂದಲೇ ಅಲ್ಲಲ್ಲಿ ಮಳೆ, ದಟ್ಟ ಮೋಡ ಕವಿದ ವಾತಾವರಣ ಕಂಡುಬರುತ್ತಿದ್ದು, ಭಾರಿ ಮಳೆಯಾಗುವ ಲಕ್ಷಣಗಳು ಕಂಡುಬರುತ್ತಿವೆ.


ಉದಯವಾಹಿನಿ ಚಿತ್ರ

**ಮಳೆ ವಿವರ:** ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿಜಿಲ್ಲೆಯಲ್ಲಿ ಸರಾಸರಿ 2.32 ಮಿ.ಮೀ. ಮಳೆಯಾಗಿದೆ. ಜನವರಿಯಿಂದ ಇಲ್ಲಿಯವರೆಗೆ 788.36 ಮಿ.ಮೀ.ಮಳೆಯಾಗಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಿ444.06 ಮಿ.ಮೀ ಮಳೆಯಾಗಿತ್ತು. ಮಡಿಕೇರಿ ತಾಲ್ಲೂಕಿನಲ್ಲಿ ಸರಾಸರಿ 11.33 ಮಿ.ಮೀ.ಮಳೆಯಾಗಿದ್ದು, ಜನವರಿಯಿಂದ ಇಲ್ಲಿಯವರೆಗೆ 1171.32 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ636.41 ಮಿ.ಮೀ. ಮಳೆಯಾಗಿತ್ತು. ಸೋಮವಾರಪೇಟೆ ತಾಲ್ಲೂಕಿನಲ್ಲಿ ಸರಾಸರಿ 0.28 ಮಿ.ಮೀ. ಮಳೆಯಾಗಿದೆ. ಜನವರಿಯಿಂದ ಇಲ್ಲಿಯವರೆಗೆ 679.42 ಮಿ.ಮೀ. ಮಳೆಯಾಗಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಿ 362.98 ಮಿ.ಮೀ. ಮಳೆಯಾಗಿತ್ತು. ಉಳಿದಂತೆ ವಿರಾಜಪೇಟೆ, ಪೊನ್ನಂಪೇಟೆ, ಕುಶಾಲನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಮಳೆ ದಾಖಲಾಗಲಿಲ್ಲ. ಇನ್ನು ಮಡಿಕೇರಿ ಅಲ್ಲದೆ, ರಾಜ್ಯಾದ್ಯಂತ ಜೂ. 17 ರವರೆಗೆ ವ್ಯಾಪಕ ಮಳೆಯಾಗಲಿದ್ದು, ಹಲವು ಜಿಲ್ಲೆಗಳಿಗೆ ಹವಾಮಾನ ಇಲಾಖೆ ಎಚ್ಚರಿಕೆಯ ಮುನ್ಸೂಚನೆ ಕೊಡಲಾಗಿದೆ. ಜೂನ್ 12ರಂದು ಕರಾವಳಿಯ ಎಲ್ಲಾ ಜಿಲ್ಲೆಗಳಿಗೆ ಹಾಗೂ ಒಳನಾಡಿನ ಬೆಳಗಾವಿ, ಗದಗ, ಹಾವೇರಿ, ಕೊಪ್ಪಳ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಿಗೆ ಆರೆಂಜ್ ಮತ್ತು ವಿಜಯನಗರ, ತುಮಕೂರು, ಕೊಡಗು, ಹಾಸನ, ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಬಳ್ಳಾರಿ, ರಾಯಚೂರು, ಧಾರವಾಡ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಕೊಡಲಾಗಿದ್ದು, ಜೂನ್ 14ರವರೆಗೂ 8 ಜಿಲ್ಲೆಗಳಿಗೆ ರೆಡ್ ಅಲರ್ಟ್ ಕೊಡಲಾಗಿದೆ.

### ಹಾರಂಗಿ ನೀರಿನ ಮಟ್ಟ

- ಗರಿಷ್ಠ ಮಟ್ಟ – 2,859 ಅಡಿ
- ಇಂದಿನ ಮಟ್ಟ – 2851.48 ಅಡಿ
- ಒಳಹರಿವು – 1200 ಕ್ಯುಸೆಕ್
- ಹೊರ ಹರಿವು – ನದಿಗೆ 2000 ಕ್ಯುಸೆಕ್

### ಹೋಬಳಿವಾರು ಮಳೆ ವಿವರ

- ಮಡಿಕೇರಿ ಕಸಬಾ – 4 ಮಿ.ಮೀ.
- ಸಂಪಾಜೆ – 30.50 ಮಿ.ಮೀ.
- ಭಾಗಮಂಡಲ – 10.80 ಮಿ.ಮೀ.
- ಶಾಂತಳ್ಳಿ – 1.10 ಮಿ.ಮೀ.

# ಕಾವೇರಿ ಆರತಿ ವಿರೋಧಿಸಿ ಕೆಆರ್‌ಎಸ್ ಅಣೆಕಟ್ಟೆ ಬಳಿ ರೈತರ ಪ್ರತಿಭಟನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮಂಡ್ಯ**

ಕೆಆರ್‌ಎಸ್ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಹಾಗೂ ಕಾವೇರಿಗೆ ಆರತಿ ಮಾಡುವ ಸರಕಾರದ ಕ್ರಮವನ್ನು ವಿರೋಧಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ನಾನಾ ಸಂಘಟನೆಗಳ ಕಾರ್ಯಕರ್ತರು ಅಣೆಕಟ್ಟೆ ಬಳಿ ಪ್ರತಿಭಟನೆ ನಡೆಸಿದ್ದಾರೆ. ಈ ಯೋಜನೆಗಳಿಂದ ಅಣೆಕಟ್ಟೆ ಸುತ್ತಮುತ್ತಲಿನ ಪರಿಸರಕ್ಕೆ ಅಪಾಯವಿದ್ದು ಇದನ್ನು ವಿರೋಧಿಸಿ ತಿಂಗಳಿಂದಲೂ ಹಲವು ಹಂತಗಳಲ್ಲಿ ಪ್ರತಿಭಟನೆ ಮಾಡುತ್ತಾ ಬಂದಿದ್ದರೂ, ಸರಕಾರ ಕಿವಿಗೊಡದೆ ಯೋಜನೆ ಅನುಷ್ಠಾನಕ್ಕೆ ಮುಂದಾಗಿರುವುದನ್ನು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿದರು.

ಅಮ್ಯೂಸ್‌ಮೆಂಟ್ ಪಾರ್ಕ್, ಕಾವೇರಿ ಆರತಿಯಿಂದ ರೈತರಿಗಾಗಲೀ, ಸಾರ್ವಜನಿಕರಿಗೆ ಏನೂ ಉಪಯೋಗವಿಲ್ಲ. ಸದರಿ ಯೋಜನೆಗಳಿಗೆ ನೂರಾರು ಕೋಟಿ ರೂ.ಗಳನ್ನು ನಾಲೆಗಳ ದುರಸ್ತಿಗೆ ಬಳಸಿ ರೈತರ ಜಮೀನಿಗೆ ಸಮರ್ಪಕವಾಗಿ ನೀರುಹರಿಸಬೇಕು ಎಂದು ಅವರು ಒತ್ತಾಯಿಸಿದರು. ಶಾಸಕರು ಹೋರಾಟದ ಬಗ್ಗೆ ವಿವೇಕವಿಲ್ಲದೆ ಹಗುವಾಗಿ ಮಾತನಾಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಿರ್ಣಯ ಕೈಗೊಂಡಿದ್ದರೂ ಹದ್ದುಮೀರಿ ಮಾತನಾಡಿದ್ದಾರೆ ಎಂದು ಅವರು ಕಿಡಿಕಾರಿದರು.

**ಶಾಸಕ ರವಿಕುಮಾರ್ ಹೇಳಿಕೆಗೆ ಖಂಡನೆ**

**ಇದಕ್ಕೂ ಮುನ್ನ ಸಂಘಟನೆಗಳ ಕಾರ್ಯಕರ್ತರು ಮಂಡ್ಯದ ಸಂಜಯ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಯೋಜನೆಗಳ ವಿರುದ್ಧ ಹೋರಾಟ ಕುರಿತಂತೆ ಮಂಡ್ಯ ಶಾಸಕ ರವಿಕುಮಾರ್ ಗಣಿಗ ಅವರ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದರು.**


## ಸಿದ್ದರಾಮಯ್ಯ ಅಧಿಕಾರ 6 ತಿಂಗಳಲ್ಲಿ ಮುಗಿಯುತ್ತದೆ: ಭವಿಷ್ಯ ನುಡಿದ ಆರ್.ಅಶೋಕ್

# ಸಿಎಂ ಕುರ್ಚಿಯನ್ನು ನಾಲ್ವರು ಎಳೆದಾಡುತ್ತಿದ್ದಾರೆ

• **ಉದಯವಾಹಿನಿ, ಮೈಸೂರು**

ಸಿಎಂ ಸಿದ್ದರಾಮಯ್ಯ ಮೋದಿ ಸರ್ಕಾರಕ್ಕೆ ಕೊಡುವ ಮಾರ್ಕ್ಸ್ ಯಾರಿಗೆ ಬೇಕು, ಅವರು ಔಟ್ ಗೋಯಿಂಗ್ ಸಿಎಂ, ಇನ್ನಾರೇ ತಿಂಗಳಲ್ಲಿ ಅವರ ಅಧಿಕಾರ ಮುಗಿಯುತ್ತದೆ ಎಂದು ವಿಪಕ್ಷ ನಾಯಕ ಆರ್ ಅಶೋಕ್ ಭವಿಷ್ಯ ಹೇಳಿದ್ದಾರೆ. ಮೈಸೂರಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಆರು ತಿಂಗಳಲ್ಲಿ ಸಿದ್ದರಾಮಯ್ಯ ಆರು ತಿಂಗಳಲ್ಲಿ ಅಧಿಕಾರ ತೊರೆಯುವ ಬಗ್ಗೆ ನೋಟರಿ ಆಫೀಸ್‌ನಲ್ಲಿ ಅಗ್ರಿಮೆಂಟ್ ಆಗಿಲ್ಲ, ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಅಗ್ರಿಮೆಂಟ್ ಆಗಿದೆ ಎಂದು ವ್ಯಂಗ್ಯವಾಗಿ ನುಡಿದಿದ್ದಾರೆ. ಡಿ ಕೆ ಶಿವಕುಮಾರ್, ಸತೀಶ್ ಜಾರಕಿಹೊಳಿ, ಎಂ ಬಿ ಪಾಟೀಲ್ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಸಿಎಂ ಹುದ್ದೆಯ ಆಕಾಂಕ್ಷಿಯಾಗಿದ್ದಾರೆ. ಸಿಎಂ ಕುರ್ಚಿ ಭದ್ರವಾಗಿದ್ದರೆ ಈ ರೀತಿ ಯಾಕೆ ಹೇಳುತ್ತಿದ್ದರು. ಸಿಎಂ ಕುರ್ಚಿಯನ್ನು ಒದ್ದು ಕಿತ್ತುಕೊಳ್ಳುವುದಾಗಿ ವಿಧಾನಸಭೆ ಅಧಿವೇಶನದಲ್ಲೇ ಹೇಳಿದ್ದಾರೆ. ಕಾಂಗ್ರೆಸ್ ನೆಗೆದು ಬಿದ್ದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ರಾಜ್ಯದಲ್ಲಿ ರಸ್ತೆಗಳು ಹಾಳಾಗಿವೆ. ಸರ್ಕಾರಿ ನೌಕರರಿಗೆ ಸಂಬಳ ಕೊಡಲು ದುಡ್ಡಿಲ್ಲ ಎಂದು ಟೀಕಿಸಿದರು.

ಅಲ್ಲದೆ ನಾವೇನು ರಾಜಕೀಯ ಸನ್ಯಾಸಿಗಳಲ್ಲ. ಆದರೆ ನಾವಾಗಿಯೇ ರಾಜ್ಯ ಸರ್ಕಾರವನ್ನು ಬೀಳಿಸುವುದಿಲ್ಲ. ಅವರೇ ಕಚ್ಚಾಡಿಕೊಂಡು ಬೀಳುತ್ತಾರೆ. ಸಿಎಂ ಕುರ್ಚಿಯನ್ನು ನಾಲ್ವರು ಎಳೆದಾಡುತ್ತಿದ್ದಾರೆ. ಅದರಿಂದಲೇ ಸರ್ಕಾರ ಪತನವಾಗಲಿದೆ ಎಂದಿದ್ದಾರೆ. ಒಂದು ಕಾಲದಲ್ಲಿ ಗೋಧಿಗಾಗಿ ವಿದೇಶಗಳ ಮುಂದೆ ಕೈ ಚಾಚುತ್ತಿದ್ದ ಪರಿಸ್ಥಿತಿ ಇತ್ತು. ಆದರೆ, ಕೋವಿಡ್ ಸಮಯದಲ್ಲಿ ಭಾರತವು ಅನೇಕ ರಾಷ್ಟ್ರಗಳಿಗೆ ಲಸಿಕೆಗಳನ್ನು ನೀಡಿತು. ಇದರಿಂದ ಮೋದಿ ಅವರಿಗೆ ಮಾತ್ರವಲ್ಲ,




**ರಾಜ್ಯದಲ್ಲಿ ರಸ್ತೆಗಳು ಹಾಳಾಗಿವೆ**

ಜನಸಾಮಾನ್ಯರಿಗೂ ಗೌರವ ಸಿಕ್ಕಿದೆ ಎಂದು ಹೇಳಿದರು. ಪ್ರಧಾನಿ ಮೋದಿ ಸರ್ಕಾರಕ್ಕೆ ಸಿಎಂ ಸಿದ್ದರಾಮಯ್ಯ ಜೀರೋ ಮಾರ್ಕ್ಸ್ ನೀಡುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅಶೋಕ್, ಸಿದ್ದರಾಮಯ್ಯ ಔಟ್ ಗೋಯಿಂಗ್ ಸಿಎಂ. ನೀಡುವ ಮಾರ್ಕ್ಸ್ ಯಾರಿಗೆ ಬೇಕು ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಇತರರನ್ನು ಟೀಕಿಸುವ ಮೊದಲು ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಲಿ ಎಂದು ತಿರುಗೇಟು ನೀಡಿದರು.

**ಕಾಶ್ಮೀರ ನಮ್ಮದು ಎಂಬ ಭಾವನೆ ಅಲ್ಲಿನ ಜನರಲ್ಲಿ ಮೂಡಿದೆ**

ಇತ್ತೀಚಿನ ವರದಿಯ ಪ್ರಕಾರ, ದೇಶದ 27 ಕೋಟಿಜನರು ಬಡತನ ರೇಖೆಗಿಂತ ಮೇಲೆ ಬಂದಿದ್ದಾರೆ. ನಕ್ಸಲ್ ಚಟುವಟಿಕೆಗಳು ಬಹುತೇಕ ನಿಯಂತ್ರಣಕ್ಕೆ ಬಂದಿವೆ. ಸಮಾಜದ ವಿವಿಧ ವಲಯಗಳಲ್ಲಿ ಪ್ರಗತಿ ಕಂಡುಬಂದಿದೆ. ಮೋದಿಯವರು ಇದೀಗ ವಿಶ್ವನಾಯಕರಾಗಿದ್ದಾರೆ.

ಜಗತ್ತಿನಲ್ಲಿ ಯಾವುದೇ ಸಮಸ್ಯೆ ಎದುರಾದರೂ ಭಾರತವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಕಾಶ್ಮೀರ ನಮ್ಮದು ಎಂಬ ಭಾವನೆ ಅಲ್ಲಿನ ಜನರಲ್ಲಿ ಮೂಡಿದೆ. ಅಲ್ಲಿನ ಜನರು ಪಾಕಿಸ್ತಾನವನ್ನು ವಿರೋಧಿಸುತ್ತಿದ್ದಾರೆ. ಉಗ್ರರ ದಾಳಿಯ ನಂತರ ಪಾಕಿಸ್ತಾನ ವಿರೋಧಿ ರ್‍ಯಾಲಿಗಳನ್ನು ನಡೆಸಲಾಯಿತು. ಪಾಕಿಸ್ತಾನ ಭಿಕ್ಷಾಪಾತ್ರೆ ಆಗಿದೆ, ಅದರ ಜೊತೆ ಹೋಗಬಾರದು ಎಂದು ಕಾಶ್ಮೀರದ ಜನತೆ ತೀರ್ಮಾನಿಸಿದ್ದಾರೆ. ಇದಕ್ಕೆಲ್ಲಾ ನರೇಂದ್ರ ಮೋದಿಯವರ ಜನಮೆಚ್ಚಿದ ಆಡಳಿತವೇ ಕಾರಣ ಎಂದು ಅಶೋಕ್ ಹೇಳಿದರು.

### ಪ್ರಧಾನಿ ಆಡಳಿತವನ್ನು ಹಾಡಿ ಹೊಗಳಿದ ಆರ್ ಅಶೋಕ್



**ಮೈಸೂರಿನಲ್ಲಿ ಕೇಂದ್ರ ಸರ್ಕಾರಕ್ಕೆ 11 ವರ್ಷ ಪೂರೈಕೆಯಾಗಿರುವ ಬಗ್ಗೆ ಮಾತನಾಡಿ, ದೇಶವು ಮಹತ್ವದ ಘಟ್ಟಕ್ಕೆ ತಲುಪಿದೆ ಎಂದರು. ನರೇಂದ್ರ ಮೋದಿಯವರ ಆಡಳಿತವನ್ನು ಜನರು ಮೆಚ್ಚಿ ಮೂರನೇ ಬಾರಿಗೆ ಅಧಿಕಾರ ನೀಡಿದ್ದಾರೆ. ಮನಮೋಹನ್ ಸಿಂಗ್ ಅವರ 10 ವರ್ಷಗಳ ಆಡಳಿತಕ್ಕೆ ಹೋಲಿಸಿದರೆ, ಮೋದಿ ಅವರ 11 ವರ್ಷಗಳ ಆಡಳಿತದಲ್ಲಿ ದೇಶವು ನಾಲ್ಕು ಪಟ್ಟು ಅಭಿವೃದ್ಧಿ ಕಂಡಿದೆ. ಜಪಾನನ್ನು ಹಿಂದಿಕ್ಕಿ ಭಾರತದ ಆರ್ಥಿಕತೆಯು ವಿಶ್ವದಲ್ಲೇ ನಾಲ್ಕನೇ ಸ್ಥಾನಕ್ಕೆ ಬಂದಿದೆ. ಇದಕ್ಕೆ ಮೋದಿಯವರ ಗಟ್ಟಿ ನಿರ್ಧಾರಗಳೇ ಕಾರಣ ಎಂದರು.**

# ನಾಲ್ ರೋಡ್ ಸರ್ಕಲ್ ಬಳಿ ಪೆಟ್ಟಿಗೆ ಅಂಗಡಿಗಳ ತೆರವು

• **ಉದಯವಾಹಿನಿ, ಹನೂರು**

ಗಡಿಗ್ರಾಮ ನಾಲ್ ರೋಡ್ ಸರ್ಕಲ್ ಬಳಿ ಪೆಟ್ಟಿಗೆ ಅಂಗಡಿಗಳನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ತೆರವುಗೊಳಿಸಿರುವುದನ್ನು ಖಂಡಿಸಿ ರೈತ ಸಂಘಟನೆ, ಸಾರ್ವಜನಿಕರು ಧರಣಿ ಪ್ರತಿಭಟನೆ ನಡೆಸಿದರು. ತಾಲ್ಲೂಕಿನ ಮಾರ್ಟಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ನಾಲ್ ರೋಡ್‌ಸರ್ಕಲ್ ಬಳಿ ಜಮಾಯಿಸಿದ ಕರ್ನಾಟಕ ರಾಜ್ಯ ರೈತ ಸಂಘಟನೆಯವರು, ತೆರವು ಮಾಡಲಾಗಿದ್ದ ಅಂಗಡಿಯವರು ಸಾರ್ವಜನಿಕರು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗುತ್ತಾ ಪ್ರತಿಭಟಿಸಿದರು.

ಅಂಗಡಿಗಳನ್ನು ರಾತ್ರೋರಾತ್ರಿ ತೇರು ಮಾಡಿದ್ದಾರೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳ ನಡೆಯನ್ನು ಖಂಡಿಸಿ ಧಿಕ್ಕಾರ ಕೂಗಿ ಪ್ರತಿಪಟಿಸಿದ ರೈತರು. ಅರಣ್ಯ ಇಲಾಖೆಯ ಮೇಲಾಧಿಕಾರಿಗಳು ಬರುವಂತೆ ಆಗ್ರಹಿಸಿ ಒಟ್ಟು ಹಿಡಿದು ತೆರವು ಮಾಡಿರುವ ಅಂಗಡಿಗಳನ್ನು ಮತ್ತೆ ಅದೇ ಜಾಗದಲ್ಲಿ ಇಟ್ಟುಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಎಸಿಎಫ್ ಗಜಾನನ ಹೆಗ್ಡೆ ಅವರು ಪ್ರತಿಭಟನೆ ನಿರತರನ್ನು ಮಾತನಾಡಿಸುತ್ತಾ ಅರಣ್ಯ


ಉದಯವಾಹಿನಿ ಚಿತ್ರ

ಇಲಾಖೆಗೆ ಸಂಬಂಧಿಸಿದ ಜಾಗದಲ್ಲಿ ಪೆಟ್ಟಿಗೆ ಅಂಗಡಿಗಳನ್ನು ಇಟ್ಟಿರುವುದು ಕಾನೂನು ವಾಹಿರವಾಗಿದೆ.

ಇಲ್ಲಿ ಅಂಗಡಿಗಳನ್ನು ಇಡುವುದಕ್ಕೆ ಯಾವುದೇ ಅವಕಾಶವಿಲ್ಲ ಪ್ರತಿಭಟನೆಯನ್ನು ಕೈ ಬಿಟ್ಟು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸಹಕಾರ ನೀಡಿ ಎಂದು ಮನವೊಲಿಸಿದರು. ನಾಲ್ ರೋಡು ಸರ್ಕಲ್ ಹತ್ತಿರ ಕಳೆದ 30 ವರ್ಷ ದಿಂದಲೂ ಸಹ ನಾವು ಹೂಗ್ಯ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಯಲ್ಲಿ ಪೆಟ್ಟಿಗೆ ಅಂಗಡಿ ಇಟ್ಟು ವ್ಯಾಪಾರ ನಡೆಸುತ್ತಿದ್ದೇವೆ. ಇದರ ಮೂಲಕ ಜೀವನ ನಡೆಸುತ್ತಾ ಬಂದಿದ್ದಾರೆ. ಇಲ್ಲಿ ಮೂರು ನಾಲ್ಕು ಅಂಗಡಿಗಳನ್ನು ಮಾತ್ರ ತೆರವು ಮಾಡಿದ್ದಾರೆ. ಇನ್ನು ಕೆಲವು ಅಂಗಡಿಗಳನ್ನು ತೆರವು ಮಾಡದೆ ತಾರತಮ್ಯ ಮಾಡುತ್ತಿದ್ದಾರೆ. ಆದರೇ ಅರಣ್ಯ ಇಲಾಖೆಯ ಅಧಿಕಾರಿಗಳು ಯಾವುದೇ ನೋಟೀಸ್ ಸಹ ನೀಡದೆ. ರಾತ್ರೋರಾತ್ರಿ ಏಕಾಏಕಿ ಪೆಟ್ಟಿ ಅಂಗಡಿಯನ್ನು ಜೂ. 1ರಂದು ನಮಗೆ ಗೊತ್ತಿಲ್ಲದೇ ಹಾಗೆ ತೆರವುಗೊಳಿಸಿದ್ದಾರೆ. ಇದರಿಂದ ತುಂಬಾ ತೊಂದರೆಯಾಗಿದೆ. ಮತ್ತೆ ಅಂಗಡಿ ಇಟ್ಟುಕೊಳ್ಳಲು ಅವಕಾಶ ನೀಡಬೇಕು ಎಂದು ರೈತ ಸಂಘಟನೆಯವರು ಆಗ್ರಹಿಸಿದರು.

**ಕೆಲಕಾಲ ಅರಣ್ಯ ಇಲಾಖೆಯ ಅಧಿಕಾರಿಗಳು ರೈತ ಸಂಘಟನೆಯವರಿಗೂ ಮಾತಿನ ಚಕಮಕಿ ನಡೆಯಿತು. ಪೊಲೀಸ್ ಅಧಿಕಾರಿಗಳು ಸಹ ಪ್ರತಿಭಟನಾ ನಿರತರಿಗೆ ಮನವೊಲಿಸಿ ಅರಣ್ಯ ಇಲಾಖೆಗೆ ನಿಯಮಗಳಿಗೆ ಸಹಕಾರ ನೀಡುವಂತೆ ನೀಡಿ ಮನವೊಲಿಸುವ ಪ್ರಯತ್ನ ಮಾಡಿದರು. ನಾಲ್ ರೋಡ್ ಬಳಿ ತೆರವು ಮಾಡಿರುವ ಅಂಗಡಿಗಳನ್ನು ಇಟ್ಟುಕೊಂಡಿದ್ದ ಜಾಗವನ್ನು ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಜಂಟಿ ಸರ್ವೆ ಕಾರ್ಯ ನಡೆಸಿ ಮುಂದಿನ ಕ್ರಮಕ್ಕೆ ಕಾಲಾವಕಾಶಕ್ಕೆ ಚರ್ಚೆ ನಡೆಸಿ ನಂತರ ಪ್ರತಿಭಟನೆ ಕೈಬಿಡಲಾಯಿತು.**

# ಮಕ್ಕಳಿಂದ ಶಾಲೆ ಶುಚಿ: ಸಹ ಶಿಕ್ಷಕಿ ಅಮಾನತು

• **ಉದಯವಾಹಿನಿ, ರಾಮನಗರ**

ನಗರದ ತುರುಪಲಾಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಜಿಲ್ಲಾ ಪಂಚಾಯಿತಿ ಸಿಇಒ ಅನ್ಮೋಲ್ ಜೈನ್ ಇತ್ತೀಚೆಗೆ ಭೇಟಿ ನೀಡಿದ್ದಾಗ ಕೆಲ ವಿದ್ಯಾರ್ಥಿಗಳು ಸ್ವಚ್ಛತೆ ಕೆಲಸದಲ್ಲಿ ನಿರತರಾಗಿದ್ದ ಹಿನ್ನೆಲೆಯಲ್ಲಿ, ಶಾಲೆಯ ಸಹ ಶಿಕ್ಷಕಿ ಗಂಗಾಂಭಿಕ ಕೆ.ಆರ್ ಅವರನ್ನು ಕರ್ತವ್ಯ ನಿರ್ಲಕ್ಷ್ಯತೆ ಮತ್ತು ಕರ್ತವ್ಯ ಲೋಪದ ಆಧಾರದ ಮೇಲೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಅಮಾನತು ಮಾಡಿದ್ದಾರೆ. ಇದಕ್ಕೆ ಶಿಕ್ಷಕರ ವಲಯದಲ್ಲಿ ತೀವ್ರ ಖಂಡನೆ ವ್ಯಕ್ತವಾಗಿದೆ. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಸಹ ಅಮಾನತು ಖಂಡಿಸಿದ್ದು, ಕೂಡಲೇ ಆದೇಶ ಹಿಂಪಡೆಯುವಂತೆ ಆಗ್ರಹಿಸಿದ್ದಾರೆ.

ಈ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಹಾಗೂ ಜಿ.ಪಂ. ಸಿಇಒ ಅವರಿಗೂ ಪತ್ರ ಬರೆದಿರುವ ಅವರು, ಅಮಾನತು ವಿರೋಧಿಸಿ ಜೂನ್ 17ರಂದು ಜಿ.ಪಂ. ಕಚೇರಿ ಎದುರು ಧರಣಿ ಮಾಡುವುದಾಗಿ ತಿಳಿಸಿದ್ದಾರೆ.




**ಹಾಲು ಚೆಲ್ಲಿತ್ತು:** ಜೂನ್ 6ರಂದು ಬೆಳಿಗ್ಗೆ 10.45ರ ಸುಮಾರಿಗೆ ಶಾಲೆಯ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಹಾಲು ವಿತರಿಸಲಾಗಿತ್ತು. ಈ ವೇಳೆ, ಸ್ವಲ್ಪ ಹಾಲು ಚೆಲ್ಲಿತ್ತು. ಅದನ್ನು ಸ್ವಚ್ಛಗೊಳಿಸಲು ಶಿಕ್ಷಕಿಯೇ ಮುಂದಾದರು. ಅದನ್ನು ಗಮನಿಸಿದ ವಿದ್ಯಾರ್ಥಿಗಳು ತಾವೇ ಶುಚಿಗೊಳಿಸತೊಡಗಿದರು.

ಅದೇ ಸಂದರ್ಭದಲ್ಲಿ ಶಾಲೆಗೆ ಜಿ.ಪಂ. ಸಿಇಒ ಅನಿರೀಕ್ಷಿತವಾಗಿ ಭೇಟಿ ನೀಡಿದರು ಎಂದು ಶಿಕ್ಷಕರೊಬ್ಬರು ತಿಳಿಸಿದರು. ಚೆಲ್ಲದ ಹಾಲನ್ನು ಮಕ್ಕಳು ಸ್ವಚ್ಛಗೊಳಿಸುತ್ತಿರುವುದನ್ನು ಕಂಡು ಶಿಕ್ಷಕಿಯನ್ನು ತರಾಟೆಗೆ ತೆಗೆದುಕೊಂಡಿದ್ದ ಸಿಇಒ, ಶಿಕ್ಷಕಿಯನ್ನು ಅಮಾನತು ಮಾಡುವಂತೆ ಡಿಡಿಪಿಐಗೆ ಸೂಚಿಸಿದ್ದರು. ಘಟನೆ ಕುರಿತು ಶಿಕ್ಷಕಿಗೆ ನೋಟಿಸ್ ನೀಡದ, ಯಾವುದೇ ವಿವರಣೆ ಪಡೆಯದ ಡಿಡಿಪಿಐ ಸಂಜೆಯ ಹೊತ್ತಿಗೆ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಅಮಾನತು ಪ್ರಶ್ನಿಸಿ ಶಿಕ್ಷಕಿ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮೆಟ್ಟಿಲೇರಿದ್ದು, ವಿಚಾರಣೆ ನಡೆಸಿದ ಮಂಡಳಿಯು ಅಮಾನತಿಗೆ ತಡೆಯಾಜ್ಞೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

# ಅಪಾಯದ ಅಂಚಿನಲ್ಲಿರುವ ವಿದ್ಯುತ್ ಕಂಬ

• **ಉದಯವಾಹಿನಿ, ಪಾತಪಾಳ್ಯ**

ತಾಲ್ಲೂಕಿನ ತೋಳ್ಳಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಮ್ಮಾಂಡ್ಲಪಲ್ಲಿ ಗ್ರಾಮದ ರಸ್ತೆಯಲ್ಲಿ ವಿದ್ಯುತ್ ಕಂಬದ ಕೆಳಭಾಗದಲ್ಲಿ ಶಿಥಿಲಗೊಂಡಿದ್ದು, ಅಪಾಯದ ಅಂಚಿನಲ್ಲಿದೆ. ಗ್ರಾಮದ ಗ್ರಾಮಸ್ಥರಾದ ಶ್ರೀರಾಮರೆಡ್ಡಿ, ಶ್ರೀನಿವಾಸರೆಡ್ಡಿ, ನಾರಾಯಣಮ್ಮ, ವೆಂಕಟರವಣಮ್ಮ ಗ್ರಾಮಸ್ಥರು ಒಂದು ವರ್ಷದಿಂದ ಶಿಥಿಲಗೊಂಡ ವಿದ್ಯುತ್ ಕಂಬದ ಬಗ್ಗೆ ಬೆಸ್ಕಾಂ ಅಧಿಕಾರಿಗಳು, ಸಿಬ್ಬಂದಿಗೆ ಮಾಹಿತಿ ನೀಡಿ, ಹೊಸ ವಿದ್ಯುತ್ ಕಂಬ ಅಳವಡಿಸಲು ಮನವಿ ಮಾಡುತ್ತಿದ್ದಾರೆ.

ಆದರೆ, ಯಾವೇದು ಪ್ರಯೋಜನವಾಗಿಲ್ಲ ಎಂದು ಆರೋಪಿಸುತ್ತಾರೆ. ಗ್ರಾಮದ ಹಿರಿಯ ನಾಗರಿಕ ಶ್ರೀರಾಮರೆಡ್ಡಿ ಮಾತನಾಡಿ, ಗ್ರಾಮದಲ್ಲಿ ವಾಸ ಮಾಡುವ ಜನರು, ಕುರಿ, ಎತ್ತು, ಮೇಕೆಗಳು, ಹಸುಗಳು ಇರುವ ಜಾಗದಲ್ಲಿ ವಿದ್ಯುತ್ ಕಂಬದ ಕೆಳಗೆ ಶಿಥಿಲವಾಗಿದೆ. ಸಿಮೆಂಟ್ ಉದುರಿ, ಕೇವಲ ಕಂಬಿಗಳ ಮೇಲೆ ವಿದ್ಯುತ್ ಕಂಬ ನಿಂತಿದೆ. ಬೃಹತ್ ವಾಹನವು ವಿದ್ಯುತ್ ಕಂಬಕ್ಕೆ ಆಕಸ್ಮಿಕವಾಗಿ ಡಿಕ್ಕಿ ಹೊಡೆದರೆ, ಕಂಬವು ಮನೆ, ಪ್ರಾಣಿಗಳ ಶೆಡ್‌ಗಳ ಮೇಲೆ ಬೀಳುವ ಅಪಾಯವಿದೆ ಎನ್ನುತ್ತಾರೆ. ಈ ಬಗ್ಗೆ ಬೆಸ್ಕಾಂ ಕಾರ್ಯಪಾಲಕ ಅಭಿಯಂತರ ಸೋಮಶೇಖರ್ ಪ್ರತಿಕ್ರಿಯಿಸಿ, ಈ ಕೂಡಲೇ ಗ್ರಾಮಕ್ಕೆ ಭೇಟಿ ನೀಡಿ ಶಿಥಿಲಗೊಂಡ ವಿದ್ಯುತ್ ಕಂಬದ ಬಗ್ಗೆ ಸ್ಥಳ ಪರಿಶೀಲನೆ ಮಾಡಲಾಗುವುದು. ಹೊಸ ಕಂಬ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

# ಉಪನೋಂದಣಾಧಿಕಾರಿ ಕಚೇರಿ ಮೇಲೆ ಲೋಕಾ ದಾಳಿ

• **ಉದಯವಾಹಿನಿ, ಚನ್ನಪಟ್ಟಣ**

ಲೋಕಾಯುಕ್ತ ಅಧಿಕಾರಿಗಳ ತಂಡ ನಗರದ ಉಪ ನೋಂದಣಾಧಿಕಾರಿಗಳ ಕಚೇರಿ ಮೇಲೆ ಗುರುವಾರ ದಾಳಿ ನಡೆಸಿ ಕಡತಗಳ ಪರಿಶೀಲನೆ ನಡೆಸಿದರು. ಕಚೇರಿಯಲ್ಲಿ ಲಂಚಾವತಾರ ತಾಂಡವಾಡುತ್ತಿದೆ, ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ ಎಂದು ಸಾರ್ವಜನಿಕರಿಂದ ಬಂದ ದೂರಿನ ಹಿನ್ನೆಲೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಕಚೇರಿಯ ಒಳಗೆ ಓಡಾಡಿ ಅಲ್ಲಲ್ಲಿ ಇದ್ದ ಕಡತಗಳನ್ನು ಪರಿಶೀಲನೆ ನಡೆಸಿ, ಉಪ ನೋಂದಣಾಧಿಕಾರಿ ಮೇನಕಾ ಹಾಗೂ ಕಚೇರಿ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡರು.

ಕಚೇರಿಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಲಂಚ ಇಲ್ಲದೆ ಯಾವುದೇ ಕೆಲಸಗಳು ಆಗುವುದಿಲ್ಲ. ಜೊತೆಗೆ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದ್ದು, ಇದರಲ್ಲಿ ಕಚೇರಿಯಲ್ಲಿ ಕಾರ್ಯನಿರ್ವಹಿಸುವ ಕೆಲವರು ಶಾಮೀಲಾಗಿದ್ದಾರೆ ಎಂದು ಸಾರ್ವಜನಿಕರು ನೀಡಿದ ದೂರಿನ ಹಿನ್ನೆಲೆ ಈ ದಾಳಿ ನಡೆದಿದೆ ಎಂದು ಹೇಳಲಾಗಿದೆ. ಲೋಕಾಯುಕ್ತ ಎಸ್.ಪಿ.ಸ್ನೇಹಾ ನೇತೃತ್ವದಲ್ಲಿ ರಾಮನಗರ ಹಾಗೂ ಮಂಡ್ಯ ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿದೆ.


ಉದಯವಾಹಿನಿ ಚಿತ್ರ

**ಲಂಚ ಇಲ್ಲದೆ ಕೆಲಸಗಳು ಆಗುವುದಿಲ್ಲ**

### ಯಾವುದೇ ಮಾಹಿತಿ ನೀಡಲಿಲ್ಲ

**ಕಚೇರಿ ಆವರಣದಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡುವ ಫಲಕಗಳನ್ನು ಹಾಕಿಲ್ಲದ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ಉಪ ನೋಂದಣಾಧಿಕಾರಿಯನ್ನು ಪ್ರಶ್ನಿಸಿ, ಶೀಘ್ರ ಸಾರ್ವಜನಿಕ ಮಾಹಿತಿ ಫಲಕಗಳನ್ನು ಹಾಕುವಂತೆ ತಾಕೀತು ಮಾಡಿದರು. ರಾತ್ರಿಯಾದರೂ ದಾಖಲಾತಿ, ಕಡತಗಳ ಪರಿಶೀಲನೆ ಮುಂದುವರೆದಿತ್ತು. ದಾಳಿಯ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ಯಾವುದೇ ಮಾಹಿತಿ ನೀಡಲಿಲ್ಲ.**

## ಸಿಎಂರಿಂದ ವರ್ಚುವಲ್ ಮೂಲಕ ಜಿಲ್ಲೆಯ ಹೊನ್ನಹಳ್ಳಿ ಸೌರ ವಿದ್ಯುತ್ ಘಟಕ ಲೋಕಾರ್ಪಣೆ

# 3 ಮೆಗಾ ವ್ಯಾಟ್‌ವರೆಗಿನ ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರ ಸ್ಥಾಪನೆ

• **ಉದಯವಾಹಿನಿ, ಚಾಮರಾಜನಗರ**

ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸುಸ್ಥಿರ ವಿದ್ಯುತ್ ಪೂರೈಕೆಯ ಮಹತ್ತರ ಉದ್ದೇಶದ ಪಿಎಂ-ಕುಸುಮ್ ಸಿ ಯೋಜನೆಯಡಿ ಚಾಮರಾಜನಗರ ತಾಲ್ಲೂಕಿನ ಹೊನ್ನಹಳ್ಳಿ ಗ್ರಾಮದಲ್ಲಿ ಸ್ಥಾಪಿಸಿರುವ 2.69 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸಿಎಂ ಸಿದ್ದರಾಮಯ್ಯ ವರ್ಚುವೆಲ್ ಮೂಲಕ ಲೋಕಾರ್ಪಣೆ ಮಾಡಿದರು. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ನಡೆದ ಪಿಎಂ-ಕುಸುಮ್ ಕಾಂಪೊನೆಂಟ್ ಸಿ ಯೋಜನೆ ಚಾಲನೆ ಸಮಾರಂಭದಲ್ಲಿ ಚಾಮರಾಜನಗರ ತಾಲ್ಲೂಕಿನ ಹೊನ್ನಹಳ್ಳಿ, ಇತರೆ ಜಿಲ್ಲೆಗಳ ಸೌರೀಕರಣ ಯೋಜನೆಯನ್ನು ಸಿಎಂ ಬಟನ್ ಒತ್ತುವ ಮೂಲಕ ಉದ್ಘಾಟಿಸಿದರು. ಇಂಧನ ಸಚಿವ ಕೆ.ಜೆ. ಜಾರ್ಜ್, ಉನ್ನತ ಶಿಕ್ಷಣ ಸಚಿವ ಡಾ. ಎಂಸಿ. ಸುಧಾಕರ್ ಇನ್ನಿತರ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಇದರೊಂದಿಗೆ ಚಾಮರಾಜನಗರ ತಾಲ್ಲೂಕಿನ ಹೊನ್ನಹಳ್ಳಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಪಿಎಂ-ಕುಸುಮ್ ಸಿ ಯೋಜನೆಯಡಿ ಹೊನ್ನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಸ್ಥಾಪಿಸಿರುವ 2.69 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕಕ್ಕೆ ಚಾಲನೆ ದೊರೆಯಿತು. ಇದೇ ವೇಳೆ ಮುಖ್ಯಮಂತ್ರಿಗಳು ಗೌರಿಬಿದನೂರಿನಲ್ಲಿ ಉದ್ಘಾಟನೆ



ಉದಯವಾಹಿನಿ ಚಿತ್ರ

**300 ರೈತರಿಗೆ ಅನುಕೂಲ**

ನೆರವೇರಿಸಿದ ಸಮಾರಂಭವನ್ನು ಹೊನ್ನಹಳ್ಳಿಯಲ್ಲಿ ವರ್ಚುವಲ್ ಮೂಲಕ ವೀಕ್ಷಿಸಲಾಯಿತು. ದೊಡ್ಡ ಎಲ್.ಇ.ಡಿ ಪರದೆ ಮೂಲಕ ಕಾರ್ಯಕ್ರಮವನ್ನು ನೇರವಾಗಿ ವೀಕ್ಷಣೆ ಮಾಡಲಾಯಿತು. ಸ್ಥಳೀಯ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ ಅವರು ಭಾಗವಹಿಸಿ ಶುಭ ಹಾರೈಸಿದರು. ಮುಖ್ಯಮಂತ್ರಿಗಳೊಂದಿಗೆ ವರ್ಚುವಲ್ ಮೂಲಕ ಸಂವಾದ ನಡೆಸಿದ ವೇಳೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ ಅವರು ಮಾತನಾಡಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ 3 ಮೆಗಾ ವ್ಯಾಟ್ ವರೆಗಿನ ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಿದ್ದೇವೆ.

ನಿಗಮದ ವತಿಯಿಂದ 950 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದ್ದೇವೆ. ಈ ವರ್ಷ 500 ಮೆಗಾವ್ಯಾಟ್ ಉತ್ಪಾದನೆಗೆ ಅಗತ್ಯವಿರುವ ಜಮೀನನ್ನು ಈಗಾಗಲೇ ಹೊಂದಿದ್ದೇವೆ ಎಂದರು. ಪ್ರಸ್ತುತ ಸೌರ ವಿದ್ಯುತ್ ಘಟಕದ ಚಾಲನೆಯಿಂದ 300 ರೈತರಿಗೆ ಅನುಕೂಲವಾಗಲಿದೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ನಿಗಮದ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ ಅವರು ಹೇಳಿದರು.

### ಹಗಲು ಹೊತ್ತು ವಿದ್ಯುತ್ ಪೂರೈಕೆ

**ಮೊದಲು ಮುಖ್ಯಮಂತ್ರಿಯವರೊಂದಿಗೆ ನಡೆದ ಸಂವಾದ ವೇಳೆ ಯೋಜನೆ ಕುರಿತು ಅನಿಸಿಕೆ ವ್ಯಕ್ತಪಡಿಸಿದ ಹೊನ್ನಹಳ್ಳಿ ಗ್ರಾಮದ ಮಹೇಶ್ ಅವರು ಸೋಲಾರ್ ವಿದ್ಯುತ್ ಘಟಕದಿಂದ ನಮಗೆ ಅನುಕೂಲವಾಗುತ್ತದೆ. ರಾತ್ರಿ ವೇಳೆ ಕಾಡು ಪ್ರಾಣಿಗಳ ಹಾವಳಿಯಿಂದ ಜಮೀನಿನಲ್ಲಿ ಪಂಪ್ ಸೆಟ್ ಚಾಲನೆ ಮಾಡಲು ಆಗುತ್ತಿರಲಿಲ್ಲ. ಈಗ ಹಗಲು ಹೊತ್ತು ವಿದ್ಯುತ್ ಪೂರೈಕೆ ಮಾಡುತ್ತಿರುವುದರಿಂದ ನಮಗೆ ಪ್ರಯೋಜನವಾಗುತ್ತಿದೆ.**

**ಸೌರ ವಿದ್ಯುತ್ ಯೋಜನೆ ಆದ ಮೇಲೆ ರೈತರು ರಾತ್ರಿ ವೇಳೆ ಜಮೀನಿಗೆ ನೀರು ಹಾಯಿಸಲು ಹೋಗಬೇಕಾದ ಅಗತ್ಯವಿಲ್ಲ. ಹಗಲಿನಲ್ಲಿಯೇ ಸೌರ ವಿದ್ಯುತ್ ನೀಡಲಿದ್ದೇವೆ. 7 ಗಂಟೆ ಕಾಲ 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಇದರಿಂದ ರಾತ್ರಿ ವೇಳೆ ಜಮೀನಿಗೆ ಹೋಗುವುದು ತಪ್ಪಲಿದೆ**

**– ಸಿದ್ದರಾಮಯ್ಯ, ಮುಖ್ಯಮಂತ್ರಿ**

# ಮಿನಿ ನ್ಯೂಸ್

## ಕಚೇರಿ ಮೇಲೆ ಲೋಕಾಯುಕ್ತ ದಾಳಿ

• **ಉದಯವಾಹಿನಿ, ತುಮಕೂರು**

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ದೂರುಗಳು ಬರುತ್ತಿರುವ ಹಿನ್ನಲೆಯಲ್ಲಿ ಜಿಲ್ಲೆಯ ಎಲ್ಲಾ 10 ತಾಲ್ಲೂಕು ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದರು. ಬೆಳಿಗ್ಗೆ ಏಕಕಾಲಕ್ಕೆ ಎಲ್ಲಾ ಹತ್ತು ತಾಲ್ಲೂಕು ಕಚೇರಿಗಳಿಗೆ ಬಂದ ಅಧಿಕಾರಿಗಳ ತಂಡ ಸಂಜೆ ವರೆಗೂ ತಪಾಸಣೆ ನಡೆಸಿತು. ಹತ್ತು ಅಧಿಕಾರಿಗಳ ನೇತೃತ್ವದಲ್ಲಿ 40 ಸಿಬ್ಬಂದಿಗಳು ದಾಳಿಯಲ್ಲಿ ಭಾಗವಹಿಸಿದ್ದಾರೆ. ಪರಿಶೀಲನೆ ಗುರುವಾರವೂ ಮುಂದುವರಿಯಲಿದೆ. ನಂತರ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವರದಿ ಸಿದ್ಧಪಡಿಸಿ ಕ್ರಮ ಕೈಗೊಳ್ಳಲು ಲೋಕಾಯುಕ್ತ ಅಧಿಕಾರಿಗಳು ಮುಂದಾಗಿದ್ದಾರೆ.

ಕಂದಾಯ ಇಲಾಖೆಯಲ್ಲಿನ ಅಕ್ರಮಗಳು, ಭ್ರಷ್ಟಾಚಾರ, ಹಣಕ್ಕೆ ಪೀಡಿಸುವುದು, ಅರ್ಜಿ ವಿಲೇವಾರಿ ಮಾಡದಿರುವುದು, ಖಾತೆ ಬದಲಾವಣೆ ಮಾಡಿಕೊಡದಿರುವುದು, ಸಾಗುವಳಿ ಚೀಟಿ ವಿತರಣೆಯಲ್ಲಿ ಲೋಪ ಸೇರಿದಂತೆ ಸಾಕಷ್ಟು ದೂರುಗಳು ಲೋಕಾಯುಕ್ತಕ್ಕೆ ಸಲ್ಲಿಕೆಯಾಗಿದ್ದವು. ಇತರೆ ಇಲಾಖೆಗಳಿಗಿಂತ ಕಂದಾಯ ಇಲಾಖೆ ವಿರುದ್ಧವೇ ಹೆಚ್ಚು ದೂರುಗಳು ಬಂದಿದ್ದರಿಂದ ದಾಳಿ ನಡೆದಿದೆ. ಕಚೇರಿ ಪರಿಶೀಲನೆಗೆ ಬೆಂಗಳೂರು, ಇತರೆಡೆಗಳ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಕಂದಾಯ ಇಲಾಖೆ ವಿರುದ್ಧ ವ್ಯಾಪಕ ಪ್ರಮಾಣದಲ್ಲಿ ದೂರುಗಳು ಬಂದಿದ್ದರಿಂದ ಜಿಲ್ಲೆಯ ಎಲ್ಲಾ 10 ತಾಲ್ಲೂಕು ಕಚೇರಿಗಳಲ್ಲೂ ಏಕಕಾಲಕ್ಕೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗುತ್ತಿದೆ. ಏನೆಲ್ಲ ಲೋಪದೋಷಗಳು ಕಂಡು ಬರುತ್ತವೆ ಎಂಬುದನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿನಾರಾಯಣ ತಿಳಿಸಿದರು.

## ಒಂಟಿ ಸಲಗ ಸಂಚಾರ ವಿರಾಜಪೇಟೆ ಗ್ರಾಮದಲ್ಲಿ ಆತಂಕ

• **ಉದಯವಾಹಿನಿ, ವಿರಾಜಪೇಟೆ**

ಸಮೀಪದ ಬಿಟ್ಟಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಂದನೇ ರುದ್ರಗುಪ್ಪೆ ಗ್ರಾಮದ ಸಂಪರ್ಕ ರಸ್ತೆಯೊಂದರಲ್ಲಿ ಗುರುವಾರ ಒಂಟಿ ಸಲಗವೊಂದು ಸಂಚರಿಸಿ ಗ್ರಾಮಸ್ಥರಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಿತು. ಗ್ರಾಮದ ಕಾಫಿ ತೋಟಗಳಲ್ಲಿ ಬೀಡುಬಿಟ್ಟಿರುವ ಕಾಡಾನೆಗಳ ಹಿಂಡು, ಕಾಫಿ ಗಿಡಗಳು, ಫಲ ನೀಡುವ ಬಾಳೆ ತೆಂಗು ಗಿಡಗಳನ್ನು ಹಾನಿ ಉಂಟು ಮಾಡಿವೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಗ್ರಾಮಸ್ಥ ಅಟ್ರಂಗಡ ನಂದ ಮಾತನಾಡಿ, ಸಮೀಪದ ಬಿ.ಶೆಟ್ಟಿಗೇರಿ ವ್ಯಾಪ್ತಿಯಲ್ಲಿ ಬೀಡುಬಿಟ್ಟಿದ್ದ ಕಾಡಾನೆಗಳು ರುದ್ರಗುಪ್ಪೆ ಗ್ರಾಮದ ತೋಟಗಳಿಗೆ ಲಗ್ಗೆ ಇಟ್ಟಿವೆ. ತೋಟಗಳಲ್ಲಿ ಅಪಾರ ಪ್ರಮಾಣದಲ್ಲಿ ನಷ್ಟ ಸಂಭವಿಸಿದೆ. ಮೂರು ದಿನಗಳ ಹಿಂದೆ ಮೂರು ಕಾಡಾನೆಗಳ ಹಿಂಡು ತನ್ನ ತೋಟದಲ್ಲಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ತೋಟಕ್ಕೆ ಗೊಬ್ಬರ ಹಾಕಲು ಸಾಧ್ಯವಾಗಲಿಲ್ಲ. ಗುರುವಾರ ಮನೆಯ ಮುಂಭಾಗದ ರಸ್ತೆಯಲ್ಲಿ ಒಂಟಿ ಸಲಗವು ಸಂಚರಿಸುತ್ತಿರುವುದು ಕಂಡು ಬಂದಿದೆ. ಸಾಕು ನಾಯಿಗಳ ಕೂಗಾಟಕ್ಕೆ ಬೆದರಿ ಕಾಡಾನೆ ಓಡಲಾರಂಭಿಸಿದೆ. ಘಟನೆಯಿಂದಾಗಿ ಗ್ರಾಮದಲ್ಲಿ ಭಯದ ವಾತಾವರಣವುಂಟಾಗಿದೆ. ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಕಾಡಾನೆಗಳನ್ನು ಅರಣ್ಯಕ್ಕೆ ಅಟ್ಟಬೇಕಿದೆ ಎಂದು ಆಗ್ರಹಿಸಿದರು. ಗ್ರಾಮದ ತೋಟಗಳಲ್ಲಿ ಕಾಡಾನೆಗಳು ದಾಂಧಲೆ ನಡೆಸಿ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ಗ್ರಾಮಸ್ಥರು ಎದುರಿಸುತ್ತಿರುವ ಕಾಡಾನೆಗಳ ಮತ್ತು ವನ್ಯಜೀವಿಗಳ ಉಪಟಳವನ್ನು ತಡೆಗಟ್ಟಲು ಶಾಶ್ವತ ಯೋಜನೆ ರೂಪಿಸಲು ಅರಣ್ಯ ಇಲಾಖೆ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

## ಶಾಲಾ ಅಭಿವೃದ್ಧಿಗೆ ಕಾವೇರಿ ಆರತಿ ಹಣ ಬಳಸಿಕೊಳ್ಳಿ: ಮನವಿ

• **ಉದಯವಾಹಿನಿ, ಮಂಡ್ಯ**

ಕೆಆರ್‌ಎಸ್ ಅಣೆಕಟ್ಟೆಯ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆ ಕೈಬಿಡುವುದು, ಕಾವೇರಿ ಆರತಿ ಬದಲು ಇದರ ಹಣವನ್ನು ಸರ್ಕಾರಿ ಶಾಲೆ ಉಳಿವಿಗೆ ಖರ್ಚು ಮಾಡಬೇಕು ಎಂದು ಒತ್ತಾಯಿಸಿ ಕನ್ನಡಸೇನೆ ಸಂಘಟನೆಯ ಕಾರ್ಯಕರ್ತರು ಜಿಲ್ಲಾಧಿಕಾರಿ ಕುಮಾರ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು, ಈಗಾಗಲೇ ಜಿಲ್ಲೆಯ ಪ್ರಗತಿಪರ ಸಂಘಟನೆಗಳ ಮುಖಂಡರ ಸಭೆ ನಡೆಸಿದ್ದು, ಯೋಜನೆ ಕೈಬಿಡುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವರೇ ಹೇಳಿದ್ದರು.

ಆದರೆ, ಕಾಮಗಾರಿ ಮತ್ತೆ ಪ್ರಾರಂಭ ಮಾಡುವುದು ಏಕೆ ಎಂದು ಪ್ರಶ್ನಿಸಿದರು. ವಿರೋಧದ ನಡುವೆಯೂ ಸಾರ್ವಜನಿಕರ ತೆರಿಗೆ ಹಣ ಬಳಕೆ ಮಾಡುವುದು ಎಷ್ಟರಮಟ್ಟಿಗೆ ಸರಿ ಕೋಟಿ ಕೋಟಿ ವೆಚ್ಚ ಮಾಡುವ ಕಾವೇರಿ ಆರತಿ ಯಾವುದೇ ಕಾರಣಕ್ಕೂ ಬೇಡ, ಈ ಹಣವನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

## ಹುಲಿ ದಾಳಿಯಿಂದ ಮೃತಪಟ್ಟ ರಂಗಮ್ಮ ಕುಟುಂಬಕ್ಕೆ ಪರಿಹಾರ ವಿತರಣೆ

• **ಉದಯವಾಹಿನಿ, ಚಾಮರಾಜನಗರ**

ಈಚೆಗೆ ಹುಲಿ ದಾಳಿಯಿಂದ ಮೃತಪಟ್ಟ ರಂಗಮ್ಮ ಅವರ ಕುಟುಂಬ ಸದಸ್ಯರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ 20 ಲಕ್ಷದ ಪರಿಹಾರ ಚೆಕ್ ವಿತರಿಸಿದರು. ಬೇಡಗುಳಿ ಗ್ರಾಮಕ್ಕೆ ಭೇಟಿನೀಡಿ ಮೃತರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ಶಾಸಕರು ವೈಯಕ್ತಿಕ ಪರಿಹಾರ, ಅರಣ್ಯ ಇಲಾಖೆಯಿಂದ ಮಂಜೂರಾದ ಪರಿಹಾರದ ಚೆಕ್ ನೀಡಿ ಬೇಡಗುಳಿ ಕಾಡಂಚಿನ ಗ್ರಾಮವಾಗಿದ್ದು ಗ್ರಾಮಸ್ಥರು ಎಚ್ಚರಿಕೆಯಿಂದ ಇರಬೇಕು ಎಂದರು. ಇದೇವೇಳೆ ವಾಸಯೋಗ್ಯ ಮನೆ ಇಲ್ಲದೆ ತೊಂದರೆ ಅನುಭವಿಸುತ್ತಿದ್ದು ಸರ್ಕಾರದಿಂದ ಮನೆ ಮಂಜೂರು ಮಾಡಿಸಬೇಕು ಎಂದು ಮೃತರ ಪುತ್ರರು ಶಾಸಕರಿಗೆ ಮನವಿ ಮಾಡಿದರು. ಅಧಿಕಾರಿಗಳ ಜೊತೆ ಚರ್ಚಿಸಿ ಮನೆ ಮಂಜೂರು ಮಾಡಿಸುವುದಾಗಿ ಭರವಸೆ ನೀಡಿದರು.

## ಕಾಡುಗೊಲ್ಲ ಜಾತಿ ಪ್ರಮಾಣ ಪತ್ರ ನೀಡಲು ಒತ್ತಾಯ

• **ಉದಯವಾಹಿನಿಮ ಮಾಗಡಿ**

ಕಾಡುಗೊಲ್ಲ ಸಮುದಾಯದವರಿಗೆ ಜಾತಿ ಪ್ರಮಾಣ ಪತ್ರ ನೀಡುವಂತೆ ಒತ್ತಾಯಿಸಿ ಕಾಡು ಗೊಲ್ಲರ ಸಂಘದ ವತಿಯಿಂದ ಉಪ ತಹಶೀಲ್ದಾರ್ ಪ್ರಭಾಕರ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘದ ತಾಲ್ಲೂಕು ಅಧ್ಯಕ್ಷ ಬಿ.ಡಿ.ಸುರೇಶ್ ಮಾತನಾಡಿ, ಕಾಡುಗೊಲ್ಲ ಸಮುದಾಯ ಒಂದು ಬುಡಕಟ್ಟು ಸಮುದಾಯ. ಇವರು ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಹಿಂದುಳಿದಿದ್ದು, ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಹಾಗಾಗಿ ಸರ್ಕಾರ ಈ ಸಮುದಾಯಕ್ಕೆ ಜಾತಿ ಪ್ರಮಾಣ ಪತ್ರ ನೀಡಬೇಕೆಂದು ಅಧಿಸೂಚನೆ ಹೊರಡಿಸಿದೆ. ಇದನ್ನು ಪರಿಗಣಿಸಿ ಕೆಲ ಜಿಲ್ಲೆ, ತಾಲ್ಲೂಕುಗಳಲ್ಲಿ ಜಾತಿ ಪ್ರಮಾಣ ಪತ್ರ ನೀಡಿದ್ದಾರೆ. ಹಾಗಾಗಿ ನಮ್ಮ ತಾಲ್ಲೂಕಿನಲ್ಲಿ ನೀಡಿದರೆ ಸರ್ಕಾರದಿಂದ ಬರುವ ಸೌಕರ್ಯ, ಅನುದಾನ ಪಡೆಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಅಂತರಾಳದಿಂದ..
EDITORIAL


# ಕುಂಭಮೇಳ ಕಾಲ್ತುಳಿತ: ಕಳವಳಕಾರಿ ತನಿಖಾ ವರದಿ

ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಚರ್ಚೆಯಲ್ಲಿರುವಾಗಲೇ ಇತ್ತ ಕುಂಭಮೇಳ ಕಾಲ್ತುಳಿತಕ್ಕೆ ಸಂಬಂಧಿಸಿ ಇನ್ನಷ್ಟು ಕಳವಳಕಾರಿ ತನಿಖಾ ವರದಿಗಳು ಹೊರ ಬೀಳುತ್ತಿವೆ. ಬೆಂಗಳೂರು ಕಾಲ್ತುಳಿತಕ್ಕೆ ಸಂಬಂಧಿಸಿ ರಾಜ್ಯದ ಮುಖ್ಯಮಂತ್ರಿಯ ರಾಜೀನಾಮೆಗೆ ಒತ್ತಾಯಿಸುತ್ತಿರುವ ಬಿಜೆಪಿಯ ನಾಯಕರು ಉತ್ತರ ಪ್ರದೇಶದ ಆತಂಕಕಾರಿ ವರದಿಗಳಿಗೆ ಕಣ್ಣಿದ್ದೂ ಕುರುಡರಂತೆ, ಕಿವಿಯಿದ್ದೂ ಕಿವುಡರಂತೆ ವರ್ತಿಸುತ್ತಿರುವುದು ವಿಷಾದನೀಯವಾಗಿದೆ. ಆದರೆ ಕುಂಭಮೇಳದಲ್ಲಿ ಕಾಲ್ತುಳಿತದ ಹೊಣೆಯನ್ನು ಈವರೆಗೆ ಅಲ್ಲಿನ ಸರಕಾರ ಹೊತ್ತುಕೊಂಡಿಲ್ಲ ಮಾತ್ರವಲ್ಲ, ದುರಂತದಲ್ಲಿ ಮೃತಪಟ್ಟ ಸಂತ್ರಸ್ತರಿಗೆ ಪರಿಹಾರವನ್ನು ನೀಡಲು ಸಂಪೂರ್ಣ ವಿಫಲವಾಗಿದೆ. ಪ್ರಯಾಗರಾಜ್‌ನ ಕುಂಭಮೇಳದಲ್ಲಿ ಕಾಲ್ತುಳಿತ ಸಂಭವಿಸಿ ನಾಲ್ಕು ತಿಂಗಳು ಕಳೆದಿವೆಯಾದರೂ, ಇನ್ನೂ ಪರಿಹಾರ ವಿತರಣೆಯಾಗಿಲ್ಲ ಎನ್ನುವ ಕಾರಣಕ್ಕೆ ಅಲಹಾಬಾದ್ ಹೈಕೋರ್ಟ್ ಉತ್ತರ ಪ್ರದೇಶ ಸರಕಾರವನ್ನು ಕಳೆದವಾರ ತರಾಟೆಗೆ ತೆಗೆದುಕೊಂಡಿತ್ತು.

**ರಾಜ್ಯದಲ್ಲಿ ನಡೆದಿರುವ ಕಾಲ್ತುಳಿತಕ್ಕೆ ಸಂಬಂಧಿಸಿ ರಾಜ್ಯ ಸರಕಾರ ನೈತಿಕ ಹೊಣೆಯನ್ನು ಹೊತ್ತುಕೊಂಡು ಕ್ಷಮೆಯಾಚಿಸಿದೆ ಮಾತ್ರವಲ್ಲ, ಹಲವು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದೆ. ಪರಿಹಾರ ಘೋಷಣೆ ಮಾಡುವುದರ ಜೊತೆಗೆ ನ್ಯಾಯಾಂಗ ತನಿಖೆಗೂ ಆದೇಶ ನೀಡಿದೆ.**

ರಾಜ್ಯ ಸರಕಾರದ ವರ್ತನೆಯು ಅತ್ಯಂತ ಅಸಹನೀಯವಾಗಿದೆ. ನಾಗರಿಕರ ಸಂಕಷ್ಟವನ್ನು ಪರಿಹರಿಸುವಲ್ಲಿ ಸರಕಾರ ದಿವ್ಯ ನಿರ್ಲಕ್ಷ್ಯವನ್ನು ತೋರಿದೆ ಎಂದು ಹೈಕೋರ್ಟ್ ಹೇಳಿದೆ. ಇದೇ ಸಂದರ್ಭದಲ್ಲಿ ಕಾಲ್ತುಳಿತಕ್ಕೆ ಬಲಿಯಾದ ಸಂತ್ರಸ್ತರ ಜೊತೆಗೆ ಸರಕಾರ ವ್ಯವಹರಿಸಿದ ರೀತಿಯ ಬಗ್ಗೆಯೂ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ಕಾಲ್ತುಳಿತಕ್ಕೆ ಬಲಿಯಾಗಿದ್ದಾಳೆ ಎಂದು ಗುರುತಿಸಿರುವ ಮಹಿಳೆಯ ಮೃತದೇಹವನ್ನು ಸರಕಾರವೇ ಕುಟುಂಬಕ್ಕೆ ಹಸ್ತಾಂತರಿಸಿದ್ದರೂ, ಇದೀಗ ಪರಿಹಾರ ನೀಡಲು ಹಿಂದೇಟು ಹಾಕಿರುವ ಹಿನ್ನೆಲೆಯಲ್ಲಿ ಸಂತ್ರಸ್ತ ಕುಟುಂಬ ನ್ಯಾಯಾಲಯದ ಮೆಟ್ಟಿಲೇರಿತ್ತು. ಇನ್ನೊಂದು ಪ್ರಕರಣದಲ್ಲಿ ಕಾಲ್ತುಳಿತಕ್ಕೆ ಬಲಿಯಾದ ವ್ಯಕ್ತಿಯ ಮೃತದೇಹವನ್ನು ಯಾವುದೇ ವೈದ್ಯಕೀಯ ತಪಾಸಣೆ ಅಥವಾ ಮರಣೋತ್ತರ ಪರೀಕ್ಷೆ ನಡೆಸದೆಯೇ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಿತ್ತು. ಕಾಲ್ತುಳಿತಕ್ಕೆ ಸಂಬಂಧಿಸಿ ಮೃತರಾದವರ ಎಲ್ಲ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಹೈಕೋರ್ಟ್ ಇದೀಗ ತಾಕೀತು ಮಾಡಿದೆ. ಸತ್ತವರ ಸಂಖ್ಯೆಯನ್ನೇ ಬಹಿರಂಗಗೊಳಿಸಲು ಸರಕಾರ ಹಿಂದೇಟು ಹಾಕುತ್ತಿರುವಾಗ, ಸಂತ್ರಸ್ತರಿಗೆ ನ್ಯಾಯಯುತ ಪರಿಹಾರ ಸಿಗುವುದು ದೂರದ ಮಾತಾಗುತ್ತದೆ.ಅಲಹಾಬಾದ್ ಹೈಕೋರ್ಟ್ ಸರಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಬಿಬಿಸಿಯ ತನಿಖಾ ವರದಿಯೊಂದು, ಕಾಲ್ತುಳಿತದಲ್ಲಿ ಸತ್ತವರ ಸಂಖ್ಯೆ ಸರಕಾರ ಹೇಳುವಂತೆ 37 ಅಲ್ಲ 82 ಎಂದು ಹೇಳಿದೆ. ಸಾವನ್ನಪ್ಪಿದವರ ಸಂಖ್ಯೆ ಉತ್ತರ ಪ್ರದೇಶ ಸರಕಾರವು ಬಿಡುಗಡೆಗೊಳಿಸಿದ ಅಂಕಿ ಅಂಶಗಳಿಗಿಂತ ಗಣನೀಯವಾಗಿ ಹೆಚ್ಚಿದೆ. ನಮ್ಮ ವರದಿಗಾರರು 11 ರಾಜ್ಯಗಳ 50ಕ್ಕೂ ಅಧಿಕ ಜಿಲ್ಲೆಗಳಲ್ಲಿಯ 100ಕ್ಕೂ ಅಧಿಕ ಕುಟುಂಬಗಳನ್ನು ಸಂಪರ್ಕಿಸಿದ್ದು ಅವರೆಲ್ಲ ತಮ್ಮ ಪ್ರೀತಿ ಪಾತ್ರರು ಕುಂಭಮೇಳದ ಕಾಲ್ತುಳಿತದಲ್ಲಿ ಮೃತಪಟ್ಟಿದ್ದಾರೆ ಎನ್ನುವುದನ್ನು ತಿಳಿಸಿದ್ದಾರೆ ಎಂದು ವಿಶೇಷ ವರದಿ ಹೇಳಿಕೊಂಡಿದೆ. ಉತ್ತರ ಪ್ರದೇಶ ಸರಕಾರವು 36 ಕುಟುಂಬಗಳಿಗೆ ನೇರ ನಗದು ವರ್ಗಾವಣೆ ಅಥವಾ ಚೆಕ್‌ಗಳ ಮೂಲಕ 25 ಲಕ್ಷ ರೂ. ಪರಿಹಾರವನ್ನು ನೀಡಿದ್ದು, ಹೆಚ್ಚುವರಿಯಾಗಿ 26 ಕುಟುಂಬಗಳಿಗೆ ತಲಾ ಐದು ಲಕ್ಷ ರೂ. ನಗದನ್ನು ವಿತರಿಸಿತ್ತು ಎನ್ನುವುದನ್ನು ಬಿಬಿಸಿ ಬಹಿರಂಗಪಡಿಸಿದೆ. ವಿಪರ್ಯಾಸವೆಂದರೆ, ಐದು ಲಕ್ಷ ರೂ. ಪರಿಹಾರವನ್ನು ಪಡೆದ 26 ಕುಟುಂಬಗಳ ಸಂತ್ರಸ್ತರನ್ನು ಕಾಲ್ತುಳಿತದಲ್ಲಿ ಅಧಿಕೃತವಾಗಿ ಮೃತಪಟ್ಟವರ ಪಟ್ಟಿಯಲ್ಲಿ ಸೇರಿಸಲಾಗಿಲ್ಲ. ಒಂದು ರೀತಿಯಲ್ಲಿ ಅಲ್ಪ ಹಣದ ಮೂಲಕ ಕುಟುಂಬದ ಬಾಯಿ ಮುಚ್ಚಿಸುವ ಪ್ರಯತ್ನವನ್ನು ಸರಕಾರ ಮಾಡಿದೆ. ಸಾವುಗಳು ಕಾಲ್ತುಳಿತದಿಂದ, ಹಠಾತ್ ಅನಾರೋಗ್ಯದಿಂದ ಸಂಭವಿಸಿವೆ ಎಂದು ಹೇಳುವ ದಾಖಲೆಗಳಿಗೆ ಸಹಿ ಹಾಕುವಂತೆ ತಮ್ಮ ಮೇಲೆ ಒತ್ತಡ ಹೇರಲಾಗಿತ್ತು' ಎಂದು ಹಲವು ಕುಟುಂಬಗಳು ಬಿಬಿಸಿ ವರದಿಗಾರರೊಂದಿಗೆ ಹೇಳಿಕೊಂಡಿವೆ. ಸರಕಾರ ಕಾಲ್ತುಳಿತದಿಂದ ಸಂಭವಿಸಿದ ಸಾವುನೋವುಗಳ ವಿವರಗಳನ್ನು ಕಲೆಹಾಕಲು ತನಿಖೆ ನಡೆಸುವ ಬದಲು, ಪೊಲೀಸರ ಮೂಲಕ ಸಾವುನೋವುಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿರುವುದು ಬಿಬಿಸಿ ತನಿಖಾ ವರದಿಯಿಂದ ಬಹಿರಂಗವಾಗಿದೆ. ಕಾಲ್ತುಳಿತದಲ್ಲಿ ಬಿಜೆಪಿಯ ಮಾಜಿ ಪ್ರಧಾನ ಕಾರ್ಯದರ್ಶಿ ಕೆ. ಎನ್. ಗೋವಿಂದಾಚಾರ್ಯರ ಕಿರಿಯ ಸೋದರ ಕೆ. ಎನ್.ವಾಸುದೇವಾಚಾರ್ಯ ಅವರು ಮೃತಪಟ್ಟಿದ್ದು, ಆರಂಭದಲ್ಲಿ ಇದನ್ನು ಅನಾಮಧೇಯ ಮೃತದೇಹವೆಂದು ಗುರುತಿಸಲಾಗಿತ್ತು. ಆದರೆ ಬಿಬಿಸಿಯು ಈ ಮೃತದೇಹವನ್ನು ಗುರುತಿಸಿದೆ. ಈ ಪ್ರಕರಣದಲ್ಲಿ ಸರಕಾರ ಈವರೆಗೆ ಪರಿಹಾರವನ್ನು ಬಿಡುಗಡೆ ಮಾಡಿಲ್ಲ ಎಂದು ವರದಿ ಹೇಳುತ್ತಿದೆ. ಬಿಜೆಪಿ ನಾಯಕನೊಬ್ಬನ ಕುಟುಂಬದ ಸದಸ್ಯನ ಗತಿಯೇ ಹೀಗಾದ ಮೇಲೆ, ಉಳಿದ ಜನಸಾಮಾನ್ಯರ ಗತಿಯೇನಾಗಿರಬಹುದು ಅಧಿಕೃತವಾಗಿ ವಿಧಾನಸಭೆಯಲ್ಲಿ ಘೋಷಿಸಿದ ಅಂಕಿಗಳು ತಪ್ಪು ಎನ್ನುವುದನ್ನು ಉತ್ತರ ಪ್ರದೇಶ ಸರಕಾರ ಪರೋಕ್ಷವಾಗಿ ಈಗಾಗಲೇ ಒಪ್ಪಿಕೊಂಡಿದೆ. ಪರಿಹಾರ ನೀಡುವಿಕೆಯಲ್ಲಾಗಿರುವ ಗೊಂದಲಗಳೇ ಎಲ್ಲವನ್ನು ವಿವರಿಸುತ್ತದೆ. ದುರಂತದಲ್ಲಿ ನೂರಕ್ಕೂ ಅಧಿಕ ಸಾವುಗಳು ಸಂಭವಿಸಿವೆ ಎಂದು ಹೇಳಲಾಗುತ್ತದೆಯಾದರೂ, ಅಧಿಕೃತವಾಗಿ ಮೃತದೇಹಗಳು ಪತ್ತೆಯಾಗದೇ ಈ ಆರೋಪವನ್ನು ಒಪ್ಪಲಾಗುವುದಿಲ್ಲ. ಕನಿಷ್ಠ ತಮ್ಮ ಕುಟುಂಬದ ಸದಸ್ಯ ಕಾಲ್ತುಳಿತದಲ್ಲಿ ಮೃತಪಟ್ಟಿದ್ದಾನೆ ಎಂದು ಯಾವುದೇ ಕುಟುಂಬಗಳು ಆರೋಪಿಸುತ್ತಿದೆಯಾದರೆ, ಅದನ್ನು ತನಿಖೆ ನಡೆಸಿ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದು ಸರಕಾರದ ಹೊಣೆಗಾರಿಕೆಯಾಗಿದೆ. ಇದೇ ಸಂದರ್ಭದಲ್ಲಿ 900ಕ್ಕೂ ಅಧಿಕ ಭಕ್ತರು ನಾಪತ್ತೆಯಾಗಿದ್ದಾರೆ. ಇವರು ಏನಾದರು? ಎನ್ನುವುದು ಕೂಡ ತನಿಖೆಗೆ ಅರ್ಹವಾಗಿದೆ.

# ಗ್ಯಾಸ್ಟ್ರಿಕ್ ಸಮಸ್ಯೆ ಬರುವುದು ಆಹಾರದಿಂದ ಮಾತ್ರವಲ್ಲ



ಹೊಟ್ಟೆಯನ್ನು ಆರೋಗ್ಯವಾಗಿಡಲು, ಆರೋಗ್ಯಕರ ಆಹಾರಪದ್ಧತಿ, ಸಕ್ರಿಯ ಜೀವನಶೈಲಿ, ಒತ್ತಡದ ಜೀವನಶೈಲಿಯಿಂದ ದೂರವಿರಬೇಕು. ಆದರೆ ವಿಟಮಿನ್ ಬಿ12 ಕೊರತೆಯು ಹೊಟ್ಟೆಯ ಸಮಸ್ಯೆಗಳಾದ ಅಜೀರ್ಣ ಗ್ಯಾಸ್ಟ್ರಿಕ್ ಸಮಸ್ಯೆಗಳಿಗೆ ಕಾರಣವಾಗಬಹುದಂತೆ ಇಂದಿನ ದಿನಗಳಲ್ಲಿ ನಮ್ಮಲ್ಲಿ ಹೆಚ್ಚಿನವರು ಹೊಟ್ಟೆಗೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಕೆಲವರು ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಬಳಲುತ್ತಿದ್ದರೆ, ಇನ್ನೂ ಕೆಲ ವರು ಅಜೀರ್ಣ-ಮಲಬದ್ಧತೆಯಂತಹ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇದಕ್ಕೆಲ್ಲಾ ಪ್ರಮುಖ ಕಾರಣ ಅನಾರೋಗ್ಯಕಾರಿ ಆಹಾರ ಪದ್ಧತಿ, ಜಡಜೀವನಶೈಲಿ ಪ್ರಮುಖ ಕಾರಣ ಎನ್ನಲಾಗುತ್ತದೆ. ಪ್ರಮುಖವಾಗಿ ಎಣ್ಣೆಯಾಂಶ ಹಾಗೂ ಜಂಕ್ ಫುಡ್‌ಗಳನ್ನು ಅತಿಯಾಗಿ ಸೇವನೆ ಮಾಡುವುದು, ದೈನಂದಿನ ಆಹಾರಪದ್ಧತಿಯಲ್ಲಿ ಮಸಾಲೆಯುಕ್ತ ಆಹಾರ ಪದಾರ್ಥಗಳ ಬಳಕೆ, ನಾರಿನಾಂಶ ಇಲ್ಲದೆ ಇರುವ ಆಹಾರಗಳ ಸೇವನೆ, ಇವೆಲ್ಲಾ ಅಭ್ಯಾಸಗಳು ಹೊಟ್ಟೆಯ ಆರೋಗ್ಯವನ್ನು ಹಾಳು ಮಾಡುತ್ತದೆ. ಆದರೆ ತಜ್ಞರು ಹೇಳುವ ಪ್ರಕಾರ, ದೇಹದಲ್ಲಿ ಕೆಲವೊಂದು ವಿಟಮಿನ್ಸ್ ಗಳ ಕೊರತೆ ಕಾಣಿಸಿಕೊಂಡಾಗಲೂ ಕೂಡ ಹೊಟ್ಟೆಗೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳಾದ ಅಜೀರ್ಣ ಮತ್ತು ಪದೇಪದೇ ಗ್ಯಾಸ್ಟ್ರಿಕ್ ಸಮಸ್ಯೆ ಕಾಣಿಸಿಕೊಳ್ಳಲು ಶುರುವಾಗುತ್ತದೆಯಂತೆ! ಹಾಗಾದ್ರೆ, ದೇಹದಲ್ಲಿ ಯಾವ ಬಗೆಯ ವಿಟಮಿನ್ ಕೊರತೆ ಕಾಣಿಸಿಕೊಂಡರೆ ಅಜೀರ್ಣ ಮತ್ತು ಹೊಟ್ಟೆಯಲ್ಲಿ ಗ್ಯಾಸ್ಟ್ರಿಕ್ ಕಾಣಿಸಿಕೊಳ್ಳುತ್ತದೆ ನೋಡೋಣ ಬನ್ನಿ

**ವಿಟಮಿನ್ ಬಿ 12 ಕೊರತೆಯ ರೋಗಲಕ್ಷಣಗಳು** ಪದೇಪದೇ ಸುಸ್ತು ಆಯಾಸ ಕಾಣಿಸಿಕೊಳ್ಳುವುದು ಉಸಿರಾಟದಲ್ಲಿ ಸಮಸ್ಯೆ ಕಾಣಿಸಿಕೊಳ್ಳುವುದು ಕೈ, ಕಾಲುಗಳಲ್ಲಿ ಜುಮ್ಮೆನಿಸುವಿಕೆ ಚರ್ಮದ ಬಣ್ಣ ಹಳದಿಯಾಗುವುದು

**ಬಾಯಿ ಹುಣ್ಣು ಕಾಣಿಸಿಕೊಳ್ಳುವುದು ಹಕ್ಕು ನಿರಾಕರಣೆ:** ಈ ಲೇಖನವು ಕೇವಲ ಮಾಹಿತಿಗಾಗಿ ಮಾತ್ರ. ಇದು ಯಾವುದೇ ರೀತಿಯಲ್ಲೂ ಯಾವುದೇ ಔಷಧಿ ಅಥವಾ ಚಿಕಿತ್ಸೆಗೆ ಪರ್ಯಾಯವಲ್ಲ. ವಿಜಯಕರ್ನಾಟಕ ಇದರ ಸತ್ಯತೆ, ನಿಖರತೆ, ಪರಿಣಾಮದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ

**ವಿಟಮಿನ್ ಬಿ12 ಕಡಿಮೆ ಆದರೂ ಹೀಗಾಗುತ್ತದೆಯಂತೆ!**

**ಈ ಸಮಸ್ಯೆಗೆ ಮುಖ್ಯ ಕಾರಣ:** ಇಂದಿನ ಕಾಲದಲ್ಲಿ ವಿಟಮಿನ್ ಬಿ 12 ಕೊರತೆ ಸಾಮಾನ್ಯ ಸಮಸ್ಯೆಯಾಗಿ ಬಿಟ್ಟಿದೆ ಎನ್ನುತ್ತಾರೆ ಡಾ. ಗಿರಿ ಅವರು. ಈ ವಿಟಮಿನ್ ಕೊರತೆಯು ರಕ್ತಹೀನತೆಗೆ ಕಾರಣವಾಗಬಹುದು, ಅಂದರೆ ದೇಹದಲ್ಲಿ ರಕ್ತದ ಕೊರತೆಯಿಂದ ಮಾನಸಿಕ ಸಮಸ್ಯೆಗಳಿಗೆ ಕಾರಣವಾಗಬಹುದು.

ಕಳವಳಕಾರಿ ವಿಷಯವೆಂದರೆ ಈಗ ಜನರು ಚಿಕ್ಕ ವಯಸ್ಸಿನಲ್ಲಿಯೇ ಈ ವಿಟಮಿನ್ ಕೊರತೆಯಿಂದ ಬಳಲುತ್ತಿದ್ದಾರೆ. ಇದಕ್ಕೆ ಪ್ರಮುಖ ಕಾರಣ ಕೆಟ್ಟ ಆಹಾರ ಪದ್ಧತಿಯೂ ಆಗಿದೆ. ಜನರು ಈಗ ತಮ್ಮ ಆಹಾರದಲ್ಲಿ ಫಾಸ್ಟ್ ಫುಡ್ ಅಥವಾ ಜಂಕ್ ಫುಡ್ ನಂತಹ ಆಹಾರಗಳನ್ನು ಹೆಚ್ಚಾಗಿ ಸೇವನೆ ಮಾಡುತ್ತಾರೆ. ಆದರೆ ದೃಷ್ಟಿಯಿಂದ ನೋಡುವುದಾದರೆ ಇಂತಹ ಆಹಾರಗಳು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ಡಾ. ಗಿರಿ ಅವರು ಸಲಹೆ ನೀಡುತ್ತಾರೆ.

**50 ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಈ ಸಮಸ್ಯೆ ಹೆಚ್ಚಂತೆ:** 50 ವರ್ಷ ಕ್ಕಿಂತ ಮೇಲ್ಪಟ್ಟ ಜನರು ಮತ್ತು ಶುದ್ಧ ಸಸ್ಯಾಹಾರಿಗಳು ವಿಟಮಿನ್ ಬಿ12 ಕೊರತೆಯಿಂದ ಬಳಲುತ್ತಿದ್ದಾರೆ ಎಂದು ಡಾ. ಗಿರಿ ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ವಯಸ್ಸಾದಂತೆ ವಿಟಮಿನ್ ಉತ್ಪಾದನೆ ಕಡಿಮೆಯಾಗುತ್ತದೆ ಸಸ್ಯಾಹಾರಿ ಆಹಾರವು ಮಾಂಸಾಹಾರಿ ಆಹಾರಕ್ಕಿಂತ ಕಡಿಮೆ ವಿಟಮಿನ್ ಬಿ12 ಅನ್ನು ಹೊಂದಿರುತ್ತದೆ. ಆದಾಗ್ಯೂ, ಸಸ್ಯಾಹಾರಿಗಳು ಮಾಂಸಾಹಾರಿ ಆಹಾರವನ್ನು ಸೇವಿಸಬೇಕು ಎಂದು ಇದರ ಅರ್ಥವಲ್ಲ, ನಿಮ್ಮ ದೇಹದಲ್ಲಿ ವಿಟಮಿನ್ ಬಿ12 ಮಟ್ಟವನ್ನು ಪರೀಕ್ಷಿಸುವುದು ಮುಖ್ಯ, ಅದು ಕಡಿಮೆಯಿದ್ದರೆ, ನೀವು ವೈದ್ಯರ ಸಲಹೆಯ ಮೇರೆಗೆ ಪೂರಕಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಬಹುದು. ಇದರ ಕೋರ್ಸ್ ಕೆಲವು ತಿಂಗಳುಗಳವರೆಗೆ ಇರುತ್ತದೆ. ಇದು ಎಷ್ಟು ವಿಟಮಿನ್ ಕೊರತೆ ಇದೆ ಎಂಬುದರ ಮೇಲೆ ಅವಲಂಬಿತವಾಗಿ ರುತ್ತದೆ. ಅದಕ್ಕೆ ಅನುಗುಣವಾಗಿ ಡೋಸೇಜ್ ತೆಗೆದುಕೊಳ್ಳುವ ಮೂಲಕ ಕೊರತೆಯನ್ನು ಸುಲಭವಾಗಿ ನಿವಾರಿಸಬಹುದು.


**ಈ ಬಗ್ಗೆ ವೈದ್ಯರು ಹೇಳುವುದೇನು:** ಈ ಬಗ್ಗೆ ದೆಹಲಿಯ ಆರ್‌ಎಂಎಲ್ ಆಸ್ಪತ್ರೆಯ ವೈದ್ಯಕೀಯ ವಿಭಾಗದ ಘಟಕ ಮುಖ್ಯಸ್ಥರಾದ ಪ್ರೊಫೆಸರ್ ಡಾ. ಸುಭಾಷ್ ಗಿರಿ ಹೇಳುವಂತೆ ದೇಹದಲ್ಲಿ ಬಿ12 ಕೊರತೆಯಿದ್ದಾಗ, ಹೊಟ್ಟೆಯ ಆಮ್ಲದ ಮಟ್ಟವು ಕಡಿಮೆ ಯಾಗಲು ಪ್ರಾರಂಭಿಸುತ್ತದೆ. ಆಹಾರವನ್ನು ಜೀರ್ಣಿಸಿಕೊಳ್ಳಲು ಅಗತ್ಯವಿರುವ ಆಮ್ಲದ ಪ್ರಮಾಣವು ಉತ್ಪತ್ತಿಯಾಗುವುದಿಲ್ಲ, ಆಹಾರವು ಹೊಟ್ಟೆಯಲ್ಲಿ ಸರಿಯಾಗಿ ಜೀರ್ಣವಾಗುವುದಿಲ್ಲ. ಇದು ಅಜೀರ್ಣ, ಗ್ಯಾಸ್ಟ್ರಿಕ್, ಹೊಟ್ಟೆ ಉಬ್ಬರದಂತಹ ಸಮಸ್ಯೆಗಳನ್ನು ಉಂಟುಮಾಡುತ್ತದೆ.



ಹೊಟ್ಟೆಯಲ್ಲಿ 2 ರೀತಿಯ ಬ್ಯಾಕ್ಟೀರಿಯಾಗಳಿವೆ ಎಂದು ಡಾ. ಸುಭಾಷ್ ವಿವರಿಸುತ್ತಾರೆ.

ಒಂದು ಒಳ್ಳೆಯದು ಇನ್ನೊಂದು ಕೆಟ್ಟದು, ಅವು ಸಮತೋಲನದಲ್ಲಿ ಉಳಿಯುವುದು ಮುಖ್ಯ. ವಿಟಮಿನ್ ಬಿ 12 ಕೊರತೆಯಿಂದಾಗಿ, ಹೊಟ್ಟೆಯಲ್ಲಿ ಉತ್ತಮ ಕರುಳಿನ ಬ್ಯಾಕ್ಟೀರಿಯಾಗಳು ಕಡಿಮೆಯಾಗುತ್ತವೆ ಮತ್ತು ಕೆಟ್ಟ ಬ್ಯಾಕ್ಟೀರಿಯಾಗಳು ಹೆಚ್ಚಾಗಬಹುದು ಎಂದು ಗಮನಿಸಲಾಗಿದೆ, ಇದರಿಂದಾಗಿ ಜೀರ್ಣಕ್ರಿಯೆ ನಿಧಾನವಾಗಬಹುದು, ಅಜೀರ್ಣ ಅಥವಾ ಮಲಬದ್ಧತೆಯಂತಹ ಸಮಸ್ಯೆಗಳು ಉಂಟಾಗಲು ಪ್ರಾರಂಭಿಸುತ್ತವೆ. ಬಿ12 ಕೊರತೆಯು ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ, ಇದು ಹೊಟ್ಟೆ ಮತ್ತು ಕರುಳಿನ ಸ್ನಾಯು ಚಲನೆಗಳನ್ನು ಪೆರಿಸ್ಟಾಲ್ಟಿಕ್ ಚಲನೆಗಳು ದುರ್ಬಲಗೊಳಿಸುತ್ತದೆ, ಇದು ಜೀರ್ಣಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ.

# ಬೃಂದಾವನಕ್ಕೆ ಮಾವಿನ ಹಣ್ಣಿನ ಅಭಿಷೇಕ




• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶದಂತೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ಮಾರ್ಗದರ್ಶನದಲ್ಲಿ ರಾಯರ ಬೃಂದಾವನಕ್ಕೆ ವಿಶೇಷವಾಗಿ ಮಾವಿನಹಣ್ಣಿನ ಪಂಚಾಮೃತ ಅಭಿಷೇಕವು ನೆರವೇರಿತು. ನಂತರ ವಿಶೇಷ ಅಲಂಕಾರ ಹಾಗೂ ಸಹಸ್ರಾರು ಭಕ್ತರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು. ಸಂಜೆಯ ಕಾರ್ಯಕ್ರಮದಲ್ಲಿ ಕೆ. ಸುಧಾಕರ ಶೆಟ್ಟಿ ಮತ್ತು ಡಾ|| ರಮೇಶ್ಚಂದ್ರ ವೃಂದದವರು ದಾಸವಾಣಿ ಕಾರ್ಯಕ್ರಮವನ್ನು ನೆರವೇರಿಸಿದರು ಎಂದು ಶ್ರೀ ನಂದಕಿಶೋರಾಚಾರ್ಯರು ತಿಳಿಸಿದರು. ಈ ಸಂದರ್ಭದಲ್ಲಿ ನೂರಾರು ಭಕ್ತರು ದಾಸವಾಣಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.



# ಬೆಳಗ್ಗೆ ಎದ್ದಾಗ ನಿಮ್ಮ ಕಣ್ಣುಗಳು ಊದಿಕೊಂಡಿದೆಯಾ?

ಕಣ್ಣುಗಳ ಕೆಳಗೆ ಊತವು ದೇಹದಲ್ಲಿ ರಕ್ತದಲ್ಲಿನ ಸಕ್ಕರೆ ಮಟ್ಟ ಏರುತ್ತಿರುವುದರ ಆರಂಭಿಕ ಲಕ್ಷಣಗಳಲ್ಲಿ ಒಂದು ರಕ್ತದಲ್ಲಿನ ಸಕ್ಕರೆಯ ಪ್ರಮಾಣ ಹೆಚ್ಚಾಗಲು ಪ್ರಾರಂಭಿಸಿದಾಗ, ಕಣ್ಣುಗಳ ಕೆಳಗೆ ಮತ್ತು ವಿಶೇಷವಾಗಿ ಬೆಳಿಗ್ಗೆ ಎದ್ದ ನಂತರ ಕಣ್ಣುಗಳ ಕೆಳಗೆ ಊತ ಕಾಣಿಸಿಕೊಳ್ಳುತ್ತದೆ.



ನಾವು ಬೆಳಿಗ್ಗೆ ಎದ್ದಾಗ ಅನೇಕ ಬಾರಿ ನಮ್ಮ ಕಣ್ಣುಗಳು ಊದಿಕೊಂಡಂತೆ ಕಾಣುತ್ತವೆ. ಕಣ್ಣುಗಳ ಕೆಳಗಿನ ಭಾಗದ ಚರ್ಮವು ಊದಿಕೊಂಡು ಕಣ್ಣುಗಳ ಕೆಳಗೆ ಊದಿಕೊಂಡ ವೃತ್ತವನ್ನು ರೂಪಿಸುತ್ತದೆ. ಕೆಲವೊಮ್ಮೆ ಇದು ನಿದ್ರೆಯ ಕೊರತೆಯ ಸಾಮಾನ್ಯ ಕಾರಣದಿಂದ ಸಂಭವಿಸಬಹುದು, ಆದರೆ ನಿಮ್ಮ ಕಣ್ಣುಗಳ ಕೆಳಗೆ ಈ ಊತ ನಿರಂತರವಾಗಿ ಮುಂದುವರಿದರೆ, ಅದು ಯಾವುದೋ ಗಂಭೀರ ಕಾಯಿಲೆಯ ಆರಂಭಿಕ ಚಿಹ್ನೆಯಾಗಿರಬಹುದು. ಅದನ್ನು ನಿರ್ಲಕ್ಷಿಸಬೇಡಿ. ತಕ್ಷಣ ವೈದ್ಯರನ್ನು ಸಂಪರ್ಕಿಸಿ ಮತ್ತು ನಿಮ್ಮ ಸಂಪೂರ್ಣ ದೇಹದ ಪರೀಕ್ಷೆಯನ್ನು ಮಾಡಿಸಿ. ಕಣ್ಣುಗಳ ಕೆಳಗೆ ಊತಕ್ಕೆ ಸಂಭವನೀಯ ಕಾರಣಗಳು


**ಟೈಪ್ 2 ಮಧುಮೇಹ:** ಕಣ್ಣುಗಳ ಕೆಳಗೆ ಊತವು ದೇಹದಲ್ಲಿ ರಕ್ತದಲ್ಲಿನ ಸಕ್ಕರೆ ಮಟ್ಟ ಏರುತ್ತಿರುವುದರ ಆರಂಭಿಕ ಲಕ್ಷಣವಾಗಿದೆ. ರಕ್ತದಲ್ಲಿನ ಸಕ್ಕರೆಯ ಪ್ರಮಾಣ ಹೆಚ್ಚಾಗಲು ಪ್ರಾರಂಭಿಸಿದಾಗ, ಕಣ್ಣುಗಳ ಕೆಳಗೆ ಮತ್ತು ವಿಶೇಷವಾಗಿ ಬೆಳಗ್ಗೆ ಎದ್ದ ನಂತರ ಕಣ್ಣುಗಳ ಕೆಳಗೆ ಊತ ಕಾಣಿಸಿಕೊಳ್ಳುತ್ತದೆ. ನೀವು ಅಂತಹ ಯಾವುದೇ ಚಿಹ್ನೆಯನ್ನು ನೋಡಿದರೆ, ತಕ್ಷಣ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಪರೀಕ್ಷಿಸಿಕೊಳ್ಳಿ.

**ಫ್ಯಾಟಿ ಲಿವರ್ ಸಮಸ್ಯೆ ಬರಬಹುದು:** ಟೈಪ್ 2 ಮಧುಮೇಹ, ಫ್ಯಾಟಿ ಲಿವರ್ ಪರಸ್ಪರ ಸಂಬಂಧ ಹೊಂದಿವೆ. ಒಂದು ಕಾಯಿಲೆ ಬಂದರೆ, ಇನ್ನೊಂದು ಅನಿವಾರ್ಯ. ಕೊಬ್ಬಿನ ಯಕೃತ್ತು ರಕ್ತದಲ್ಲಿನ ಸಕ್ಕರೆ ಅಂಶ ಹೆಚ್ಚಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ ಮತ್ತು ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಾದಾಗ, ಯಕೃತ್ತಿನ ಸುತ್ತಲೂ ಕೊಬ್ಬು ಸಂಗ್ರಹವಾಗಲು ಪ್ರಾರಂಭಿಸುತ್ತದೆ. ಇದು ಕಣ್ಣುಗಳ ಕೆಳಗೆ ಊತಕ್ಕೂ ಕಾರಣವಾಗುತ್ತದೆ.

**ಕಿಡ್ನಿಗಳ ಸಮಸ್ಯೆ ಇರಬಹುದು! :** ಮೂತ್ರಪಿಂಡದ ಸಮಸ್ಯೆ ಅಥವಾ ಕಿಡ್ನಿಗಳ ಸಮಸ್ಯೆಯ ರೋಗ ಲಕ್ಷಣಗಳು ಮುಖ್ಯವಾಗಿ ಎರಡು ಕಾರಣಗಳಿಂದ ಉಂಟಾಗುತ್ತವೆ. ರಕ್ತದಲ್ಲಿನ ಸಕ್ಕರೆ ಮಟ್ಟ ಹೆಚ್ಚಾಗುವುದರಿಂದ ಅಥವಾ ಮೂತ್ರಪಿಂಡದ ಕಲ್ಲುಗಳಿಂದ. ರಕ್ತದಲ್ಲಿನ ಸಕ್ಕರೆಯ ಪ್ರಮಾಣ ಹೆಚ್ಚಾದಾಗ, ಮೂತ್ರಪಿಂಡಗಳು ದೇಹದಿಂದ ಹೆಚ್ಚುವರಿ ಸಕ್ಕರೆಯನ್ನು ತೆಗೆದುಹಾಕಲು ಹೆಚ್ಚು ಶ್ರಮಿಸುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಮೂತ್ರಪಿಂಡವು ದಣಿಯಲು ಪ್ರಾರಂಭಿಸುತ್ತದೆ. ಮೂತ್ರಪಿಂಡವು ತನ್ನ ಸಾಮರ್ಥ್ಯಕ್ಕಿಂತ ಹೆಚ್ಚು ಕೆಲಸ ಮಾಡಬೇಕಾದರೆ, ಅದರ ಪರಿಣಾಮವು ಕಣ್ಣುಗಳ ಕೆಳಗೆ ಊತದ ರೂಪದಲ್ಲಿ ಗೋಚರಿ ಸುತ್ತದೆ.

**ಕಾಲಜನ್ ಕೊರತೆ:** ಕಣ್ಣುಗಳ ಕೆಳಗೆ ಕಪ್ಪು ವರ್ತುಲಗಳು, ಊತ ಇತ್ಯಾದಿಗಳಿಗೆ ಕಾಲಜನ್ ಕೊರತೆಯೇ ಮುಖ್ಯ ಕಾರಣ ಎಂದು ಸೌಂದರ್ಯ ತಜ್ಞರು ಪರಿಗಣಿಸುತ್ತಾರೆ. ಇದು ನಿಜ, ಆದರೆ ಕಾಲಜನ್ ಕೊರತೆಯು ಮಧುಮೇಹ, ಮೂತ್ರಪಿಂಡ ಮತ್ತು ಕೊಬ್ಬಿನ ಯಕೃತ್ತಿನೊಂದಿಗೆ ನೇರ ಸಂಬಂಧವನ್ನು ಹೊಂದಿದೆ. ಈ ಯಾವುದೇ ಕಾಯಿಲೆಗಳು ಸಂಭವಿಸಿದಾಗ, ದೇಹದಲ್ಲಿ ಕಾಲಜನ್ ಮಟ್ಟವು ಸ್ವಯಂಚಾಲಿತವಾಗಿ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಆದ್ದರಿಂದ, ಕಾಲಜನ್ ಕೊರತೆಯು ಕಣ್ಣುಗಳ ಕೆಳಗೆ ಊತಕ್ಕೆ ಒಂದು ಕಾರಣವಾಗಿದೆ, ಆದರೆ ಅದು ನೇರ ಕಾರಣವಲ್ಲ.

**ವೈದ್ಯರನ್ನು ಸಂಪರ್ಕಿಸಿ:** ಮೇಲೆ ತಿಳಿಸಿದ ಕಾಯಿಲೆಗಳ ಆರಂಭಿಕ ಲಕ್ಷಣಗಳು ನೇರ ಕಾರಣ. ಆದ್ದರಿಂದ ನೀವು ಕಣ್ಣುಗಳ ಕೆಳಗೆ ಊದಿಕೊಂಡ ವೃತ್ತಗಳು ಮತ್ತು ಊತವನ್ನು ಅನುಭವಿಸಿದರೆ ಮತ್ತು ಈ ಲಕ್ಷಣಗಳು ಶಾಶ್ವತವಾಗಿ ಮುಂದುವರಿದರೆ, ತಕ್ಷಣ ವೈದ್ಯರನ್ನು ಸಂಪರ್ಕಿಸಿ. ಹಕ್ಕು ನಿರಾಕರಣೆ: ಈ ಲೇಖನವು ಕೇವಲ ಮಾಹಿತಿಗಾಗಿ ಮಾತ್ರ. ಇದು ಯಾವುದೇ ರೀತಿಯಲ್ಲೂ ಯಾವುದೇ ಔಷಧಿ ಅಥವಾ ಚಿಕಿತ್ಸೆಗೆ ಪರ್ಯಾಯವಲ್ಲ. ವಿಜಯಕರ್ನಾಟಕ ಇದರ ಸತ್ಯತೆ, ನಿಖರತೆ, ಪರಿಣಾಮದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ



# ರಾಮಾಯಣ

## ಭರತನು ಕೈಕೇಯಿ ದೇವಿಯ ಮೇಲೆ ಕೋಪಿಸಿದ್ದು

• ಹಿಂದಿನ ಸಂಚಿಕೆಯಿಂದ

78ನೆಯ ಅಧ್ಯಾಯ

ಅಷ್ಟರಲ್ಲಿ ಭರತನು ಶತ್ರುಘ್ನನನ್ನು ಕೂಡಿಕೊಂಡು ದೇವಿಯ ಮನೆಗೆಹೋಗಿ ರೋದಿಸತೊಡಗಿದನು. ಆ ದೇವಿಯು ಭರತಶತ್ರುಘ್ನರನ್ನು ತಬ್ಬಿಕೊಂಡು ದುಃಖದಿಂದ ಹಂಬಲಿಸಿ ರೋದನಮಾಡುತ್ತ ಭರತನನ್ನು ಕುರಿತು ಭರತ, ರಾಜ್ಯವನ್ನು ಬಯಸುತ್ತಿದ್ದ ನಿನಗೆ ನಿನ್ನ ತಾಯಿಯಾದ ಕೈಕೇಯಾದೇವಿಯಿಂದ ಉಪದ್ರವವಿಲ್ಲದೆ ರಾಜಪದವಿಯು ಸಂಭವಿಸಿತು. ನನ್ನ ಮಗನಾದ ಶ್ರೀರಾಮನನ್ನು ನಾರುಬಟ್ಟೆಯನ್ನುಡಿಸಿ ವನವಾಸಕ್ಕೆ ಕಳುಹಿಸಲು ಆತನಲ್ಲಿ ಯಾವ ಅವಗುಣವನ್ನು ಕಂಡಳು ಇನ್ನು ನನ್ನನ್ನೂ ಹೊರಡಿಸುವಳು. ಅಲ್ಲದಿದ್ದರೆ ಶ್ರೀರಾಮನು ಎಲ್ಲಿದ್ದಾನೋ ಅಲ್ಲಿಗೆ ಸುಮಿತ್ರಾದೇವಿಯನ್ನು ಕೂಡಿಕೊಂಡು ಅಗ್ನಿ ಹೋತ್ರಗಳನ್ನು ತೆಗೆದುಕೊಂಡು ನಾನೇ ಹೋಗುತ್ತೇನೆ. ಅಥವಾ ನಿನ್ನ ಮನಸ್ಸು ಬಂದಂತೆ ನೀನೇ ಆತನ ಬಳಿಗೆ ಕರೆದುಕೊಂಡು ಹೋಗು : ಸಮಸ್ತ ಧನಧಾನ್ಯಗಳಿಂದ ಪರಿಪೂರ್ಣವಾಗಿ ಚತುರಂಗಬಲದಿಂದಿಟ್ಟಣಿಸಿರುವ ಈ ರಾಜ್ಯವು ನಿನಗೆ ಬರುವಂತೆ ನಿನ್ನ ತಾಯಿಯಾದ ಕೈಕೇಯಾದೇವಿಯು ಮಾಡಿದ್ದಾಳೆ ಎಂದು ನಿಷ್ಠುರವಚನಗಳನ್ನು ನುಡಿದಳು.

ಭರತನ ಆ ಮಾತುಗಳನ್ನು ಕೇಳಿ ಪ್ರಣದ ಮೇಲೆ ಕೂರಲಗು ತಗುಲಿದಂತೆ ವ್ಯಥೆಪಟ್ಟನು. ಕೌಸಲ್ಯಾದೇವಿಯ ಪಾದಗಳಿಗೆರಗಿ ದುಃಖಾತಿಶಯದಿಂದ ಚೈತನ್ಯಗುಂದಿ ಮೂರ್ಛಿತನಾದನು. ಸ್ವಲ್ಪಹೊತ್ತಿನಮೇಲೆ ಮೂರ್ಛ ತಿಳಿದದ್ದು ಕೈ ಮುಗಿದುಕೊಂಡು ಅತ್ಯಂತ ದುಃಖಾಕ್ರಾಂತೆಯಾದ ಆ ದೇವಿಯನ್ನು ಕುರಿತು ಹೀಗೆ ನುಡಿದನು: ಅಮ್ಮ. ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಿ ನನಗೆ ಪಟ್ಟಾಭಿಷೇಕಮಾಡಬೇಕೆಂದು ಯತ್ನ ಮಾಡಿದ ವೃತ್ತಾಂತವನ್ನು ನಾನು ಅರಿಯೆನು. ನನಗೆ ಏಕೆ ನಿಷ್ಠುರೋಕ್ತಿಗಳನ್ನು ನುಡಿಯುತ್ತೀಯ ಶ್ರೀರಾಮನಲ್ಲಿ ನನಗೆ ಅತ್ಯಂತ ಪ್ರೀತಿಯುಂಟೆಂಬುದನ್ನು ನೀನು ಬಲ್ಲೆ. ಸತ್ಪುರುಷರೊಳಗೆ ಉತ್ತಮನಾಗಿ ಸತ್ಯಸಂಧನಾದ ಆತನನ್ನು ವನವಾಸಕ್ಕೆ ಕಳುಹಿಸುವ ವೃತ್ತಾಂತವನ್ನು ಅರಿತಿದ್ದರೆ ನನಗೆ ಧರ್ಮಮಾರ್ಗವನ್ನು ಬಿಟ್ಟು ದುರ್ಮಾರ್ಗದಲ್ಲಿ ನಡೆಯುವವನ ಪಾಪವುಂಟಾಗಲಿ ಅತ್ಯಂತ ಪಾಪವನ್ನು ಮಾಡಿದವರೂ ಸೂರ್ಯನಿಗೆದುರಾಗಿ ಮೂತ್ರ ವಿಸರ್ಜನೆಮಾಡುವವರೂ ಯಾವ ಲೋಕಕ್ಕೆ ಹೋಗುವರೋ, ಆ ಲೋಕವು ನನಗೆ ಲಭಿಸಲಿ ಭೃತ್ಯನಿಂದ ಮಹತ್ತಾದ ಕಾವ್ಯವನ್ನು ಮಾಡಿಸಿ ಕಾರವು ಮುಗಿದಮೇಲೆ ಅವನಿಗೆ ಉಚಿತವಾದ್ದನ್ನು ಕೊಡದೆ ಆ ಕಾವ್ಯವನ್ನು ತುಚ್ಛಕರಿಸಿ ನುಡಿಯುವುದರಿಂದಲೂ, ಪ್ರಜೆಗಳನ್ನು ಮಕ್ಕಳ ಹಾಗೆ ಪರಿಪಾಲಿಸುವ ಅರಸನಿಗೆ ದ್ರೋಹವನ್ನು ಮಾಡುವುದರಿಂದಲೂ, ಪ್ರಜೆಗಳ ಹುಟ್ಟುವಳಿಯೊಳಗೆ ಆರರಲ್ಲೊಂದು ಭಾಗವನ್ನು ಶಾಸ್ತ್ರಪ್ರಕಾರದಿಂದ ತೆಗೆದುಕೊಂಡೂ ಆ ಪ್ರಜೆಗಳನ್ನು ಧರ್ಮದಿಂದ ರಕ್ಷಿಸದಿರುವುದರಿಂದಲೂ, ತಪಸ್ವಿಗಳಿಗೂ ಬ್ರಾಹ್ಮಣರಿಗೂ ದಕ್ಷಿಣೆಯನ್ನು ಕೊಡುವುದಾಗಿ ಹೇಳಿ ತಪ್ಪುವುದರಿಂದಲೂ ಉಂಟಾಗುವ ಪಾಪವು ನನಗೆ ಬರಲಿ ಚತುರಂಗಬಲಸಮೇತನಾಗಿ ಯುದ್ಧ ಮಾಡುವಾಗ ಶತ್ರುವಾದರೂ ಮರೆಹೊಕ್ಕವನನ್ನೂ ನೀರುಹೊಕ್ಕವನನ್ನೂ ಆಯುಧವಿಲ್ಲದವನನ್ನೂ ದಯಿಯಿಲ್ಲದೆ ಸಂಹರಿಸುವುದಕ್ಕೂ,


ಮುಂದುವರಿಯುವುದು...

# ಔಷಧ ಮಾರಾಟದ ಮುಂಚೂಣಿ ಯೋಧರು: ಮೆಡಿಕಲ್ ರೆಪ್‌ಸ ಕಥೆ



ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ




ಆಧುನಿಕ ವೈದ್ಯಕೀಯ ಜಗತ್ತಿನಲ್ಲಿ ಪ್ರಮುಖ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುವವರು ಮೆಡಿಕಲ್ ರೆಪ್ರಸೆಂಟೇಟಿವ್‌ಗಳು. ಇವರು ಔಷಧಿ ಕಂಪನಿಗಳು ತಯಾರಿಸುವ ಔಷಧಗಳ ಮಾಹಿತಿಯನ್ನು ವೈದ್ಯರಿಗೆ ತಲುಪಿಸಿ, ಅವರ ಬಳಿಯ ಔಷಧದ ಬಳಕೆಯ ಬಗ್ಗೆ ಪ್ರಚಾರ ಕಾರ್ಯ ನಿರ್ವಹಿಸುತ್ತಾರೆ. ಒಟ್ಟಿನಲ್ಲಿ ತಜ್ಞ ವೈದ್ಯರು, ಔಷಧ ಉತ್ಪಾದಕರು ಮತ್ತು ರೋಗಿಗಳ ನಡುವೆ ಆರ್ಥಿಕ ಮತ್ತು ಮಾಹಿತಿಯ ಸಂಪರ್ಕ ಸೇತುವಾಗಿ ಇವರ ಕೆಲಸ ನಿರಂತರವಾಗಿದೆ. ಆದರೆ ಇಂದಿನ ದಿನಗಳಲ್ಲಿ ಈ ಕ್ಷೇತ್ರವು ಹಲವು ಬದಲಾವಣೆಗಳನ್ನು, ಸವಾಲುಗಳನ್ನು ಹಾಗೂ ಅಪೇಕ್ಷೆಗಳ ಒತ್ತಡಗಳನ್ನು ಎದುರಿಸುತ್ತಿದೆ.



**ಸ್ಪರ್ಧಾತ್ಮಕ ಮಾರುಕಟ್ಟೆಯ ಒತ್ತಡ:** ಔಷಧೋತ್ಪಾದನೆಯ ಕ್ಷೇತ್ರದಲ್ಲಿ ನೂರಾರು ಕಂಪನಿಗಳು ಪೈಪೋಟಿಗೆ ಇಳಿದಿವೆ. ಪ್ರತಿಯೊಂದು ಕಂಪನಿಗೂ ಒಂದಕ್ಕಿಂತ ಹೆಚ್ಚು M.R. ಆಗಿರುತ್ತಾರೆ. ಈ ಸ್ಪರ್ಧೆಯಲ್ಲಿ ತಮ್ಮ ಕಂಪನಿಯ ಉತ್ಪನ್ನವನ್ನು ವೈದ್ಯರು ಓದುತ್ತಾರೆಯೆ ಅಥವಾ ಬರೆಯುತ್ತಾರೆಯೆ ಎಂಬ ಭಯ, ಅವರಿಗೆ ನಿರಂತರ ಒತ್ತಡವನ್ನುಂಟು ಮಾಡುತ್ತದೆ. ದಿನದ 10-12 ಗಂಟೆಗಳ ಕಾಲ ಹೊರಗಡೆಯಲ್ಲೇ ಓಡಾಡಬೇಕಾಗುವುದು ಸಾಮಾನ್ಯ.

**ಗುರಿ ಆಧಾರಿತ ಕೆಲಸ ಮಾರಾಟವೇ ಮಹತ್ವ:** M.R. ಕೆಲಸವು ಶೇ. 90% ಮಾರಾಟ ಆಧಾರಿತವಾಗಿದ್ದು, ತಿಂಗಳ ಕೊನೆಯಲ್ಲಿ target ಪೂರೈಸಬೇಕು ಎಂಬ ಒತ್ತಡ ಹೆಚ್ಚಾಗಿದೆ. ಔಷಧಿಗಳನ್ನು ಯಾವ ಮಟ್ಟಿಗೆ ವೈದ್ಯರು ಬರೆಯುತ್ತಾರೆ ಎಂಬುದರ ಮೇಲೆ ಕಂಪನಿಯಿಂದ ಬೋನಸ್, ಜವಾಬ್ದಾರಿ, ಕೆಲಸದ ಭದ್ರತೆ ಇತ್ಯಾದಿಗಳು ನಿಗದಿಯಾಗಿರುತ್ತವೆ. ಇದರಿಂದಾಗಿ ಅವರು ಉದ್ಯೋಗ ಭದ್ರತೆಗೆ ಇನ್ನಿಲ್ಲದ ಮಟ್ಟಿಗೆ ಶ್ರಮಿಸುತ್ತಾರೆ.

**ನೈತಿಕತೆ ಮತ್ತು ಲಂಚದ ವ್ಯವಹಾರ:** ಕೆಲವೊಮ್ಮೆ, ವೈದ್ಯರಿಂದ ಔಷಧ ಬರೆಯಿಸುವ ಸಲುವಾಗಿ ಕಂಪನಿಗಳು ಬಹುಮಾನ, ವಿದೇಶಿ ಪ್ರವಾಸ, ವಿದ್ಯಾ ಸಲಕರಣೆ, ಉಪಕರಣಗಳು ಮೊದಲಾದವುಗಳನ್ನು ಕೊಡುತ್ತಾರೆ. ಈ ಕಾರ್ಯಗಳಲ್ಲಿ M.R.ಗಳು ಮಧ್ಯವರ್ತಿಗಳಾಗಿದ್ದಾರೆ. ಇದರ ಪರಿಣಾಮವಾಗಿ ನೈತಿಕ ಅಂಶಗಳಿಗೆ ಧಕ್ಕೆಯಾಗುತ್ತಿದೆ. ಕೆಲವೊಮ್ಮೆ ಈ ಲಂಚ ವ್ಯವಸ್ಥೆಗೆ ಒತ್ತಡದ ಮೇಲೆ ವೈದ್ಯರನ್ನು ಸೇರಿಸಲು M.R.ಗಳ ಮೇಲೆ ಕಂಪನಿಗಳಿಂದ ಒತ್ತಡ ಬರುತ್ತದೆ.

**ಜ್ಞಾನ ಮತ್ತು ತರಬೇತಿಯ ಅಗತ್ಯ:** ಔಷಧ ಕ್ಷೇತ್ರವು ತ್ವರಿತವಾಗಿ ಬೆಳೆಯುತ್ತಿರುವುದು, ಹೊಸ ಹೊಸ ಔಷಧಿಗಳು ಮಾರುಕಟ್ಟೆಗೆ ಬರುತ್ತಿರುವುದು M.R. ಗಳು ಸದಾ ಅಧ್ಯಯನ ಶೀಲರಾಗಬೇಕಾದ ಅನಿವಾರ್ಯತೆಯನ್ನು ಉಂಟುಮಾಡಿದೆ. ವೈದ್ಯರ ಬಳಿ ಸಂಪೂರ್ಣ ಮಾಹಿತಿ ನೀಡಬೇಕಾದ ಕಾರಣ, ಉತ್ತಮ ಸಂವಹನ ಕೌಶಲ್ಯ ಮತ್ತು ವೈಜ್ಞಾನಿಕ ಬಲದ ಅಗತ್ಯವಿದೆ.

**ಕಾರ್ಪೊರೇಟ್ ನಿಯಂತ್ರಣ ಮತ್ತು ಮಾನವೀಯತೆಯ ಕೊರತೆ:** ಬಹುತೇಕ M.R. ಗಳು ದಿನದ ಶ್ರಮಕ್ಕೆ ತಕ್ಕ ರೀತಿ ಗೌರವವೇನು ಅಥವಾ ಜೀವನ ಸಮತೋಲನವನ್ನು ಅನುಭವಿಸುತ್ತಿಲ್ಲ. ಕೆಲವೊಮ್ಮೆ ಜ್ಞಾನವಿರುವ ಯುವಕರು ಈ ಕ್ಷೇತ್ರವನ್ನು ಪ್ರವೇಶಿಸಿದರೂ, ಕೆಲವೇ ವರ್ಷಗಳಲ್ಲಿ ಮಾನಸಿಕ ಒತ್ತಡದಿಂದ ಹೊರಬರುತ್ತಾರೆ. ಕುಟುಂಬ, ಆರೋಗ್ಯ ಮತ್ತು ಹಣಕಾಸು ಪರಿಸ್ಥಿತಿಗಳು ನಿರಂತರ ಅಶಾಂತಿಯಿಂದ ಕೂಡಿರುತ್ತವೆ.

**ಡಿಜಿಟಲ್ ಯುಗದ ಪ್ರಭಾವ:** ಇತ್ತೀಚೆಗಿನ ದಿನಗಳಲ್ಲಿ ಡಿಜಿಟಲ್ ಮಾರ್ಕೆಟಿಂಗ್, ವಿಡಿಯೋ ಕಾನ್ಫರೆನ್ಸ್, ಇ-ಡಿಟೈಲಿಂಗ್ ಇತ್ಯಾದಿ ತಂತ್ರಜ್ಞಾನಗಳು ಮೆಡಿಕಲ್ ಮಾರ್ಕೆಟಿಂಗ್‌ನಲ್ಲಿ ಪ್ರವೇಶಿಸುತ್ತಿವೆ. ಇದರಿಂದ ಮನುಷ್ಯ ಮಧ್ಯವರ್ತಿತ್ವ ಕಡಿಮೆಯಾಗುತ್ತಿದೆ. M.R. ಗಳ ಪಾತ್ರ ಮುಂದಿನ ದಿನಗಳಲ್ಲಿ ಬದಲಾಗುವ ಸಾಧ್ಯತೆ ಇದೆ ಅದು ಹೊಸ ಸವಾಲು ಹಾಗೂ ಸಾಧ್ಯತೆಯಾಗಿ ಕಾಣುತ್ತಿದೆ. ಮೆಡಿಕಲ್ ರೆಪ್ರಸೆಂಟೇಟಿವ್‌ಗಳ ಜೀವನ ಎಂದರೆ ಬಾಹ್ಯ ಜಗತ್ತಿಗೆ ಫಾರ್ಮಲ್ ಡ್ರೆಸ್ಸು, ಸ್ಮಿತಮುಖ ಮತ್ತು ಪ್ರಚಾರ, ಆದರೆ ಒಳಗೆ ವಿಶ್ರಾಂತಿಯಿಲ್ಲದ ಓಟ, ಗುರಿ ಪೂರೈಕೆ ಮತ್ತು ನಿರಂತರ ಒತ್ತಡ. ಈ ವೃತ್ತಿಗೆ ಪ್ರಾಮಾಣಿಕತೆ, ಅಧ್ಯಯನ ಮತ್ತು ನಿರಂತರ ಶ್ರಮ ಅವಶ್ಯಕ. ಆರೋಗ್ಯ ಕ್ಷೇತ್ರದ ಒಬ್ಬ ನಿಸ್ವಾರ್ಥ ಸೇನಾನಿಯಾಗಿ M.R. ಗಳ ಬಾಳು ಪರಿಗಣಿಸಲಾಗಬೇಕು. ಇಂಥವರ ಸಂಕಷ್ಟಗಳಿಗೆ ಸರ್ವಜನೆ ಮನಸ್ಸು ಕೊಡಬೇಕಾಗಿದೆ.

# ಭೋಗದ ವಸ್ತುಗಳ ಮೇಲೆ ಹೆಚ್ಚುತ್ತಿರುವ ಆಸಕ್ತಿ: ಸೀತಾರಾಂ



• ಉದಯವಾಹಿನಿ, ಬೆಂಗಳೂರು

ಮನುಷ್ಯರು ಭೋಗದ ವಸ್ತುಗಳ ಮೇಲೆ ಹೆಚ್ಚು ಆಸಕ್ತಿ ಹೊಂದಿರುವುದರಿಂದ ಕೃಷಿ, ಅರಣ್ಯಗಳ ಸ್ವರೂಪ ಬದಲಾಗುತ್ತಿದೆ. ಕೆರೆಗಳನ್ನೇ ಕೊಂಡುಕೊಳ್ಳುವವರಿದ್ದು, ಅವರೊಂದಿಗೆ ನಾವು ಸ್ಪರ್ಧಿಸಲು ಸಾಧ್ಯವಿಲ್ಲ ಎಂದು ಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಂ ಹೇಳಿದರು.

**ಅ.ನ. ಯಲ್ಲಪ್ಪ ರೆಡ್ಡಿಯವರ ಕರ್ನಾಟಕ ಪ್ರಕೃತಿ:** ವಿಕೋಪಗಳು-ಆತಂಕಗಳು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಸೀತಾರಾಂ, ಮನುಷ್ಯ ಪ್ರಕೃತಿ ನಾಶ ಮಾಡೋದು ಜನ್ಮಸಿದ್ಧ ಹಕ್ಕು ಎಂದುಕೊಂಡಿದ್ದಾನೆ. ಪ್ರಕೃತಿಯೇ ಬದುಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದರು. ಹಳ್ಳಿಗಳಲ್ಲಿ ಕೆರೆಗಳನ್ನು ಉಳಿಸಿಕೊಳ್ಳುವ ಕೆಲಸವಾಗುತ್ತಿಲ್ಲ. ನಾನು ದಶಕದ ಹಿಂದೆ ನೋಡಿದ್ದ ಕೆರೆ ಈಗಿಲ್ಲ. ಸ್ಥಳೀಯರನ್ನು ಕೇಳಿದರೆ ತೋಟದ ಜೊತೆಗೆ ಕೆರೆಗಳಲ್ಲಿಯೂ ನಿವೇಶನಗಳನ್ನು ಮಾಡಲಾಗಿದೆ ಎನ್ನುತ್ತಾರೆ.

ನಿಮ್ಮ ಮುಂದಿನ ಜನಾಂಗಕ್ಕೆ ಏನು ಸಿಗುತ್ತೆ ಎಂದು ಕೇಳಿದರೆ, 30 ವರ್ಷದ ನಂತರ ನಾನೇ ಇರೊಲ್ಲ ಬಿಡಣ್ಣ ಅನ್ನುತ್ತಿದ್ದಾರೆ. ಹೀಗಾಗಿ ಪರಿಸರವನ್ನು ಉಳಿಸಿಕೊಳ್ಳುವ ಬದ್ಧತೆ ಕಡಿಮೆಯಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು. ಬೆಂಗಳೂರು ಹವಾನಿಯಂತ್ರಿತ ನಗರ ಎಂದು ಬೀಗುವ ಕಾಲ ಇದಲ್ಲ. ದೆಹಲಿ ನಂತರ ವಾಯುಮಾಲಿನ್ಯ ಹೆಚ್ಚಿರುವ ನಗರ ನಮ್ಮದಾಗುತ್ತಿದೆ. ಕನಸಿನ ಬೆಂಗಳೂರು ನರಕವಾಗುತ್ತಿದೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಶುದ್ಧ ಗಾಳಿ, ನೀರು ಸಿಗುತ್ತಿಲ್ಲ ಎಂದರು. ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಕರ್ನಾಟಕದ ಮಣ್ಣನ್ನು ಉಳಿಸುವಂತಹ ಚಾರಿತ್ರಿಕ ತೀರ್ಪುಗಳನ್ನು ನೀಡಿದ್ದಾರೆ. ಯಲ್ಲಪ್ಪ ರೆಡ್ಡಿಯವರು ಪರಿಸರ ಸಂರಕ್ಷಣೆಯಲ್ಲಿ ಎಲ್ಲರಿಗೂ ಮಾದರಿಯಾಗಿದ್ದಾರೆ' ಎಂದು ಶ್ಲಾಘಿಸಿದರು. ಯಲ್ಲಪ್ಪರೆಡ್ಡಿ ಅವರ ಒತ್ತಾಸೆಯಿಂದಲೇ ಮರ ಸಂರಕ್ಷಣಾ ಕಾಯ್ದೆ ಜಾರಿಯಾಗಿದೆ. ಮರಗಳನ್ನು ಉಳಿಸಲು ಕಾಯ್ದೆಯಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸುವ ಅಗತ್ಯವಿದೆ ಎಂದು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು. ಪರಿಸರ ತಜ್ಞ ಅ.ನ. ಯಲ್ಲಪ್ಪ ರೆಡ್ಡಿ, ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ, ನ್ಯಾಷನಲ್ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ವೆಂಕಟಶಿವಾ ರೆಡ್ಡಿ, ಬುಕ್‌ಬ್ರಹ್ಮ ಕನ್ನಡದ ದೇವು ಪತ್ತಾರ್, ಜನ ಪ್ರಕಾಶನದ ಬಿ. ರಾಜಶೇಖರ್ ಮೂರ್ತಿ, ಕೃತಿ ನಿರೂಪಕ ನಿರಂಜನ ಪರಾಂಜಪೆ ಉಪಸ್ಥಿತರಿದ್ದರು.

● ಕಾರಹುಣ್ಣಿಮೆಯಂದು ಎತ್ತುಗಳ ಶೃಂಗರಿಸಿ ಸಂಭ್ರಮಿಸಿದ ಉತ್ತರ ಕರ್ನಾಟಕ ಭಾಗದ ರೈತರು

# ದೇಶಕ್ಕೆ ರೈತರು ಅನ್ನದಾತರಾದರೆ ರೈತರಿಗೆ ಎತ್ತುಗಳು ಅನ್ನದಾತರು

**ಉದಯವಾಹಿನಿ ವಿಶೇಷ ವರದಿ**

• ಮಹೇಬೂಬಶಾ ಅಣವಾರ

• ಉದಯವಾಹಿನಿ ಚಿಂಚೋಳಿ

ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮತ್ತು ಇಡೀ ಉತ್ತರ ಕರ್ನಾಟಕ ಭಾಗದಲ್ಲಿ ರೈತರು ಕಾರಹುಣ್ಣಿಮೆಯನ್ನು ಸಂಭ್ರಮದಿಂದ ಆಚರಿಸುತ್ತಾರೆ. ದೇಶಕ್ಕೆ ರೈತರು ಅನ್ನದಾತರಾದರೆ ರೈತರಿಗೆ ಎತ್ತುಗಳೆ ಅನ್ನದಾತರು,ಕಾರಹುಣ್ಣಿಮೆ ಹಬ್ಬವನ್ನು ಎತ್ತುಗಳ ಹಬ್ಬವಾಗಿ ರೈತರು ಆಚರಣೆ ಮಾಡುತ್ತಾರೆ ಎತ್ತುಗಳಿಗೆ ಕೃತಜ್ಞತೆ ಹೇಳುವ ಕಾರ ಹುಣ್ಣಿಮೆಯ ಹಬ್ಬವಾಗಿದೆ.

ಕಲಬುರಗಿ ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ,ಉತ್ತರ ಕರ್ನಾಟಕ ಭಾಗದಲ್ಲಿ ರೈತರು ಸಂಭ್ರಮದಿಂದ ಆಚರಿಸುವ ಹಬ್ಬ ಕಾರಹುಣ್ಣಿಮೆ,ಬೇಸಿಗೆಕಾಲ ಮುಗಿದು,ಮುಂಗಾರು ಹಂಗಾಮು ಪ್ರಾರಂಭವಾಗುವ ಹೊತ್ತಿಗೆ ಬರುವ ಕಾರಹುಣ್ಣಿಮೆ ರೈತರ ಮೊದಲ ಹಬ್ಬ ಅಂತಲೇ ಕರೆಯಲಾಗುತ್ತದೆ,ಬೇಸಿಗೆಯಲ್ಲಿ ಎತ್ತುಗಳಿಂದ ಭೂಮಿಯಲ್ಲಿ ಉಳುಮೆ ಮಾಡುವ ರೈತರು ನಂತರ ಕಾರ ಹುಣ್ಣಿಮೆ ಸಮಯ ಅವುಗಳಿಗೆ ವಿಶ್ರಾಂತಿಯನ್ನು ನೀಡಿ ನಂತರ ಮುಂಗಾರು ಮಳೆಯಾಗುತ್ತಿದ್ದಂತೆ ಮತ್ತೆ ಕೃಷಿಯಲ್ಲಿನ ಉಳುಮೆಗೆ ಎತ್ತುಗಳಿಗೆ ಕುಂಟ್ಟೆ ನೆಗಿಲು,ಹೊಲಗಳು ಬಿತ್ತನೆಗೆ ಹೋಗುತ್ತಾರೆ,ಹೀಗಾಗಿ ಕಾರಹುಣ್ಣಿಮೆಯನ್ನು ಪ್ರತಿವರ್ಷ ರೈತರು ಸಂಭ್ರಮದಿಂದ ಆಚರಿಸುತ್ತಾರೆ. ಕಲಬುಗಿ ೯,ಬೀದರ,ಯಾದಗಿರಿ, ರಾಯಚೂರು,ಬಳ್ಳಾರಿ,ಸೇರಿದಂತೆ

**ಏನಿದು ಕಾರ ಹುಣ್ಣಿಮೆ ವಿಶೇಷತೆ**

**ದೇಶಕ್ಕೆ ರೈತ ಬೆನ್ನೆಲುಬಾದರೆ,ರೈತರಿಗೆ ಮಾತ್ರ ಎತ್ತುಗಳೇ ಬೆನ್ನೆಲುಬು, ಎತ್ತುಗಳು ರೈತರ ಬೆನ್ನೆಲುಬಾಗಿ ಕೃಷಿ ಭೂಮಿಯಲ್ಲಿ ದುಡಿಯುತ್ತವೆ. ಯಂತ್ರಗಳು ಇರಲಿ,ಇರದಿರಲಿ ರೈತರ ಜಮೀನಿನಲ್ಲಿ ಅತಿ ಹೆಚ್ಚು ದುಡಿಯುವುದು ಎತ್ತುಗಳು,ಇತ್ತೀಚೆಗೆ ಕೃಷಿಯಲ್ಲಿ ಯಂತ್ರಗಳ ಬಳಕೆ ಹೆಚ್ಚಾಗುತ್ತಿವೆ ಆದರೂ ಕೂಡ ಗ್ರಾಮೀಣ ಭಾಗದಲ್ಲಿ ಇಂದಿಗೂ ಕೃಷಿಗೆ ಎತ್ತುಗಳೇ ಆಧಾರಸ್ತಂಭವಾಗಿದೆ. ಹೀಗಾಗಿ ರೈತರು ಎತ್ತುಗಳನ್ನು ಪೂಜನೀಯ ಭಾವದಿಂದ ಕಾಣುತ್ತಾರೆ,ಪ್ರತಿ ವರ್ಷ ರೈತರು ಉಳುಮೆಗೆ ಎತ್ತುಗಳನ್ನು ಬಳಸುತ್ತಾರೆ, ಬೇಸಿಗೆಯ ಸುಡು ಬಿಸಿಲಿನಲ್ಲಿ ಎತ್ತುಗಳಿಂದ ಉಳುಮೆ ಮಾಡುವ ರೈತರು, ಕಾರ ಹುಣ್ಣಿಮೆಯ ದಿನದಂದು ಎತ್ತುಗಳಿಗೆ ತಮ್ಮ ಕೃತಜ್ಞತೆಯನ್ನು ಸಮರ್ಪಿಸುತ್ತಾರೆ,ಅವುಗಳನ್ನು ಪೂಜೆ ಮಾಡಿ,ಅವುಗಳ ಸೇವೆಯನ್ನು ಸ್ಮರಿಸುತ್ತಾರೆ ಇದುವೆ ಕಾರಹುಣ್ಣಿಮೆಯ ಹಬ್ಬವಾಗಿದೆ.**







ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮತ್ತು ಇಡೀ ಉತ್ತರ ಕರ್ನಾಟಕ ಭಾಗದಲ್ಲಿ ರೈತರು ಕಾರ ಹುಣ್ಣಿಮೆಯನ್ನು ಸಂಭ್ರಮದಿಂದ ಆಚರಿಸುತ್ತಾರೆ. ಆದರೆ ಗ್ರಾಮೀಣ ಭಾಗದಲ್ಲಿ ರೈತರು ತಮ್ಮ ಎತ್ತುಗಳಿಗೆ ಶೃಂಗಾರ ಮಾಡಿ ಸಂಭ್ರಮಿಸುತ್ತಾರೆ,ಕಾರ ಹುಣ್ಣಿಮೆಯಂದು ರೈತರು ಎತ್ತುಗಳ ಮೈತೊಳೆದು,ಅವುಗಳಿಗೆ ಬಣ್ಣ ಹಚ್ಚುತ್ತಾರೆ,ಅವುಗಳ ಕೊರಳಲ್ಲಿ ಗೆಜ್ಜೆ ಸರ ಸೇರಿದಂತೆ ವಿವಿಧ ಅಲಂಕಾರಿಕ ವಸ್ತುಗಳನ್ನು ಹಾಕುತ್ತಾರೆ. ಹೋಳಿಗೆ ಸೇರಿದಂತೆ ವಿವಿಧ ರೀತಿ ಅಡುಗೆಯನ್ನು ಮನೆಯಲ್ಲಿ ಮಾಡುತ್ತಾರೆ.ತಮ್ಮ ಮನೆಯಲ್ಲಿರುವ ಎತ್ತುಗಳಿಗೆ ಹೋಳಿಗೆ ಸೇರಿದಂತೆ ಸಿಹಿ ತಿನಿಸುಗಳನ್ನು ತಿಳಿಸುತ್ತಾರೆ. ದೇವಸ್ಥಾನಗಳಿಗೆ ಎತ್ತುಗಳನ್ನು ಕರೆದುಕೊಂಡು ಹೋಗಿ ಕರಿ ಹರಿದು ಎತ್ತುಗಳಿಗೆ ಏನು ತೊಂದರೆಯಾಗದಂತೆ ದೇವರಲ್ಲಿ ಸ್ಮರಿಸಿ ಬರುತ್ತಾರೆ.

ಕಾರ ಹುಣ್ಣಿಮೆಯ ದಿನ ಎತ್ತುಗಳನ್ನು ಪೂಜನೀಯ ಭಾವದಿಂದ ರೈತರು ಕಾಣುತ್ತಾರೆ,ಅನೇಕ ಕಡೆ ಗ್ರಾಮದಲ್ಲಿ ಎತ್ತುಗಳ ಮೆರವಣಿಗೆ ಮಾಡಲಾಗುತ್ತದೆ,ಅನೇಕ ಕಡೆ ಕಾರಹುಣ್ಣಿಮೆಯ ನಿಮಿತ್ತ ಎತ್ತಿನ ಬಂಡಿಯನ್ನು ಓಡಿಸಲಾಗುತ್ತದೆ.

ರೈತರು ಕೂಡ ಎತ್ತುಗಳ ಜೊತೆ ತಮ್ಮ ಮನೆಯಲ್ಲಿರುವ ಬೇರೆ ಬೇರೆ ರಾಸುಗಳಿಗೆ ಕೂಡಾ ಪೂಜೆ ಮಾಡುತ್ತಾರೆ,ಸಿಹಿ ತಿನಿಸುಗಳನ್ನು ತಿನ್ನಿಸುತ್ತಾರೆ. ಸಿಂಗಾರಗೊಂಡ ಎತ್ತುಗಳು ಅಗಸಿಯ ಬಡಗಲಕ್ಕೆ ಕರಿ ಹರಿಯುವ ಮೂಲಕ ಹಬ್ಬ ಆಚರಣೆ ಮಾಡುವುದು ಸಂಪ್ರದಾಯವಾಗಿದೆ. ಹೀಗೆ ಪ್ರತಿ ವರ್ಷ ರೈತರು ಕಾರ ಹುಣ್ಣಿಮೆಯ ಹಬ್ಬ ಸಂಭ್ರಮದಿಂದ ಆಚರಿಸಿ ಮುಕ್ತಾಯಗೊಳಿಸುತ್ತಾರೆ.

## ಮಿನಿ ನ್ಯೂಸ್

### ಹೆಚ್ಚುವರಿಯಾಗಿ ಒಂದು ಪಾನಿ ಪೂರಿ ನೀಡುವ ವಿಷಯ: ಒಂಭತ್ತು ಮಂದಿಯ ದಸ್ತಗಿರಿ

• ಉದಯವಾಹಿನಿ ಉಡುಪಿ

10/06/2025ರಂದು ರಾತ್ರಿ 08:30 ಗಂಟೆಗೆ ಮಲ್ಪೆ ಬೀಚ್ ಬಳಿಯ ಪಾನಿ ಪೂರಿ ಅಂಗಡಿಯಲ್ಲಿ ಹೆಚ್ಚುವರಿಯಾಗಿ ಒಂದು ಪಾನಿ ಪೂರಿ ನೀಡುವ ವಿಷಯವಾಗಿ ಪ್ರವಾಸಕ್ಕೆ ಬಂದ ಮಂಡ್ಯ ಜಿಲ್ಲೆಯ ಪ್ರವಾಸಿಗರಿಗೆ ಮತ್ತು ಸ್ಥಳೀಯ ಪಾನಿ ಪುರಿ ಅಂಗಡಿಯವರಿಗೆ ಗಲಾಟೆಯಾಗಿ, ಬೈದಾಡಿಕೊಂಡಿದ್ದು, ಎರಡೂ ಕಡೆಯಿಂದ ಹಲ್ಲೆ ನಡೆಸಿರುತ್ತಾರೆ. ಈ ಬಗ್ಗೆ ದೂರು ಪ್ರತಿದೂರು ನೀಡಲಾಗಿದ್ದು ಮಲ್ಪೆ ಪೊಲೀಸ್ ಠಾಣೆ ಅಪರಾಧ ಪ್ರಕರಣ ದಾಖಲಾಗಿರುತ್ತದೆ.

ಈ ಎರಡು ಪ್ರಕರಣಗಳು ಕೇಸ್ ಕೌಂಟರ್ ಕೇಸ್ ಆಗಿದ್ದು, ಮೊದಲ ಪ್ರಕರಣದ ಆರೋಪಿಗಳಾದ 1.ಸುದೀಪ, 2.ಸಂಪತ್, 3.ಪುನೀತ, 4.ಮಹೇಶ, 5.ಕನ್ನ ವೈಜಿ 6.ಅರವಿಂದ ಹಾಗೂ ಎರಡನೇ ಪ್ರಕರಣದ ಆರೋಪಿಗಳಾದ 1.ರಮೇಶ 2.ಮೋನು 3.ವಿನೋದನನ್ನು ದಸ್ತಗಿರಿ ಮಾಡಲಾಗಿರುತ್ತದೆ.

## 39ನೇ ಸಂಚಿಕೆಯ ಶರಣ ಬೆಳಗು

• ಉದಯವಾಹಿನಿ ಮುದ್ದೇಬಿಹಾಳ



ಉದಯವಾಹಿನಿ ಚಿತ್ರ

ಚಿಂತೆ ನಮ್ಮನ್ನು ಸುಡುತ್ತದೆಯೇ ಹೊರತು ಚಿಂತನೆಗೆ ಹಚ್ಚೊಲ್ಲ. ವೈಭವೀಕರಣದ ಚಿಂತೆಗಳು ನಮ್ಮನ್ನು ಹಾಳುಗೆಡವುತ್ತಿವೆ. ನಮ್ಮ ಇಂದ್ರಿಯಗಳೇ ನಮ್ಮ ಅವನತಿಗೆ ಕಾರಣವಾಗುತ್ತಿವೆ. ಬದುಕಿನ ಸಂಗ ವಿಶೇಷವಾಗಿರಬೇಕು. ಆ ಸಂಗವು ನಮ್ಮ ಜೀವನದ ಮೇಲೆ ಪ್ರಭಾವ ಬೀರುವಂತಿರಬೇಕು. ನಾವು ಮಾಡುವ ಕೆಲಸ ನಮಗೆ ತೃಪ್ತಿಕೊಡುವಂತಿರಬೇಕೆ ಹೊರತು ಸಮಾಜವನ್ನು ಮೆಚ್ಚಿಸುವುದಕ್ಕಾಗಿ ಇರಬಾರದು. ಪ್ರತಿಷ್ಠೆ ಅಹಂಕಾರವಾಗಬಾರದು ಎಂದು ಬಸವನ ಬಾಗೇವಾಡಿಯ ಶಿಕ್ಷಕಿ, ಸಾಹಿತಿ, ವಾಗ್ಮಿ ಗಿರಿಜಾ ಪಾಟೀಲ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕದಳಿ ವೇದಿಕೆ ನೇತೃತ್ವದಲ್ಲಿ ಸಂಜೆ ಏರ್ಪಡಿಸಿದ್ದ 39ನೇ ಸಂಚಿಕೆಯ ಶರಣ ಬೆಳಗು ಹುಣ್ಣಿಮೆಯ ಕಾರ್ಯಕ್ರಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಕುರಿತು ಅನುಭಾವ ನಡೆಸಿಕೊಡುತ್ತ ಅವರು ಮಾತನಾಡಿದರು.

ಮಹಾದೇವಿ ನಾಲತವಾಡ ಅವರು ಮಾತನಾಡಿ ಕದಳಿ ವೇದಿಕೆಯು ಮಹಿಳಾ ಸಮಾವೇಶ, ಮಹಿಳಾ ದಿನಾಚರಣೆ, ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ಸಾಧಕ ಮಹಿಳೆಯರಿಗೆ ಸನ್ಮಾನ, ಕೊರೋನಾದಲ್ಲಿ ಆನಲೈನ್ ಕಾರ್ಯಕ್ರಮ ಹೀಗೆ ಹಲವು ಚಟುವಟಿಕೆಗಳಿಂದ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ ಎಂದರು.

> **ಕಾರ್ಯಕ್ರಮ ಸ್ಥಳದಾನಿ ನಿವೃತ್ತ ಶಿಕ್ಷಕ ಮಹಾಂತೇಶ ಧನ್ನೂರ ಅವರು ಅಜಾತಶತ್ರುವಾಗಿದ್ದಾರೆ. ಸೌಜನ್ಯತೆಗೆ, ಸಹೃದಯತೆಗೆ ಮತ್ತೊಂದು ಹೆಸರೇ ಧನ್ನೂರ ಅವರು. ನಲವತ್ತು ವರ್ಷ ಮೂರು ತಿಂಗಳು ಶಿಕ್ಷಕರಾಗಿ ಸಾರ್ಥಕ ಸೇವೆ ಸಲ್ಲಿಸಿ ನಿವೃತ್ತಿಯ ನಂತರವೂ ಸಮಾಜಮುಖಿ ಕಾರ್ಯ ಮುಂದುವರಿಸಿಕೊಂಡು ಹೋಗುತ್ತಿರುವ ಅವರು ತಮ್ಮಂತಹ ಅನೇಕ ನಿವೃತ್ತರಿಗೆ ಮಾದರಿಯಾಗಿದ್ದಾರೆ -ಬಿ.ವಿ.ಕೋರಿ**

ಅಧ್ಯಕ್ಷತೆ ವಹಿಸಿದ್ದ ಕದಳಿ ವೇದಿಕೆ ಅಧ್ಯಕ್ಷೆ ಕಾಶಿಬಾಯಿ ಶಿವಯೋಗೆಪ್ಪ ರಾಂಪೂರ ಅವರು ಮಾತನಾಡಿ, ಇಂಥ ವಿಶೇಷ ಕಾರ್ಯಕ್ರಮಗಳಿಗೆ ಬರುವ ಹಿರಿಯರು ತಮ್ಮ ಮಕ್ಕಳನ್ನು ಕರೆತಂದರೆ ಅವರಿಗೆ ಶರಣರ ಬದುಕಿನ, ಅವರ ವಚನಗಳ ಸಾರದ ಅರ್ಥವಾಗುತ್ತದೆ. ಭವಿಷ್ಯದ ನಾಗರಿಕರಾಗಿರುವ ಮಕ್ಕಳಿಗೆ ಇಂಥ ಸಾತ್ವಿಕ, ಬದುಕಿನ ನಿಜವಾದ ಅರ್ಥ ತಿಳಿಸಿಕೊಡುವ ಕಾರ್ಯಕ್ರಮಗಳು ಹೆಚ್ಚು ಉಪಯುಕ್ತವಾಗುತ್ತವೆ ಎಂದರು.

ಗೌರವ ಅತಿಥಿಯಾಗಿದ್ದ ನ್ಯಾಯವಾದಿ ನೇತ್ರಾವತಿ ವಡವಡಗಿ, ಸ್ಥಳದಾನಿ ಮಹಾಂತೇಶ ಧನ್ನೂರ ಮಾತನಾಡಿದರು. ವಿಶ್ರಾಂತ ಶಿಕ್ಷಕಿ ಲಕ್ಷ್ಮೀ ಬಾಯಿ ಗಣಾಚಾರಿ, ಹಿರಿಯ ವೈದ್ಯೆ ಡಾ. ಅರುಣಾ ಜುಲ್ಪೆ, ಶಿಕ್ಷಕಿ ರೋಹಿಣಿ ವಡವಡಗಿ ವೇದಿಕೆಯಲ್ಲಿದ್ದರು. ಎಲ್ಲಾ ಗಣ್ಯ ಮಹಿಳೆಯರನ್ನು ಸನ್ಮಾನಿಸಿ ಗೌರವಿಸಲಾಯಿತು.

## ಕಾರ ಹುಣ್ಣುಮೆ ಸಂಭ್ರಮ: ಮಳೆ ಬೆಳೆ ಮುನ್ಸೂಚನೆ ನೀಡುವ ಎತ್ತುಗಳು

• ಉದಯವಾಹಿನಿ ಮುದ್ದೇಬಿಹಾಳ


ಉದಯವಾಹಿನಿ ಚಿತ್ರ

ವರ್ಷವಿಡೀ ಶ್ರಮವಹಿಸುವ ಎತ್ತುಗಳಿಗೆ ರೈತರು ಸ್ನಾನ ಮಾಡಿಸಿ ಬಣ್ಣ ಬಣ್ಣಗಳಿಂದ ಅಲಂಕಾರಿಕ ವಸ್ತುಗಳಿಂದ ಶೃಂಗಾರ ಮಾಡಿ ಪೂಜೆ ಸಲ್ಲಿಸಿ ನೈವೇದ್ಯ ಅರ್ಪಿಸಲಾಯಿತು ಈ ದೃಶಗಳು ಕಂಡುಬಂದದ್ದು ಕಾರ ಹುಣ್ಣುಮೆಯ ಹಬ್ಬದಂದು ಮುದ್ದೇಬಿಹಾಳ ತಾಲ್ಲೂಕಿನಾದ್ಯಾಂತ ಕಾರ ಹುಣ್ಣುಮೆ ಕರಿ ಹರಿಯಲಾಯಿತು ಆದರೆ ಮುದ್ದೇಬಿಹಾಳ ಪಟ್ಟಣದಲ್ಲಿ ಗ್ರಾಮದೇವತೆ ಜಾತ್ರೆಯಾದ ಹಿನ್ನಲೆ ಕರಿಯನ್ನು ಹರಿಯಲಿಲ್ಲ

> **ರೈತನ ಜೀವನಾಡಿ, ರೈತನ ಮಿತ್ರ ಎತ್ತು. ಆ ಎತ್ತಿಗೆ ಇವತ್ತು ಸಂಭ್ರಮದ ದಿನ ಯಾಕಂದ್ರೆ ವರ್ಷವಿಡೀ ಶ್ರಮವಹಿಸಿ ರೈತನಿಗೆ ಬೆನ್ನಿಗೆ ಬೆನ್ನು ಕೊಟ್ಟು ಸಹಕಾರ ನೀಡಿ ಅನ್ನದಾತನ ಪಾಲಿಗ ನಿಜವಾದ ಆಪ್ತಮಿತ್ರ ಅನಿಸಿಕೊಂಡಿದೆ, ಹಾಗಾಗಿ ಕಾರ ಹುಣ್ಣಿಮೆಗೊಮ್ಮೆ ಎತ್ತುಗಳಿಗೆ ವಿಶೇಷವಾಗಿ ಕರಿ ಹರಿಯುವ ಮೂಲಕ ಎತ್ತುಗಳಿಗೆ ರೈತರು ಕೃತಜ್ಞತೆ ಸಲ್ಲಿಸುತ್ತಾರೆ -ಗುರುಮೂರ್ತಿ ದೇವರು**
> **( ದೇವಿ ಉಪಾಸಕರು ಲೋಟಗೇರಿ)**

ಸಂಪ್ರದಾಯದಂತೆ ಗ್ರಾಮದೇವತೆ ಜಾತ್ರೆಯಾದ ವರ್ಷ ಕಾರ ಹುಣ್ಣಿಮೆ ಕರಿ ಹರಿಯುವುದಿಲ್ಲ

ಉ.ಕ ಭಾಗದ ಎಲ್ಲಾ ಜಿಲ್ಲೆ ತಾಲ್ಲೂಕಿನ ಗ್ರಾಮಗಳಲ್ಲಿ ರೈತರು ಕಾರಹುಣ್ಣಿಮೆಯನ್ನು ವಿಶೇಷವಾಗಿ ಆಚರಿಸುತ್ತಾರೆ ಕಾರ ಹುಣ್ಣುಮೆ ಅಂಗವಾಗಿ ಎತ್ತುಗಳನ್ನು ಕರೆದೊಯ್ದು ತೊಳೆದರು. ವಿಧವಿಧವಾದ ಗುಲಾಲು ಹಚ್ಚಿದರು. ಕೊಂಬಿಗೆ ಬಣ್ಣ, ಕೊಮ್ಮಣಸು, ಹಣೆಗೆ ಬಾಸಿಂಗ ಕಟ್ಟಿದರು. ಕೊರಳಲ್ಲಿ ಗಂಟೆ ಕಟ್ಟಿ, ಮಾಲೆ ಹಾಕಿ ಮನೆಯವರೆಲ್ಲ ಸೇರಿ ಭಕ್ತಿಯ ಪೂಜೆ ಸಲ್ಲಿಸಿದರು. ಹೋಳಿಗೆ ಮಾಡಿ ಹಬ್ಬದೂಟ ಸವಿದರು. ನಂತರ ಊರವರ ಜೊತೆಗೆ ಸೇರಿ ತಮ್ಮ ಎತ್ತುಗಳನ್ನು ಮೆರವಣಿಗೆಗಾಗಿ ಕರೆದುಕೊಂಡು ಹೋದರು. ಎತ್ತುಗಳನ್ನೆಲ್ಲ ಜೊತೆ ಮಾಡಿಕೊಂಡು ಓಡಿಸುತ್ತ ಕರಿ ಹರಿಯುವ ಸಂಭ್ರಮದಲ್ಲಿ ಪಾಲ್ಗೊಂಡರು.

**ರೈತರು ಕೇಕೆ ಹಾಕಿ ಉತ್ಸಾಹ**

**ಊರ ಅಗಸಿಯಲ್ಲಿ ಬೇವಿನ ತಪ್ಪಲಿನ ತೋರಣದ ನಡುವೆ ಕೊಬ್ಬರಿಯನ್ನು ಕಟ್ಟಲಾಗಿರುತ್ತೆ. ಕರಿ ಹರಿಯಲು ಬಿಳಿ, ಹಾಗೂ ಕೆಂದು ಬಣ್ಣದ ಎತ್ತುಗಳಿಗೆ ಮಾತ್ರ ಅವಕಾಶ ನೀಡಲಾಗುತ್ತೆ. ಹಲಗೆ ಸದ್ದು ಮಾಡುತ್ತಿದ್ದಂತೆ ಅಗಸಿ ಎದುರಿಗೆ ಕರಿ ಹರಿಯಲು ಎತ್ತುಗಳೊಂದಿಗೆ ರೈತರು ತಾ ಮುಂದು ನೀ ಮುಂದು ಎಂದು ಎತ್ತುಗಳನ್ನು ಓಡಿಸಿಕೊಂಡು ಬಂದು ಕರಿ ಹರಿಯುತ್ತಾರೆ. ಕರಿಯುವ ಓಟದಲ್ಲಿ ಇತರೆ ರೈತರು ಕೇಕೆ ಹಾಕಿ ಉತ್ಸಾಹ ತುಂಬುತ್ತಾರೆ. ಯಾವ ಬಣ್ಣದ ಎತ್ತು ಕರಿಹರಿಯುತ್ತೋ ಆ ಬಣ್ಣದ ಬೆಳೆ ಚೆನ್ನಾಗಿ ಬರುತ್ತೆ ಅನ್ನುವ ನಂಬಿಕೆ ರೈತರದ್ದಾಗಿದೆ.**

## ಭೀಮರಾವ ಟಿ.ಟಿ.ಗೆ ವಿಧಾನಪರಿಷತ್ ಸದಸ್ಯ ಅಥವಾ ರಾಜ್ಯ ನಿಗಮ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲು ಮನವಿ

• ಉದಯವಾಹಿನಿ,ಚಿಂಚೋಳಿ



ಕಾಂಗ್ರೇಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಕಟ್ಟಾಳು ಪಕ್ಷದ ಏಳಿಗೆಗಾಗಿ ಕಳೆದ 40ವರ್ಷದಿಂದ ಹಗಲಿರುಳು ಶ್ರಮಿಸಿದ ಭೀಮರಾವ ಟಿ.ಟಿಯವರಿಗೆ ವಿಧಾನ ಪರಿಷತ್ ಸದಸ್ಯ ಅಥವಾ ರಾಜ್ಯ ನಿಗಮ ಮಂಡಳಿ ಅಧ್ಯಕ್ಷರಾಗಿ ನೇಮಿಸುವಂತೆ ಕಾಂಗ್ರೇಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರಲ್ಲಿ ಕಾಂಗ್ರೇಸ್ ಸೇವಾದಳ ಯಂಗ್ ಬ್ರಿಗೇಡ್ ತಾಲ್ಲೂಕಾಧ್ಯಕ್ಷ ಆನಂದ ಮೇತ್ರಿ ಮನವಿ ಮಾಡಿದ್ದಾರೆ.



**ಹಗಲಿರುಳು ಶ್ರಮಿಸಿದ ಭೀಮರಾವ**

ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು, ಕಾಂಗ್ರೇಸ್ ಪಕ್ಷಕ್ಕೆ ತಮ್ಮ ಸೇವೆಯನ್ನು ಯಾವುದೆ ನಿರೀಕ್ಷೆ ಮಾಡದೇ ಪಕ್ಷಕ್ಕಾಗಿ ಪಂಚಾಯಿತಿ ಹಿಡಿದು, ಪಟ್ಟಣ ಪಂಚಾಯತಿ, ಪುರಸಭೆ, ಮಹಾನಗರ ಪಾಲಿಕೆ, ತಾಲ್ಲೂಕ ಪಂಚಾಯತಿ, ಜಿಲ್ಲಾ ಪಂಚಾಯತಿ, ರಾಜ್ಯಸಭೆ,ವಿಧಾನಸಭೆ ಹಾಗೂ ಲೋಕಸಭೆ ಮತ್ತು ಎಲ್ಲಾ ರೀತಿಯ ಸಾರ್ವತ್ರಿಕ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಹಗಲಿರುಳು ದುಡಿದು ಗೆಲ್ಲಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ.

ಚಿಂಚೋಳಿ ಮತ ಕ್ಷೇತ್ರದಲ್ಲಿ ವಿಧಾನಸಭೆ ಅಭ್ಯರ್ಥಿಗಳ ಪರವಾಗಿ ಹಗಲು ರಾತ್ರಿ ಅನ್ನದೇ ಕಾರ್ಯ ನಿರ್ವಹಿಸಿ ಉಪ ಚುನವಣೆಯಲ್ಲಿ ವಿಶೇಷವಾಗಿ ಇವರ ಪಾತ್ರ ತುಂಬಾ ಮುಖ್ಯವಾಗಿರುತ್ತು.

ಆದರಿಂದಮತಕ್ಷೇತ್ರದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ನಿಷ್ಠೆಯಿಂದ ದುಡಿದಿರುವ ಭೀಮರಾಮ ಟಿ.ಟಿ ಅವರನ್ನು ಈ ಭಾರಿ ವಿಧಾನಪರಿಷತ್‌ಗೆ ಆಗಲಿ ರಾಜ್ಯ ನಿಗಮ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಎಂದರು. ರೇವಣಸಿದ್ದ ಶರ್ಮಾ,ರಾಘವೇಂದ್ರ, ಗೌತಮ್ , ಶರಣು ತಳವಾರ,ಚಂದ್ರಕಾಂತ ಮನವಿ ಮಾಡಿದ್ದಾರೆ.

## ಯರಬಳ್ಳಿ ಗೊಲ್ಲರಹಟ್ಟಿ: ಮೌಢ್ಯ ಪದ್ಧತಿ ಆಚರಣೆ ವಿರುದ್ಧ ಜಾಗೃತಿ

• ಉದಯವಾಹಿನಿ ಚಿತ್ರದುರ್ಗ


ಉದಯವಾಹಿನಿ ಚಿತ್ರ

ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಯರಬಳ್ಳಿ ಗೊಲ್ಲರಹಟ್ಟಿಯಲ್ಲಿ ಮಂಗಳವಾರ ಮೌಢ್ಯ ಪದ್ಧತಿ ಮತ್ತು ಆಚರಣೆ ವಿರುದ್ಧ ಜಾಗೃತಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಜೆಂಡರ್ಸ್ ಸ್ಪೆಷಲಿಸ್ಟ್ ಡಿ. ಗೀತಾ ಅವರು ಮೌಢ್ಯ ಆಚರಣೆಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ಅದರಿಂದ ಸಮಾಜದಲ್ಲಿ ನಡೆಯುತ್ತಿರುವ ಅನಿಷ್ಟ ಪದ್ಧತಿಗಳ ಬಗ್ಗೆ ಜಾಗೃತಿ ಮೂಡಿಸಿದರು.

ಊರಿನಲ್ಲಿ ಯಾವುದೇ ಹೆಣ್ಣು ಮಗಳು ಋತುಮತಿ ಆದರೆ ಮತ್ತು ಯಾವುದೇ ಮಹಿಳೆ ಹೆರಿಗೆಯಾದರೆ ಊರಿನ ಪದ್ಧತಿಯ ಪ್ರಕಾರ ಆ ಮಹಿಳೆಯರು ಮನೆ ತೊರೆದು ಕುಟೀರಗಳಲ್ಲಿ ವಾಸ್ತವ್ಯ ಹೂಡುವುದು ವಾಡಿಕೆ ಆಗಿರುತ್ತದೆ.

ಮುಂದಿನ ದಿನಗಳಲ್ಲಿ ಈ ತರ ತಪ್ಪುಗಳನ್ನು ಮತ್ತು ಕೆಟ್ಟ ಆಚರಣೆಗಳನ್ನು ಮಾಡದಂತೆ ಗ್ರಾಮದ ಮಹಿಳೆಯರಿಗೆ ಜಾಗೃತಿಯನ್ನು ಮೂಡಿಸಲಾಯಿತು. ಮುಂದಿನ ದಿನಗಳಲ್ಲಿ ಈ ತರಹ ಆಚರಣೆಗಳು ಕಂಡು ಬಂದಲ್ಲಿ ಮೇಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಲಾಯಿತು. ಈ ತರದ ಪದ್ಧತಿಗಳು ಈ ಹಟ್ಟಿಗಳಲ್ಲಿ ಹೆಚ್ಚಾಗಿ ಕಂಡುಬಂದಲ್ಲಿ ಮಾಹಿತಿ ತಿಳಿಸುವಂತೆ ಗ್ರಾಮದ ಮಹಿಳೆಯರಿಗೆ ಮಹಿಳಾ ಸಹಾಯವಾಣಿ ಸಂಖ್ಯೆ 181 ಮತ್ತು ಪೊಲೀಸ್ ಸಹಾಯವಾಣಿ 112 ಮುತ್ತು ಮಕ್ಕಳ ಮೇಲೆ ಯಾವುದೇ ರೀತಿಯ ದೌರ್ಜನ್ಯಗಳ ನಡೆದಾಗ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಗೆ ಕರೆ ಮಾಡುವಂತೆ ತಿಳಿಸಲಾಯಿತು.

ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲಕಾರ್ಮಿಕರ ನಿಷೇಧ, ಬಾಲ ತಾಯಂದಿರು, ಪೋಕ್ಸೋ ಕಾಯಿದೆ, ಮಕ್ಕಳ ಸಹಾಯವಾಣಿ ಸಂಖ್ಯೆ 1098 ಸೇರಿದಂತೆ ಸುರಕ್ಷಿತ ಸ್ಪರ್ಶ ಅಸುರಕ್ಷಿತ ಸ್ಪರ್ಶ, ಶಾಲೆಯನ್ನು ತೊರೆದರೆ ಆಗುವಂತಹ ಅನಾನುಕೂಲತೆಗಳು ಹಾಗೂ ತಮ್ಮ ತಮ್ಮ ಮನೆಯ ಮಕ್ಕಳಿಗೆ ಶಿಕ್ಷಣ ಕೊಡಿಸುವಂತೆ ಪೋಷಕರಿಗೆ ಶಿಕ್ಷಣದ ಮಹತ್ವ ಕುರಿತು ಸೂಕ್ಷ್ಮವಾಗಿ ತಿಳಿಸಿ ಹಾಗೂ ಮೌಢ್ಯ ಆಚರಣೆಗಳನ್ನು ಮಾಡದಂತೆ ಜಾಗೃತಿಯನ್ನು ಮೂಡಿಸಲಾಯಿತು.

**ಹಸುಗುಸಿಗೂ ಸಹ ಭದ್ರತೆ ತುಂಬಾ ಮುಖ್ಯ**

**ಗೊಲ್ಲರಹಟ್ಟಿಗಳಲ್ಲಿ ಮೌಢ್ಯ ಪದ್ಧತಿ ಮತ್ತು ಆಚರಣೆ ಮಾಡುವುದು ತೀರ ತಪ್ಪು ಹಾಗೂ ಈ ತರಹದ ಆಚರಣೆಗಳನ್ನು ಮಾಡಿದ್ದಲ್ಲಿ ಹೆಣ್ಣು ಮಕ್ಕಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಕುಗ್ಗಿ ಹೋಗುತ್ತಾರೆ ಹಾಗೂ ಹೆಣ್ಣು ಮಕ್ಕಳು ಋತುಮತಿಯಾದ ಸಂದರ್ಭದಲ್ಲಿ ಮತ್ತು ಹೆರಿಗೆಯಾದ ಸಂದರ್ಭದಲ್ಲಿ ಅವರಿಗೆ ವೈಯಕ್ತಿಕ ಸ್ವಚ್ಛತೆ ಮತ್ತು ಬೆಚ್ಚನೆಯ ವಾತಾವರಣ ತುಂಬಾ ಮುಖ್ಯವಾಗಿ ರುತ್ತದೆ. ಅದರಂತೆ ಹಸುಗುಸಿಗೂ ಸಹ ಭದ್ರತೆ ತುಂಬಾ ಮುಖ್ಯವಾಗುತ್ತದೆ. ಬಾಣಂತಿ ಮಹಿಳೆಯರನ್ನು ದಯಮಾಡಿ ಮನೆಯಲ್ಲಿ ರಕ್ಷಣೆ ಮಾಡಿ ಎಂದು ಸಭಿಕರಿಗೆ ತಿಳಿಸಿದರು.**

## ಅನ್ನ ಭಾಗ್ಯದ ಅಕ್ಕಿ ಅಕ್ರಮ ದಾಸ್ತಾನು: ದಿನಸಿ ಅಂಗಡಿ ಮಾಲಕನ ಬಂಧನ

• ಉದಯವಾಹಿನಿ ಹಿರಿಯಡ್ಕ

ಬೊಮ್ಮರಬೆಟ್ಟು ಗ್ರಾಮದ ಮಾಂಬೆಟ್ಟು ಎಂಬಲ್ಲಿ ಸರಕಾರದ ಉಚಿತ ಅನ್ನ ಬಾಗ್ಯ ಯೋಜನೆಯ ಅಕ್ಕಿಯನ್ನು ಸಾರ್ವಜನಿಕರಿಂದ ಖರೀದಿಸಿ ದಾಸ್ತಾನು ಇಟ್ಟಿರುವ ಆರೋಪದಲ್ಲಿ ಓರ್ವ ಆರೋಪಿಯನ್ನು ಹಿರಿಯಡ್ಕ ಪೊಲೀಸರು ಜೂನ್ 10 ರಂದು ಬಂಧಿಸಿದ್ದಾರೆ.

ವಾಸುದೇವ ಪ್ರಭು(56) ಬಂದಿತ ಆರೋಪಿ. ಇವರಿಗೆ ಸೇರಿದ ಪ್ರಭು ಜನರಲ್ ಸ್ಟೋರ್‌ನಲ್ಲಿ ಸರಕಾರದ ಉಚಿತ ಅನ್ನ ಬಾಗ್ಯ ಯೋಜನೆಗೆ ಸಂಬಂಧಿಸಿದ ಅಕ್ಕಿಯನ್ನು ಸಾರ್ವಜನಿಕರಿಂದ ಖರೀದಿಸಿ ದಾಸ್ತಾನು ಇಟ್ಟಿರುವ ಬಗ್ಗೆ ಸಿಕ್ಕಿದ್ದ ಮಾಹಿತಿಯಂತೆ ಆಹಾರ ನಿರೀಕ್ಷಕರು ಮತ್ತು ಹಿರಿಯಡಕ ಪೊಲೀಸರು ದಾಳಿ ಮಾಡಿ, ಒಟ್ಟು 131 ಪ್ಲಾಸ್ಟಿಕ್ ಚೀಲಗಳಲ್ಲಿ 1,27,880 ರೂಪಾಯಿ ಮೌಲ್ಯದ ಒಟ್ಟು 55 ಕ್ವಿಂಟಾಲ್ 60 ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ಬಂಧಿಸಿ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಈ ಬಗ್ಗೆ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಗರದಲ್ಲಿ ಅಕ್ರಮ ಮದ್ಯ ಮಾರಾಟ ಓರ್ವ ಆರೋಪಿಯ ಬಂಧನ

• ಉದಯವಾಹಿನಿ ಉಡುಪಿ

ನಗರದ ಹಳೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸಮೀಪದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಓರ್ವ ಆರೋಪಿಯನ್ನು ಉಡುಪಿ ನಗರ ಪೊಲೀಸರು ಜೂ.11ರಂದು ಬಂಧಿಸಿದ್ದಾರೆ. ಬಂಧಿತನನ್ನು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ನಿವಾಸಿ ಶಂಭುಲಿಂಗ ಮಡಿವಾಳ(37) ಎಂದು ಗುರುತಿಸಲಾಗಿದೆ. ಬಂಧಿತನಿಂದ ಒಟ್ಟು 2,600 ರೂ. ವೌಲ್ಯದ ವಿವಿಧ ಬ್ರ್ಯಾಂಡ್‌ನ ಮದ್ಯದ ಸಾಚೇಟ್ ಮತ್ತು ನಗದು 3,960 ರೂ. ವಶಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 4ನೇ ತರಗತಿಯಲ್ಲಿದ್ದಾಗ ನಡೆದ ಹಲ್ಲೆಗೆ ಐವತ್ತು ವರ್ಷಗಳ ಬಳಿಕ ಪ್ರತೀಕಾರ

• ಉದಯವಾಹಿನಿ ಕಾಸರಗೋಡು

4ನೇ ತರಗತಿಯಲ್ಲಿದ್ದಾಗ ನಡೆದ ಹಲ್ಲೆ ವಿಚಾರಕ್ಕೆ ಸಂಬಂಧಿಸಿದಂತೆ ಬರೋಬ್ಬರಿ 50 ವರ್ಷಗಳ ಬಳಿಕ ಇಬ್ಬರು ವ್ಯಕ್ತಿಗಳು ತಮ್ಮ ಶಾಲಾ ಸಹಪಾಠಿಯ ಮೇಲೆ ಹಲ್ಲೆ ನಡೆಸಿ ಹಲ್ಲು ಮುರಿದ ವಿಚಿತ್ರ ಘಟನೆಯೊಂದು ಕಾಸರಗೋಡು ಜಿಲ್ಲೆಯ ಮಾಲೋಮ್ ಪಟ್ಟಣದಲ್ಲಿ ನಡೆದಿದೆ. ತಮ್ಮ ಮಾಜಿ ಸಹಪಾಠಿಯನ್ನು ಥಳಿಸಿದ ಇಬ್ಬರು ವ್ಯಕ್ತಿಗಳನ್ನು ಮಾಲೋತು ಬಾಲಕೃಷ್ಣನ್ ಮತ್ತು ಮ್ಯಾಥ್ಯೂ ವಲಿಯಪ್ಲಕ್ಕಲ್ ಎಂದು ಗುರುತಿಸಲಾಗಿದ್ದು, ಹಲ್ಲೆಗೆ ಒಳಗಾದ ವ್ಯಕ್ತಿಯನ್ನು ವಿಜೆ ಬಾಬು ಎಂದು ಗುರುತಿಸಲಾಗಿದೆ. ಹಲ್ಲೆಗೊಳಗಾದ ಬಾಬು ತನ್ನ ಎರಡು ಹಲ್ಲುಗಳನ್ನು ಕಳೆದುಕೊಂಡು ಕಣ್ಣೂರಿನ ಪರಿಯಾರಂನಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎನ್ನಲಾಗಿದೆ.


ಉದಯವಾಹಿನಿ ಚಿತ್ರ

ಘಟನೆ ಕುರಿತು ಮಾಹಿತಿ ನೀಡಿದ ವೆಳ್ರಿಕುಂಡು ಇನ್ಸ್‌ಪೆಕ್ಟರ್ ಟಿ ಕೆ ಮುಕುಂದನ್, 62 ವರ್ಷದ ಬಾಬು ಎಂಬ ವ್ಯಕ್ತಿಯೊಬ್ಬನನ್ನು ಅವರ ಇಬ್ಬರು ಮಾಜಿ ಸಹಪಾಠಿಗಳು ಐದು ದಶಕಗಳ ಹಿಂದೆ 4 ನೇ ತರಗತಿಯಲ್ಲಿ ಒಟ್ಟಿಗೆ ಇದ್ದಾಗ ಅವರ ನಡುವೆ ನಡೆದ ವಿವಾದವೊಂದಕ್ಕೆ ಸಂಬಂಧಿಸಿ ಕಲ್ಲಿನಿಂದ ಮುಖಕ್ಕೆ ಹೊಡೆದು ಗಾಯಗೊಳಿಸಿದ್ದಾರೆ ಅಲ್ಲದೆ ಹೊಡೆದ ಪೆಟ್ಟಿಗೆ ಬಾಬು ಅವರ ಎರಡು ಹಲ್ಲುಗಳು ಮುರಿದು ಹೋಗಿದೆ.

ಈ ಕುರಿತು ಬಾಬು ಅವರು ನೀಡಿರುವ ದೂರಿನ ಆಧಾರದ ಮೇಲೆ ಬಾಲಕೃಷ್ಣನ್ ಮತ್ತು ಮ್ಯಾಥ್ಯೂ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ನ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

## ಯಾವುದೇ ಜ್ವರವಿದ್ದರೂ ಪರೀಕ್ಷೆ ಮಾಡಿಸಿಕೊಳ್ಳಿ: ಆರೋಗ್ಯಾಧಿಕಾರಿ

• ಉದಯವಾಹಿನಿ ಬೇಲೂರು

ಜನರಲ್ಲಿ ಯಾವುದೇ ರೀತಿಯ ಜ್ವರವಿರಲಿ, ಕಡ್ಡಾಯವಾಗಿ ರಕ್ತ ಪರೀಕ್ಷೆ ಮಾಡಿಸಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವಿಜಯ್ ಹೇಳಿದರು.

ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಡೆಂಘಿ, ಚಿಕೂನ್ ಗುನ್ಯ, ಮಲೇರಿಯಾ ತಡೆಗಟ್ಟುವ ಕುರಿತಾದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಡೆಂಘಿ ಜ್ವರ ಮಾರಣಾಂತಿಕವಾಗಿದ್ದು, ಮಳೆಗಾಲ ಪ್ರಾರಂಭ ಆಗಿರುವುದರಿಂದ ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡಬೇಕು. ಈಡೀಸ್ ಸೊಳ್ಳೆ ಕಚ್ಚುವುದರಿಂದ ಜ್ವರ ಬರುತ್ತದೆ. ಇದು ಸ್ವಚ್ಛ ನೀರಿನಲ್ಲಿ ಸಂತಾನ ಅಭಿವೃದ್ಧಿ ಮಾಡುತ್ತಿದ್ದು, ಹಗಲು ಹೊತ್ತಿನಲ್ಲಿ ಕಚ್ಚುತ್ತದೆ. ಸಾರ್ವಜನಿಕರು ಮನೆಯ ಒಳಾಂಗಣದಲ್ಲಿ ತೊಟ್ಟಿ, ಡ್ರಮ್ಮು, ಬ್ಯಾರೆಲ್‌ಗಳಲ್ಲಿ ನೀರು ಶೇಖರಿಸಿ, ಸರಿಯಾಗಿ ಮುಚ್ಚಿಡಬೇಕು. ವಾರಕ್ಕೊಮ್ಮೆ ಸ್ವಚ್ಛಗೊಳಿಸಿ ನಂತರ ನೀರು ತುಂಬಿಸಿ ಮುಚ್ಚಿಡಬೇಕು ಎಂದರು.

ಮನೆಯ ಹೊರಾಂಗಣದಲ್ಲಿ ತೆಂಗಿನ ಚಿಪ್ಪು, ಎಳೆನೀರು ಚಿಪ್ಪು, ಟಯರ್, ಒಡೆದ ಬಾಟಲಿಗಳು, ಪ್ಲಾಸ್ಟಿಕ್ ಲೋಟಗಳು ಇನ್ನಿತರ ಪರಿಕರಗಳಲ್ಲಿ ನೀರು ಸಂಗ್ರಹ ಆಗದಂತೆ ನೋಡಿಕೊಳ್ಳಬೇಕು. ಘನತ್ಯಾಜ್ಯಗಳನ್ನು ಸರಿಯಾಗಿ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು. ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಉಷಾ ಮಾತನಾಡಿ, ಡೆಂಘಿ ಜ್ವರದ ಲಕ್ಷಣಗಳಾದ ತೀವ್ರ ಜ್ವರ, ತಲೆನೋವು, ಮೈಕೈ ನೋವು, ಮಾಂಸ ಖಂಡಗಳಲ್ಲಿ ನೋವಿನಿಂದ ಲಕ್ಷಣಗಳು ಕಂಡು ಬಂದರೆ ತಕ್ಷಣ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದರು.

● ಸನಾತನ ಧರ್ಮ ಪುರಾತನ ಧರ್ಮವಾಗಿದೆ,ರಾಮ ಕೃಷ್ಣರಿಗಿಂತಲೂ ಪೂರ್ವದ್ದಾಗಿದೆ, ಇದರ ಆದಿ ಅಂತ್ಯ ಅರಿಯಲಸಾಧ

# ಸತ್ಯವೇ ಸನಾತನ ಧರ್ಮದ ಸಾರಸರ್ವಸ್ವ: ಪುಷ್ಪೇಂದ್ರ ಕುಲಶ್ರೇಷ್ಠ

• ಉದಯವಾಹಿನಿ ಬೀದರ

ಸನಾತನ ಧರ್ಮ ಪುರಾತನ ಧರ್ಮವಾಗಿದೆ.ರಾಮ ಕೃಷ್ಣರಿಗಿಂತಲೂ ಪೂರ್ವದ್ದಾಗಿದೆ. ಹಾಗಾಗಿ ಇದರ ಆದಿ ಅಂತ್ಯ ಅರಿಯಲಸಾಧ್ಯ. ಇದು ಸತ್ಯದ ಮೈಲೆ ನೆಲೆನಿಂತಿದೆ. ದುಷ್ಟ ಶಿಕ್ಷಣ ಶಿಷ್ಟ ರಕ್ಷಣ ಇದರ ಧ್ಯಯವಾಗಿದೆ. ಸತ್ಯವೇ ಇದರ ಸಾರಸ್ವವಾಗಿದೆ. ಹಾಗಾಗಿ ಸನಾತನ ಧರ್ಮದವರು ಸತ್ಯದ ಪರವಾಗಿ ಮತ್ತು ಅಸತ್ಯದ ವಿರುದ್ಧವಾಗಿ ರಬೇಕೆಂದು ನವದೇಹಲಿಯ ಖ್ಯಾತ ಸನಾತನ ರಾಷ್ಟ್ರೀಯವಾದಿ ವಾಗ್ಮಿಗಳಾದ ಪುಷ್ಪೇಂದ್ರ ಕುಲಶ್ರೇಷ್ಠರು ಹೇಳಿದರು.ಅವರು

> **ಸನಾತನ ಧರ್ಮದ ತತ್ವಗಳನ್ನು ಮಂದಿರಗಳನ್ನು ಪರಕೀಯ ಮತದ ಆರಾಧಾನಾಲಯಗಳಿಗೆ ತತ್ವಗಳಿಗೆ ಹೋಲಿಸಿ ಕೆಲವು ಬುದ್ಧಿಜೀವಿಗಳು ಹೇಳುತ್ತಿದ್ದಾರೆ.ಸನಾತನ ಮಂದಿರಗಳು ಗಂಗಾಜಲದಿಂದ ಭೂಮಿ ಪೂಜೆ ಮಾಡಿ ಕಲ್ಲಿನ ಮೂರ್ತಿಗೆ ಮಂತ್ರೋಚ್ಛಾರಣೆಯಿಂದ ಪ್ರಾಣ ಪ್ರತಿಷ್ಠಾನ ಮಾಡಿ ಪ್ರತಿಷ್ಠಾಪಿಸಲಾಗುತ್ತದೆ. ಆದರೆ ಪರಕೀಯ ಆರಾಧಾನಾಲಯಗಳಲ್ಲಿ ಇವಾವುವು ನಡೆಯುವುದಿಲ್ಲ. ಸನಾತನ ಧರ್ಮ ಅಹಿಂಸೆ ಮತ್ತು ಸಮಸ್ತ ಮಾನವ ಕಲ್ಯಾಣ ಬಯಸುತ್ತದೆ -ಪುಷ್ಪೇಂದ್ರ ಕುಲಶ್ರೇಷ್ಠರು**


ಉದಯವಾಹಿನಿ ಚಿತ್ರ

ನಗರದ ಸ್ವಾಮಿ ಸಮರ್ಥ ಕಲ್ಯಾಣ ಮಂಟಪದಲ್ಲಿ ತುಲಸಿಮಾನಸ ಸೇವಾ ಪ್ರತಿಷ್ಠಾನ ಮತ್ತು ರಾಧಾಕೃಷ್ಣ ಸತ್ಸಂಗ ಸಮೀತಿರವರು ಆಯೋಜಿಸಿದ ಸನಾತನ ಸಂಸ್ಕೃತಿ ಉತ್ಸವದಲ್ಲಿ ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿದರು.

ಮುಂದುವರೆದು, ಸನಾತನ ಧರ್ಮ ಆತ್ಮಕಲ್ಯಾಣ ಲೋಕ ಕಲ್ಯಾಣ ಬಯಸುತ್ತದೆ. ಜ್ಞಾನ ಸೇವೆ ವೈರಾಗ್ಯ ಪ್ರಕೃತಿ ನಿಯಮ ಪಾಲಿಸುತ್ತದೆ.ಸನಾತನಿಯಾದವನು ಧರ್ಮದ ಪರವಾಗಿರುವಂತೆ ನೋಡಿಕೊಳ್ಳುತ್ತದೆ. ಕಟು ಸತ್ಯವೆಂದರೆ, ಭಾರತದ ಶ್ರೀಮಂತ ಸಾಂಸ್ಕೃತಿಕ ಮತ್ತು ಭೌತಿಕ ಸಂಪತ್ತಿನ ಮೇಲೆ ಪ್ರಭುತ್ವ ಸಾಧಿಸಲು ಒಳಹೊರಗಿನ ದುಷ್ಟ ಶಕ್ತಿಗಳು ಪ್ರಯತ್ನಿಸುತ್ತಯಲೇ ಬಂದಿವೆ. ಸನಾತನ ಧರ್ಮ ತ್ಯಾಗ ರೋಪಕಾರತೆಗೆ ಪರಾಕ್ರಮತೆಗೆ ಹೆಸರಾಗಿದೆ.

ದುಷ್ಟ ಶಕ್ತಿಗಳ ಷಡ್ಯಂತ್ರಗಳನ್ನು ಸುಳ್ಳು ಸೃಷ್ಟಿಗಳನ್ನು ಇಲ್ಲಿನವರು ಅರಿಯದೇ ಹೋದ್ದರಿಂದ ಬಾರತೀಯರು ಬಾರತೀಯರು ಇಲ್ಲಿವರೆಗೆ ಬಹಳಷ್ಟು ಭೌತಿಕ ಭೌಗೋಳಿಕ ಮತ್ತು ಮಾನವ ಸಂಪತ್ತನ ಇತಿಹಾಸದುದ್ದಕ್ಕೂ ಕಳೆದುಕೊಳ್ಳುತ್ತಾ ಬಂದಿದ್ದಾರೆ. ಈಗಲೂ ಕಳೆದುಕೊಳ್ಳುತ್ತಿದ್ದಾರೆ. ಇದರ ಅರಿವು ಮೂಡಿಸಲು ಕ್ರಿ,ಶ.2011ರಿಂದ ನಾನು ದೇಶಾದ್ಯಂತ ಜಾಗೃತಿ ಯಾತ್ರೆ ನಿಸ್ವಾರ್ಥತೆಯಿಂದ ಕೈಗೊಂಡಿದ್ದೇನೆ. ನಾನು ಯಾರದೇ ಅಡಿಯಾಳಾಗಿಲ್ಲ. ಕೈಗೊಂಬೆಯಾಗಿಲ್ಲ. ನಮ್ಮ ದೇಶ ನಮ್ಮ ಸನಾತನ ಧರ್ಮ ಬೆಳಗಿಸಿ ಬಲಿಷ್ಠಗೊಳಿಸಬೇಕೆಂಬ ಆಶೆ ನನ್ನದ್ದಾಗಿದೆ.ಸಾವಿಗೂ ನಾನು ಅಂಜುವುದಿಲ್ಲಾದ್ದರಿಂದ ನನಗೆ ಸತ್ಯ ಕಂಡದ್ದನ್ನು ನಿರ್ಭೀಡೆಯಿಂದ ಹೇಳುತ್ತೇನೆ ಎಂದರು.

**ಭಾರಿ ಬದಲಾವಣೆ**

**ಭಾರತ ದೇಶದಲ್ಲಿ ಇವತ್ತು ಭಾರಿ ಬದಲಾವಣೆ ಕಂಡುಬರುತ್ತದೆ. 250 ಕ್ಕೂ ಹೆಚ್ಚಿನ ಚಾನಲ್‌ಗಳು ಇವತ್ತಿನ ಸೈನಿಕ ಕಾರ್ಯಾಚರಣೆ ಬಿತ್ತರಿಸಿವೆ. ಹಿಂದಿನಬಾರತ ಮೊದಲು ಯುದ್ಧ ಮಾಡುವುದಿಲ್ಲ, ಎಂದಿತ್ತು. ಆದರೆ ಇಂದಿನ ಕೇಂದ್ರ ಸರಕಾರದ ನೀತಿ ಶತ್ರುವಿನ ಅಟ್ಟಹಾಸಕ್ಕೆ ಮೊದಲು ತಕ್ಕ ಶಾಸ್ತಿ ಎನ್ನುವುದು ಈಗ ಕಾರ್ಯಾಚರಣೆಯಲ್ಲಿದೆ.**

**ಹೆಮ್ಮೆಯ ವಿಷಯ**

**ಭಾರತೀಯರು ಯಮ್ಮ ತಪ್ಪುಗಳಿಂದಾಗಿ ಇತಿಹಾಸದಲ್ಲಿ ಬಹಳಷ್ಟು ಅನಾಹುತ ಎದುರಿಸಿದ್ದಾರೆ. ಅಂತಹ ತಪ್ಪುಗಳನ್ನು ಮತ್ತೇ ಮಾಡಿದರೆ ಅದು ಸ್ವಯಂಕೃತ ಅಪರಾಧವಾಗುತ್ತದೆ. ಕ್ರಿ.ಶ, 1947ರ ಸ್ವತಂತ್ರ ಪೂರ್ವ ಮತ್ತು ನಂತರ ದೇಶಪ್ರೇಮಿಗಳನ್ನು ಮೂಲೆಗುಂಪು ಮಾಡಲಾಯಿತು.ಅಂತಹವರಿಗೆ ಸಾಕಷ್ಟು ಕಿರುಕುಳ ನೀಡಲಾಯಿತು ಎಂದರು. ಇಂದಿನ ಕೇಂದ್ರ ಸರಕಾರ ಹಿಂದಿನ ಇಂದಿನ ದೇಶ ಪ್ರೇಮಿಗಳಿಗೆ ಸೂಕ್ತ ಗೌರವ ಸಲ್ಲಿಸುತ್ತಿದೆ ಇದು ಹೆಮ್ಮೆಯ ವಿಷಯವಾಗಿದೆ.**

ಹಿಂಸೆ ಮತ್ತು ಸ್ವಹಿತ ಬಯಸುವ ಪರಕೀಯ ಮತ ಹಾಗೂ ಸನಾತನ ಧರ್ಮ ಒಂದೇ ಆಗಿದೆ ಎಂದು ಹೇಳುವುದರಲ್ಲಿ ಸ್ವಾರ್ಥ ಮತ್ತು ಸುಳ್ಳು ಅಡಗಿದೆ. ಹಾಗಾಗಿ ಕಥಾವಾಚನಕ್ಕಾಗಿ ಕೋಟಿಗಟ್ಟಲೇ ದುಡ್ಡು ಪಡೆಯುವನಮ್ಮ ಕಥಾ ವಾಚಕರು ಯಾರ ಪರವಾಗಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಒರೆಗೆ ಹಚ್ಚಿ ನೋಡಬೇಕಾಗಿದೆ. ನಮ್ಮ ಸಂಸ್ಕೃತಿ ಸಂಸ್ಕಾರಗಳ ವಿರುಧ್ಧವಾಗಿದ್ದರೆ ತಿರಸ್ಕರಿಸಬೇಕಾಗಿಎ ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು.

**ವೃಷಭ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ಸಂಗಾತಿ ಕಾಳಜಿ ತೋರಿಸುತ್ತಾರೆ.

**ಮಿಥುನ** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು ಮತ್ತು ಹಣವನ್ನು ಉಳಿಸಬೇಕು.

**ಕರ್ಕಾಟಕ** ನಿಮ್ಮ ಜೊತಗಿರುವವರ ಜೊತೆ ವಾದವಿವಾದಕ್ಕೆ ತೊಡಗಬೇಡಿ. ಯಾವುದೇ ಭಿನ್ನಾಭಿಪ್ರಾಯದ ವಿಷಯಗಳಿದ್ದಲ್ಲಿ – ಸೌಹಾರ್ದತೆಯಿಂದ ಬಗೆಹರಿಸಿಕೊಳ್ಳಿ. ಮೊಂಬತ್ತಿ ಬೆಳಕಿನಲ್ಲಿ ಪ್ರೀತಿಪಾತ್ರರ ಜೊತೆ ಆಹಾರ ಹಂಚಿಕೊಳ್ಳುವುದು.

**ಸಿಂಹ** ಕೆಲವು ಅನಿವಾರ್ಯ ಸಂದರ್ಭಗಳು ನಿಮಗೆ ಅಹಿತಕರವೆನಿಸಬಹುದು. ಆದರೆ ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ ಪ್ರತಿಕ್ರಿಯಿಸಬಾರದು.

**ಕನ್ಯಾ** ನೀವು ವಿಶ್ರಾಂತಿ ಪಡೆಯಬೇಕು ಮತ್ತು ನಿಕಟ ಸ್ನೇಹಿತರು ಮತ್ತು ಕುಟುಂಬದ ಸದಸ್ಯರ ನಡುವೆ ಸಂತೋಷವಾಗಿರಲು ಪ್ರಯತ್ನಿಸಬೇಕು ನೀವು ಯಾರಾದರೂ ವಿಶೇಷವಾದವರ ಗಮನ ಸೆಳೆಯುತ್ತೀರಿ.

**ತುಲಾ** ನಿಮ್ಮ ಹೆತ್ತವರ ಆರೋಗ್ಯದ ಬಗೆಗೆ ಹೆಚ್ಚುವರಿ ಗಮನ ಮತ್ತು ಎಚ್ಚರಿಕೆ ಅಗತ್ಯವಿದೆ. ನಿಮ್ಮ ಗೆಳತಿ ನಿಮಗೆ ಮೋಸ ಮಾಡಬಹುದು. ನಿಮ್ಮ ಪ್ರೀತಿಯ ಸಂಬಂಧ ಮಾಂತ್ರಿಕ ತಿರುವು ಪಡೆಯುತ್ತಿದೆ.

**ವೃಶ್ಚಿಕ** ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ.

**ಧನಸ್ಸು** ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ ಮತ್ತು ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು.

**ಮಕರ** ಸ್ನೇಹಿತರೊಂದಿಗೆ ಸಂಜೆ ಆನಂದ ಹಾಗೂ ಕೆಲವು ರಜೆಯ ಯೋಜನೆಗಳಿಗೂ ಉತ್ತಮವಾಗಿರುತ್ತದೆ. ನೀವು ಕಾಳಜಿಯುಳ್ಳ ಮತ್ತು ತಿಳುವಳಿಕೆಯುಳ್ಳ ಸ್ನೇಹಿತರನ್ನು ಭೇಟಿ ಮಾಡುತ್ತೀರಿ.

**ಕುಂಭ** ತುಂಬಾ ಪ್ರಯಾಣ ನಿಮಗೆ ದಣಿವಾಗಿಸುತ್ತದೆ ನೀವು ವಿಧ್ಯಾರ್ಥಿಯಾಗಿದ್ದರೆ ಮತ್ತು ವಿದೇಶಕ್ಕೆ ಹೋಗಿ ಅಧ್ಯಯನ ಮಾಡಲು ಬಯಸುತ್ತಿದ್ದರೆ ಆರ್ಥಿಕ ಬಿಕ್ಕಟ್ಟು ಇಂದು ನಿಮ್ಮ ಹಣೆಯ ಮೇಲೆ ಸುಕ್ಕು ತರಬಹುದು.

**ಮೀನ** ಮಕ್ಕಳಲ್ಲಿ ನಿಮಗೆ ರೋಮಾಂಚಕ ಸುದ್ದಿ ತರಬಹುದು. ನಿಮ್ಮ ಪ್ರೀತಿಯ ಸಂಗಾತಿ ಇಂದು ಏನಾದರೂ ಸುಂದರವಾದದ್ದನ್ನು ಮಾಡಿ ನಿಮಗೆ ಆಶ್ಚರ್ಯವನ್ನುಂಟು ಮಾಡುತ್ತಾರೆ.

● ಅಬಕಾರಿ ಅಧಿಕಾರಿಗಳು ಇದನ್ನು ನಿಯಂತ್ರಣಕ್ಕೆ ತರಬೇಕು, ಮಾರಾಟಕ್ಕೆ ಕಡಿವಾಣ ಹಾಕಬೇಕು

# ಅಕ್ರಮ ಮದ್ಯ ಮಾರಾಟವನ್ನು ಕಟ್ಟುನಿಟ್ಟಾಗಿ ತಡೆಯಿರಿ: ಗಿರಿಜಾಶಂಕರ

• ಉದಯವಾಹಿನಿ ಸಂಡೂರು

ಗ್ರಾಮೀಣ ಭಾಗದ ರಸ್ತೆಯ ಬದಿಯ ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟದ ದೂರುಗಳಿವೆ, ಮದ್ಯಪಾನ ಮಡಿ ಲಾರಿ ಚಲಾಯಿಸುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ ಕೂಡಲೇ ಅಬಕಾರಿ ಅಧಿಕಾರಿಗಳು ಇದನ್ನು ನಿಯಂತ್ರಣಕ್ಕೆ ತರಬೇಕು, ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂದು ಎಚ್ಚರಿಕೆ ನೀಡಿದರು. ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ಹಲವಾರು ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆ ನಡೆಯಿತು. ಈ.ಪಂ. ಉಪಕಾರ್ಯದರ್ಶಿ ಗಿರಿಜಾ ಶಂಕರ್ ನೇತೃತ್ವ ವಹಿಸಿ ತಾ.ಪಂ. ದಿ.ಎಂ.ವೈ. ಫೋರ್ಪಡೆ ಸಭಾಂಗಣದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಮಾತನಡಿ ಚೋರನುರು ಪಿ.ಡಿ.ಓ ಕರಿಬಸಪ್ಪ ಮಾತನಡಿ ಗ್ರಾಮೀಣ ಭಾಗದಲ್ಲಿ ಜಲಜೀವನ ಮಿಷನ್ ಅಡಿ ಅಗೆದು ರಸ್ತೆಗಳನ್ನು ಸಮರ್ಪಕವಾಗಿ ಮುಚ್ಚದೇ ಇರುವುದರಿಂದ ಅಗಾಗ್ಗೆ ಬೈಕ್ ಸವಾರರು ಕೆಳಗೆ ಬಿದ್ದು ಗಾಯಗೊಳ್ಳುತ್ತಿದ್ದಾರೆ. ಗ್ರಾಮ ಪಂಚಾಯಿತಿ ಅರ್ಧಕ್ಕೆ ಕಾಮಗಾರಿಯನ್ನು ನಿಲ್ಲಿಸಿದ್ದಾರೆ ಎಂದು ದೂರಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯವರು ಕೂಡಲೇ ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರರಿಗೆ ಸೂಚನೆ ನೀಡಿ ರಸ್ತೆ ಮಧ್ಯದಲ್ಲಿ ತಗ್ಗುಗಳನ್ನು ಮುಚ್ಚಿಸಬೇಕು ಎಂದು ಒತ್ತಾಯಿಸಿದರು.

ಗ್ರಾಮೀನ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ. ಎ.ಇ.ಇ. ವಿನಾಯಕರವರು. ಜೆ.ಜೆ.ಎಂ. ಅಡಿ ಕಾಮಗಾರಿ ಮಡಿದಾಗ ಪೈಪ್ ಲೈನ್ ಸೋರಿಕೆಯಗುವುದನ್ನು ಅರಿತುಕೊಳ್ಳುವ ಸಲುವಾಗಿ ರಸ್ತೆಯಲ್ಲಿ ತೆಗೆದ ಗುಂಡಿ ಮುಚ್ಚುವಲ್ಲಿ ಕೊಂಚ ವಿಳಂಬವಾಗುತ್ತಿದೆ ಎಂದು ತಿಳಿಸಿದರು. ಪ್ಲೋರೈಡ್ ಅಂಶ ಹೆಚ್ಚಿರುವ ಭಾಗದಲ್ಲಿ ಜನರು ಶುದ್ದ ಕುಡಿಯುವ ನೀರಿನ ಘಟಕಗಳನ್ನು ನೀರನ್ನು ಬಳಕೆ ಮಾಡಲು ಸೂಚನೆ ನೀಡಲಾಗಿದೆ. ತಾಲ್ಲೂಕಿನಲ್ಲಿ 152 ಶುದ್ದ ಕುಡಿಯುವ ನೀರಿನ ಘಟಕಗಳು ಕೆಲಸ ನಿರ್ವಹಿಸುತ್ತವೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಇಲಾಖೆಗಳ ಪ್ರಗತಿ ಪರಿಶೀಲನೆ

> ಶಾಲೆಯ ಆವರಣದಲ್ಲಿ ಅಗತ್ಯ ಜಾಗವಿದ್ದಲ್ಲಿ ತೋಟಗಾರಿಕೆ ಇಲಾಖೆಯಿಂದ ಸಸಿಗಳನ್ನು ನೆಟ್ಟು ಸೌಂದರ್ಯಗೊಳಿಸಲಾಗುವುದು
> –ಹನುಮಪ್ಪನಾಯಕ ತೋಟಗಾರಿಕೆ ಇಲಖೆಯ ಎ.ಡಿ.

> ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡ ಇಲಾಖೆ, ಬಿ.ಸಿ.ಎಂ. ಇಲಾಖೆ, ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾಥಿ/ವಿದ್ಯಾರ್ಥಿನಿಯರ ವಸತಿ ನಿಲಯಗಳ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದ್ದು ವಿದ್ಯಾರ್ಥಿಗಳು ವಸತಿ ನಿಲಯಕ್ಕೆ ಆಗಮಿಸುವ ಮೊದಲೇ ನಿಲಯಗಳ ಕಟಕಿ ಬಾಗಿಲು ಸಮರ್ಪಕವಾಗಿ ಸ್ವಚ್ಚತೆ ಕಾಪಡಿಕೊಳ್ಳಿ, ಶಾಲೆಗಳಲ್ಲಿನ ಸ್ವಚ್ಚತೆ ಕಾಪಾಡಕೊಳ್ಳಿ, ಎಂದು ನಿಲಯಪಾಲಕರಿಗೆ, ಶಾಲೆಯ ಮುಖ್ಯಸ್ಥರಿಗೆ ತಿಳಿಸಿದರು.
> –ಮಡುಗಿನ ಬಸಪ್ಪನವರು, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ

> ಎಲ್ಲಾ ಶಾಲೆಗಳ ಶೌಚಾಲಯಗಳನ್ನು ಸ್ವಚ್ಚಪಡಿಸಲಾಗಿದೆ. ರಾಜಾಪುರದಲ್ಲಿ 2 ಎಕರೆ ಜಮೀನು ನೀಡಲು ಖಾಸಗಿ ವ್ಯಕ್ತಿಯೊಬ್ಬರು ಮುಂದೆ ಬಂದಿದ್ದಾರೆ. ಎಂದು ಸಭೆಯಲ್ಲಿ ಇಳಿಸಿದರು. ಪಶುಸಂಗೋಪನಾ ಇಲಾಖೆಯ ಎ.ಡಿ. ಭಾಷಾ ಅವರು ಮಾತನಡಿ ತಾಲ್ಲೂಕಿನಾದ್ಯಂತ ಕಾಲುಬಾಯಿ ಲಸಿಕೆ ಕಾರ್ಯಕ್ರಮ ಪೂರ್ಣಗೊಳಿಸಲಗಿದೆ – ಡಾ. ಐ.ಆರ್. ಅಕ್ಕಿ, ಕ್ಷೇತ್ರ ಶಿಕ್ಷಣಾಧಿಕಾರಿ

## ಸೂಕ್ತ ಚರಂಡಿ ವ್ಯವಸ್ಥೆ, ಬಾವಿಗೆ ತಡೆಗೋಡೆ, ಮಕ್ಕಳಿಗೆ ಶುದ್ಧ ನೀರು ಕಲ್ಪಿಸಲು ಆಗ್ರಹ

• ಉದಯವಾಹಿನಿ ವಡಗೇರಾ

ತಾಲ್ಲೂಕಿನ ಹಿರೇ ತುಮಕೂರು ಗ್ರಾಮದ ಹಲವು ಬಡಾವಣೆಗಳಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಗ್ರಾಮದ ಮಧ್ಯಭಾಗದಲ್ಲಿರುವ ಬಾವಿಯನ್ನು ಸ್ವಚ್ಛಗೊಳಿಸಿ ಸುತ್ತಲೂ ತಡೆಗೋಡೆ ನಿರ್ಮಿಸಿ ಶಾಲಾ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಒದಗಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ ಆಗ್ರಹಿಸಿದ್ದಾರೆ.

ರಸ್ತೆಯ ಮೇಲೆ ಸಂಪೂರ್ಣ ಚರಂಡಿ ನೀರು ಹರಿಯುತ್ತಿರುವುದರಿಂದ ಸಾರ್ವಜನಿಕರಿಗೂ ಮಕ್ಕಳು ವೃದ್ಧರು ಓಡಾಡಲು ತುಂಬಾ ತೊಂದರೆಯಾಗಿದೆ ರಸ್ತೆ ತುಂಬಾ ಹೊಲಸು ನೀರು ನದಿಯಂತೆ ಹರಿಯುತ್ತಿದೆ, ಅದರಲ್ಲಿಯೇ ಸಾರ್ವಜನಿಕರು ಓಡಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ ಹೊಲಸು ನೀರಿನಿಂದ ಸೊಳ್ಳೆಗಳು ಉತ್ಪತ್ತಿ ಹಾಗೂ ಸಾರ್ವಜನಿಕರಿಗೆ ಹಲವು ರೋಗ ರುಜಿನೆಗಳು ಹರಡುತ್ತಿವೆ ಗ್ರಾಮದ ಮಧ್ಯಭಾಗದಲ್ಲಿರುವ ತೆರೆದ ಬಾವಿಯು ಜೀವ ಬಲಿಗಾಗಿ ಬಾಯಿ ತೆರೆದು ಕುಳಿತಿದೆ ಮತ್ತು ಬಾವಿಯ ಹೊಲಸು ನೀರಿನ ದುರ್ನಾಥವು ಅಲ್ಲಿ ವಾಸಿಸುವವರಿಗೆ ತುಂಬಾ ತೊಂದರೆಯಾಗುತ್ತಿದೆ ಮತ್ತು ಸರಕಾರಿ ಶಾಲೆಯಲ್ಲಿ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯು ಇಲ್ಲ ನೀರಿನ ತೊಟ್ಟಿಯನ್ನು ಸ್ವಚ್ಛಗೊಳಿಸದೆ ಇರುವುದರಿಂದ ಮಕ್ಕಳು ಅವೇ ಕಲುಷಿತ ನೀರು ಕುಡಿಯುವಂತಾಗಿದೆ ದಲಿತರ ಓಣಿಗೆ ಸರಬರಾಜು ಆಗುವ ನೀರಿನ ಪೈಪು ಸೋರುತ್ತಿದ್ದು ಅದರಲ್ಲಿಯೇ ಚರಂಡಿ ನೀರು ಮಿಶ್ರಣವಾಗಿ ಸರಬರಾಜು ಆಗುತ್ತಿವೆ ಆದರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಾತ್ರ ಇದಕ್ಕೂ ನಮಗೂ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದಾರೆ ಇದು ನಾಚಿಕೆಗೇಡಿನ ಸಂಗತಿಯಾಗಿದೆ.

ಕೂಡಲೇ ಗ್ರಾಮದಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸಿ ಮೂಲ ಬೂತ ಸೌಕರ್ಯಕ್ಕೆ ಆದ್ಯತೆ ನೀಡಬೇಕು ಸೋರುತ್ತಿರುವ ಪೈಪು ದುರಸ್ತಿಗೊಳಿಸಿ ಮಕ್ಕಳಿಗೆ ಶುದ್ಧ ಕುಡಿವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಒಂದು ವೇಳೆ ನಿರ್ಲಕ್ಷ ವಹಿಸಿದ್ದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕದ ವತಿಯಿಂದ ಪಂಚಾಯಿತಿ ಮುಂದೆ ಉಗ್ರ ಹೋರಾಟ ಮಾಡುವುದಾಗಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ ಎಚ್ಚರಿಸಿದ್ದಾರೆ.



ಅಬ್ದುಲ್ ಚಿಗಾನೂರ ಆಗ್ರಹ

## ಗ್ರಾಮ ಪಂಚಾಯಿತಿ ನೂತನ ಕಟ್ಟಡಕ್ಕೆ ಭೂಮಿಪೂಜೆ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕಿನ ಜಾನುಕೊಂಡ ಗ್ರಾಮ ಪಂಚಾಯಿತಿ ನೂತನ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಲಾಯಿತು. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಮತ್ತು ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ, ಎಂಜಿಎನ್‌ಆರಿಜಿಎ ಯೋಜನೆ, 15ನೇ ಹಣಕಾಸು ಯೋಜನೆ ಹಾಗೂ ಗ್ರಾಮ ಪಂಚಾಯಿತಿ ಇನ್ನಿತರೆ ಯೋಜನೆಗಳ ಅನುದಾನದಲ್ಲಿ ಜಾನುಕೊಂಡ ಗ್ರಾಮ ಪಂಚಾಯತ್ ನೂತನ ಕಟ್ಟಡಕ್ಕೆ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅವರು ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮಗಳ ಅಭಿವೃದ್ಧಿ ನನ್ನ ಮೊದಲ ಆದ್ಯತೆಯಾಗಿದ್ದು, ಅದಕ್ಕಾಗಿ ನಾವೆಲ್ಲರೂ ಸೇರಿ ಅಭಿವೃದ್ಧಿ ಕಡೆ ಸಾಗೋಣ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಲೋಕಸಭಾ ಸದಸ್ಯ ಗೋವಿಂದ ಎಂ.ಕಾರಜೋಳ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್.ಶಿವಣ್ಣ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಜುಳಾ ಸ್ವಾಮಿ, ತಹಶೀಲ್ದಾರ್ ಗೋವಿಂದ ರಾಜು, ತಾ.ಪಂ ಇಒ ರವಿಕುಮಾರ್ ಸೇರಿದಂತೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು, ಸದಸ್ಯರು ಹಾಗೂ ಕೆಡಿಪಿ ಸದಸ್ಯರು, ಕೆ.ಮಂಜುನಾಥ್, ಕಾರ್ಯದರ್ಶಿ ಎನ್.ನಾಗೇಶ್ ಇದ್ದರು.

## ಕಾರು ಹುಣ್ಣಿಮೆ ಹಬ್ಬ ಎತ್ತುಗಳ ಭವ್ಯ ಮೆರವಣಿಗೆ

• ಉದಯವಾಹಿನಿ ಕೆಂಭಾವಿ

ರೈತರ ಮುಂಗಾರಿನ ಪ್ರಮುಖ ಹಬ್ಬವಾದ ಕಾರು ಹುಣ್ಣಿಮೆ ಹಬ್ಬದ ನಿಮಿತ್ಯ ಮಾಲಗತ್ತಿ ಗ್ರಾಮದಲ್ಲಿ ಎತ್ತುಗಳ ಭವ್ಯ ಮೆರವಣಿಗೆಯು ಅತ್ಯಂತ ಸಂಭ್ರಮ ಸಡಗರದಿಂದ ಜರುಗಿತು. ಈ ಮೊದಲು ರೈತರು ತಮ್ಮ ಎತ್ತುಗಳಿಗೆ ಸ್ನಾನ ಮಾಡಿಸಿ ಬಣ್ಣ ಹಚ್ಚಿ ಹಾಗೂ ವಿವಿದ ರಿಬ್ಬನ್ ಗಳು ಗೆಜ್ಜೆ ಗಂಟೆ ಅಲಂಕಾರಿಕ ವಸ್ತುಗಳಿಂದ ಸಿಂಗರಿಸಿ ಎತ್ತುಗಳನ್ನು ಪೂಜಿಸಿ ನೈವೇದ್ಯ ತಿನ್ನಿಸಿ ಮನೆಯಲ್ಲಿನ ಎಲ್ಲರೂ ಅವುಗಳಿಗೆ ನಮಸ್ಕರಿಸುವವರು ತದನಂತರ ಡಿಜೆ ಭಾಜ ಭಜಂತ್ರಿಗಳೊಂದಿಗೆ ಡಿಜೆ ನಾದಕ್ಕೆ ಯುವಕರು ಕುಣಿಯುವ ಮೂಲಕ ಎತ್ತುಗಳನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಈ ಸಂದರ್ಭದಲ್ಲಿ ಎಚ್. ಎಮ್. ಪಟೇಲ್, ಚಿದಾನಂದ ಹೊಸಮನಿ, ಮಲ್ಲಣ್ಣ ಸಾಹುಕಾರ, ಭೀಮರಾಯ ಕಂಬಾರ್, ಪರಶುರಾಮ್ ಗೊಡ್ಡರ, ರೈತರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜಿಲ್ಲಾ ಪ್ರವಾಸ

• ಉದಯವಾಹಿನಿ ಯಾದಗಿರಿ

ಕರ್ನಾಟಕ ಸರ್ಕಾರ ಮುಖ್ಯಮಂತ್ರಿಗಳು ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ಜೂ. 14 ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ ಪ್ರವಾಸವು ಕೆಳಗಿನಂತಿದೆ ಎಂದು ಸರ್ಕಾರದ ವಿಶೇಷ ಕಾರ್ಯದರ್ಶಿ ಕೆ.ಚಿರಂಜೀವಿ ಅವರು ತಿಳಿಸಿದ್ದಾರೆ.

2025ರ ಜೂನ್ 14ರ ಶನಿವಾರ ರಂದು ಬೆಳಿಗ್ಗೆ 11.55 ಗಂಟೆಗೆ ಹೆಲಿಕ್ಯಾಪ್ಟರ್ ಮೂಲಕ ಯಾದಗಿರಿ ಜಿಲ್ಲಾ ಕ್ರೀಡಾಂಗಣಕ್ಕೆ ಆಗಮಿಸಿ, ಯಾದಗಿರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಬೆಂಗಳೂರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಗೂ ಕಲಬುರಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಆಯೋಜಿಸಿರುವ, ಕರ್ನಾಟಕ ಸರ್ಕಾರದ ವತಿಯಿಂದ 440.68 ಕೋಟಿ. ರೂ.ಗಳ ವೆಚ್ಚದಲ್ಲಿ ''ಆರೋಗ್ಯ ಆವಿಷ್ಕಾರ'' ಯೋಜನೆಯಡಿ ಕಲ್ಯಾಣ ಕರ್ನಾಟಕ ವಿಭಾಗದ ಆರೋಗ್ಯ ಇಲಾಖೆಯ ವಿವಿಧ ಕಾಮಗಾರಿಗಳಿಗೆ ಅಡಿಗಲ್ಲು ಕಾರ್ಯಕ್ರಮ, ಯಾದಗಿರಿ ಜಿಲ್ಲಾ ಬಂಜಾರಾ ಭವನದ ಉದ್ಘಾಟಿಸುವರು. ನಂತರ ಕಲ್ಬುರ್ಗಿಗೆ ಪ್ರಯಾಣ ಬೆಳೆಸುವರು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ವಿಶ್ವಬಾಲ ಕಾರ್ಮಿಕ ವಿರೋಧಿ ದಿನಾಚರಣೆ

• ಉದಯವಾಹಿನಿ ಚಿತ್ತಾಪುರ

ಪಟ್ಟಣದ ಸರ್ಕಾರಿ ಪ್ರೌಢ ಶಾಲೆ ಆವರಣದಲ್ಲಿ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾ ಆಚರಣೆ ಮಾಡಲಾಯಿತು. ಇದೇ ವೇಳೆ ಕನ್ನಡ ಪಂಡಿತ ಅಯ್ಯಾಳಿಯವರು ಪ್ರತಿಜ್ಞಾವಿಧಿಯನ್ನು ವಿಧಿಸಿದರು. ಶಾಲೆಯ ಎಲ್ಲಾ ಶಿಕ್ಷಕರು ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರು ಕಾಶಿರಾಯ ಕಲಾಲ್, ಶಿಕ್ಷಕರಾದ ಡಾ. ರಾಜಕುಮಾರ್, ರಮೇಶ ಸಾಲೋಟಗಿ, ಕಲೀಮ್ ಅಭಿದ್ ಎಂ ಎ, ರವಿ ಬಿಕೆ, ರಾಜಶೇಖರ್ ನಾಲ್ವಾರ್, ಫರ್ಜಾನ ಬೇಗಂ, ಸಬಿಹಾ ಯಾಸ್ಮಿನ್, ವಿಜಯಲಕ್ಷ್ಮೀ, ಶಿಕ್ಷಕಿ ಸನಾ ಸುಭಾನಾ ಇದ್ದರು.

## ಬಸ್ ಪಲ್ಟಿ: 8 ವಿದ್ಯಾರ್ಥಿಗಳಿಗೆ ಗಾಯ

• ಉದಯವಾಹಿನಿ ಯಲ್ಲಾಪುರ

ಶಿರಸಿ–ಯಲ್ಲಾಪುರ ರಾಜ್ಯ ಹೆದ್ದಾರಿಯ ಬೇಡ್ತಿ ತಿರುವಿನಲ್ಲಿ ಗುರುವಾರ ಕಾಲೇಜು ವಿದ್ಯಾರ್ಥಿಗಳನ್ನು ಕರೆತರುತ್ತಿದ್ದ ಬಸ್ಸು ಪಲ್ಟಿಯಾಗಿದೆ. ಪರಿಣಾಮ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಒಟ್ಟು 8 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಶಿವಮೊಗ್ಗದ ಭೂಮಿಕಾ, ಶಿಕಾರಿಪುರ, ಹೊಸನಗರ ಹಾಗೂ ಸೊರಬದ ಸುತ್ತಮುತ್ತಲ ಭಾಗದ ಸುರಭಿ, ಸಿಂಚನಾ, ಅನಂತ, ಆಂಜನೇಯ, ಚಂದನ, ಚಂದ್ರಶೇಖರ, ಪ್ರಶಾಂತ ಗಾಯಗೊಂಡ ವಿದ್ಯಾರ್ಥಿಗಳು.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿಗಳು ಉತ್ತರ ಕನ್ನಡ ಪ್ರವಾಸಕ್ಕೆ ಬಂದಿದ್ದರು. ಜೂನ್ 12ರ ನಸುಕಿನ 4 ಗಂಟೆಗೆ ಅವರು ಶಿರಸಿ–ಯಲ್ಲಾಪುರ ಮಾರ್ಗದಲ್ಲಿ ಸಂಚರಿಸುತ್ತಿದ್ದರು.

## ಸಂಚಾರ ನಿಷೇಧ ಹೇರಿ ಹಾಕಲಾದ ಕಬ್ಬಿಣದ ತಡೆ ಮುರಿದ ಪ್ರಕರಣ: ಕೇಸ್ ದಾಖಲು

• ಉದಯವಾಹಿನಿ ಬಂಟ್ವಾಳ

ಪಾಣೆಮಂಗಳೂರು ಸೇತುವೆ ಮೇಲೆ ಸಂಚಾರ ನಿಷೇಧ ಹೇರಿ ಹಾಕಲಾದ ಕಬ್ಬಿಣದ ತಡೆಯನ್ನು ಮುರಿದು ಸರಕಾರಕ್ಕೆ ಸಾವಿರಾರು ರೂ ನಷ್ಟ ಉಂಟು ಮಾಡಿದ ವಾಹನ ಚಾಲಕನ ಮೇಲೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಬಂಟ್ವಾಳ ಪುರಸಭೆ ಮುಖ್ಯಾಧಿಕಾರಿ ನಝೀರ್ ಅಹಮದ್ ನೀಡಿದ ದೂರಿನಂತೆ ಬಂಟ್ವಾಳ ನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿದೆ.

ಬಂಟ್ವಾಳ ತಾಲ್ಲೂಕು ಬಿ ಮೂಡಾ ಗ್ರಾಮದ ಹಳೇ ರಾಷ್ಟ್ರೀಯ ಹೆದ್ದಾರಿ ಎನ್. ಹೆಚ್. 48 ರ ಸೇತುವೆಯನ್ನು 2004–05 ರಲ್ಲಿ ರಾಷ್ಟ್ರೀಯ ಹೆದ್ದಾರಿ ಇಲಾಖೆಯವರು ನಿರ್ವಹಣೆ ಮತ್ತು ದುರಸ್ಥಿ ಬಗ್ಗೆ ಪುರಸಭೆಗೆ ಹಸ್ತಾಂತರಿಸಿರುತ್ತಾರೆ. ಇದು ಸ್ವಾತಂತ್ರ್ಯ ಪೂರ್ವ ಕಾಲದ ಸೇತುವೆಯಾಗಿದ್ದು, ಈ ಹಳೆಯ ಸೇತುವೆಯಲ್ಲಿ ಪ್ರಸ್ತುತ ಸರಕಾರ ಘನ ವಾಹನ ಸಂಚಾರವನ್ನು ನಿರ್ಬಂಧಿಸಿ ರಸ್ತೆಯ 2 ಬದಿಗಳಲ್ಲಿ ಕಬ್ಬಿಣದ ತಡೆಗಳನ್ನು ಹಾಕಿ ಘನ ವಾಹನಗಳ ಸಂಚಾರವನ್ನು ನಿಷೇಧಿಸಿದ್ದು, ಈ ರಸ್ತೆಯಲ್ಲಿ ಸಾವರ್ಜನಿಕ ಲಘು ವಾಹನಗಳು ಮಾತ್ರ ಸಂಚರಿಸುತ್ತಿರುವುದಾಗಿದೆ.


ಉದಯವಾಹಿನಿ ಚಿತ್ರ

## 46.54 ಲಕ್ಷ ರೂ. ಮೊತ್ತದ 225 ಮೊಬೈಲ್ ಪತ್ತೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕಲಬುರಗಿ

ಕಲಬುರಗಿ ನಗರ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಸಿಇಐಆರ್ ಪೋರ್ಟಲ್ ಮೂಲಕ 46,54,000 ರೂ.ಮೌಲ್ಯದ 225 ಮೊಬೈಲ್‌ಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.

ನಗರದ ಕಮೀಷನರ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ತಮ್ಮ ಮೊಬೈಲ್ ಫೋನ್‌ಗಳನ್ನು ಕಳೆದುಕೊಂಡ ಬಗ್ಗೆ ನಗರ ಪೊಲೀಸ್ ಆಯುಕ್ತಾಲಯ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಲ್ಲಿ ಇ–ಲಾಸ್ಟ್ ಮತ್ತು ಸಿಇಐಆರ್ ಪೋರ್ಟಲ್‌ನಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ, ಕಲಬುರಗಿ ನಗರ ಹಾಗೂ ನಗರದ ಎಲ್ಲಾ ಸಹಾಯಕ ಪೊಲೀಸ್ ಆಯುಕ್ತರ ಮಾರ್ಗದರ್ಶನದಲ್ಲಿ ನಗರ ವ್ಯಾಪ್ತಿಯ ಎಲ್ಲಾ ಪೊಲೀಸ್ ಠಾಣೆಗಳ ಪೊಲೀಸ್ ಇನ್ಸಪೆಕ್ಟರ್‌ಗಳ ಮುಂದಾಳತ್ವದಲ್ಲಿ ಎಲ್ಲಾ ಪೊಲೀಸ್ ಠಾಣೆಗಳಲ್ಲಿನ ಸಿಇಐಆರ್ ಪೋರ್ಟಲ್ ಕರ್ತವ್ಯ ನಿರ್ವಹಿಸುವ ತಾಂತ್ರಿಕ ಸಿಬ್ಬಂದಿಗಳ ಸಹಾಯದಿಂದ 1.3.2023 ರಿಂದ ಇಲ್ಲಿಯವರೆಗೆ ಒಟ್ಟು 1423 ಮೊಬೈಲ್ ಫೋನ್‌ಗಳನ್ನು ಪತ್ತೆ ಹಚ್ಚಿ ವಾರಸುದಾರರಿಗೆ ಹಿಂದಿರುಗಿಸಲಾಗಿದೆ ಎಂದು ತಿಳಿಸಿದರು. ಪ್ರಸ್ತುತ 46.54 ಲಕ್ಷ ರೂ.ಮೌಲ್ಯದ 225 ಮೊಬೈಲ್‌ಗಳನ್ನು ಪತ್ತೆ ಹಚ್ಚಲಾಗಿದ್ದು, 1648 ಮೊಬೈಲ್‌ಗಳನ್ನು ವಾರಸುದಾರರಿಗೆ ಹಿಂದಿರುಗಿಸಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ತಮ್ಮ ಮೊಬೈಲ್ ಫೋನ್‌ಗಳನ್ನು ಕಳೆದುಕೊಂಡಲ್ಲಿ ಅಥವಾ ಕಳ್ಳತನವಾದಲ್ಲಿ ಇ–ಲಾಸ್ಟ್ ಮತ್ತು ಸಿಇಐಆರ್ ಪೋರ್ಟಲ್‌ನಲ್ಲಿ ತಮ್ಮ ದೂರುಗಳನ್ನು ದಾಖಲಿಸಬೇಕು ಎಂದು ಅವರು ತಿಳಸಿದರು.

## 3 ವರ್ಷದಲ್ಲಿ 89 ಬಾಲ ಕಾರ್ಮಿಕರ ರಕ್ಷಣೆ

• ಉದಯವಾಹಿನಿ ಬಳ್ಳಾರಿ

ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ದುಡಿಸಿಕೊಳ್ಳುತ್ತಿದ್ದ 18 ವರ್ಷದೊಳಗಿನ 89 ಬಾಲಕಾರ್ಮಿಕ ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಜಿಲ್ಲೆಯ ಬಾಲಕಾರ್ಮಿಕ ಯೋಜನಾ ನಿರ್ದೇಶಕ ಮೌನೇಶ್ ಹೇಳಿದ್ದಾರೆ.

ಬಾಲ ಕಾರ್ಮಿಕದಿನಾಚರಣೆ ಅಂಗವಾಗಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಸಾಕಷ್ಟು ಉದ್ದಿಮೆಗಳಿವೆ, ಅಲ್ಲದೆ ನಗರ ಪ್ರದೇಶದ ಉದ್ಯಮ ಮತ್ತು ಹೊಟೇಲ್‌ಗಳಲ್ಲಿ ಬಾಲಕಾರ್ಮಿಕ ಮಕ್ಕಳನ್ನು ದುಡಿಸಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಇದಕ್ಕೆ ಕಾರಣ ಜಿಲ್ಲೆಯಲ್ಲಿ ಶಾಲೆಯನ್ನು ಮಧ್ಯದಲ್ಲಿಯೇ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಿರುವುದು ಕಾರಣ ಆಗಿದೆ.

ಪ್ರತಿ ತಿಂಗಳು ನಮ್ಮ ಕಾರ್ಯತಂಡ (ಟಾಸ್ಕ್ ಫೋರ್ಸ್) ಆಯಾ ತಾಲ್ಲೂಕುಗಳಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಸಭೆ ನಡೆಸಿ ಅನಿರೀಕ್ಷಿತ ದಾಳಿಗಳನ್ನು ನಡೆಸಿ ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಲಾಗುತ್ತಿದೆ. 14 ವರ್ಷ ಮೇಲ್ಪಟ್ಟ 18 ವರ್ಷದೊಳಗಿನ ಮಕ್ಕಳು ಹೆಚ್ಚಾಗಿ ದುಡಿಯುತ್ತಿರವುದು ಕಂಡು ಬರುತ್ತಿದೆ ಎಂದರು. ದಾಳಿಗಳ ಮೂಲಕ ರಕ್ಷಣೆ ಮಾಡಿರುವ 89 ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗೆ ಒಪ್ಪಿಸಿದೆ.

ಸಮಿತಿಯು ಮಕ್ಕಳನ್ನು ದುಡಿಸಿಕೊಂಡ ಮಾಲೀಕರಿಂದ ವಸೂಲಿ ಮಾಡಿದ 20 ಸಾವಿರ ರೂ ದಂಡ ಮತ್ತು ಸರ್ಕಾರದ 15 ಸಾವಿರ ರೂ ಸೇರಿಸಿ ಡಿಸಿ ಮತ್ತು ಮಕ್ಕಳ ಹೆಸರಲ್ಲಿ ಇಡುಗಂಟು ಇಟ್ಟಿದೆ. ಅದನ್ನು ಮಕ್ಕಳಿಗೆ 18 ವರ್ಷ ತುಂಬಿದ ನಂತರ ಶಿಕ್ಷಣದ ಅನುಕೂಲಕ್ಕೆ ಅವರ ಪಾಲಕ ಪೋಷಕರಿಗೆ ನೀಡಲಿದೆ. ಈ ರೀತಿ ಈಗಾಗಲೇ ಹತ್ತು ಮಕ್ಕಳಿಗೆ ಈ ಸೌಲಭ್ಯ ಒದಗಿಸಿದೆ ಎಂದಿದ್ದಾರೆ.


ಉದಯವಾಹಿನಿ ಚಿತ್ರ

ದಾಳಿಗಳ ಮೂಲಕ ರಕ್ಷಣೆ

> ಮಕ್ಕಳನ್ನು ದುಡಿಸಿಕೊಂಡ ಮಾಲೀಕರ ವಿರುದ್ದ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿದೆ. ಅನಿಷ್ಟವಾದ ಈ ಬಾಲ ಕಾರ್ಮಿಕ ಪದ್ದತಿಯನ್ನು ಹೋಗಲಾಡಿಸಲು ಬೀದಿ ನಾಟಕ, ಕರಪತ್ರ ಹಂಚಿಕೆ, ಪೋಸ್ಟರ್‌ಗಳ ಪ್ರದರ್ಶನ, ಪಾಲಕ ಪೋಷಕರ, ಉದ್ದಿಮೆಗಳ ಮಾಲೀಕರ, ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ ಜಾಗೃತಿ ಮೂಡಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ –ತಹಶೀಲ್ದಾರ್

## ಅರಳಿಮರ ಉಳಿಸಿಕೊಂಡು ರಸ್ತೆ ವಿಸ್ತರಣೆ ಕಾಮಗಾರಿ ನಡೆಸಲು ಒತ್ತಾಯ

• ಉದಯವಾಹಿನಿ ಸಾಗರ

ಶಿವಮೊಗ್ಗ ರಸ್ತೆಯ ತ್ಯಾಗರ್ತಿ ವೃತ್ತದಿಂದ ಜೋಗ ರಸ್ತೆಯ ಎಲ್‌ಬಿ ಕಾಲೇಜು ವೃತ್ತದವರೆಗೆ ಹೆದ್ದಾರಿ ವಿಸ್ತರಣೆ ಕಾಮಗಾರಿ ನಡೆಯುತ್ತಿದ್ದು, ಈ ಮಾರ್ಗದಲ್ಲಿ ಬರುವ ಎರಡು ಅರಳಿಮರಗಳನ್ನು ಉಳಿಸಿಕೊಂಡು ಕಾಮಗಾರಿ ಮುಂದುವರಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ರಸ್ತೆ ವಿಸ್ತರಣೆಗಾಗಿ ಈಗಾಗಲೇ 488 ಬಲಿತ ಪಾರಂಪರಿಕ ವೃಕ್ಷಗಳನ್ನು ಕಡಿಯಲಾಗಿದೆ. ಅಗ್ರಹಾರ ವೃತ್ತ ಹಾಗೂ ಬಿಎಚ್ ರಸ್ತೆಯ ರೆಡ್ ಚಿಲ್ಲಿ ಹೋಟೆಲ್ ಬಳಿ ಇರುವ ಎರಡು ಅರಳಿಮರಗಳನ್ನೂ ಕಡಿಯಲು ಉದ್ದೇಶಿಸಲಾಗಿದೆ ಎಂಬ ಮಾಹಿತಿ ಬಂದಿದ್ದು ಇವುಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮುಂದಾಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಅರಳಿಮರವನ್ನು ಅಶ್ವತ್ಥ ವೃಕ್ಷ ಎಂದು ಪೂಜಿಸುವ ಸಂಪ್ರದಾಯ ಮೊದಲಿನಿಂದಲೂ ಇದೆ. ಹೀಗಾಗಿ ಅರಳಿಮರಗಳ ಬಗ್ಗೆ ಭಾವನಾತ್ಮಕ ನಂಟನ್ನು ಜನರು ಹೊಂದಿದ್ದಾರೆ. ಇದರ ಜೊತೆಗೆ ಅಸಂಖ್ಯಾತ ಹಕ್ಕಿಗಳು, ಇರುವೆ ಗೂಡುಗಳಿಗೆ ಈ ಮರಗಳು ಆಶ್ರಯ ನೀಡಿವೆ. ಈ ಕಾರಣದಿಂದಲೂ ಮರಗಳನ್ನು ಉಳಿಸಿಕೊಳ್ಳಬೇಕು ಎಂದು ಪ್ರತಿಪಾದಿಸಿದ್ದಾರೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ರಸ್ತೆ ವಿಸ್ತರಣೆ ಕಾಮಗಾರಿ ನಡೆಸುವಾಗ 2 ಅಮೂಲ್ಯ ಮರಗಳನ್ನು ಕಡಿಯದೆ ಇರುವ ಸಾಧ್ಯತೆಗಳ ಬಗ್ಗೆ ಯೋಚಿಸಬೇಕು. ಇದು ಅನಿವಾರ್ಯ ಅಂತಾದಲ್ಲಿ ನೂತನ ತಂತ್ರಜ್ಞಾನದ ಯಂತ್ರಗಳನ್ನು ಬಳಸಿ ಈ ಮರಗಳನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸುವ ಕೆಲಸವನ್ನಾದರೂ ಮಾಡಬೇಕು.



● ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವಂತೆ ಶಾಲಾ ಶಿಕ್ಷಣ ಇಲಾಖೆ ದಾಖಲಾತಿ ಆಂದೋಲನ ನಡೆಸುತ್ತಿದೆ

# ಮಕ್ಕಳಿಲ್ಲದೆ ಭಣಗುಡುತ್ತಿವೆ ಸರ್ಕಾರಿ ಶಾಲೆಗಳು: ಖಾಸಗಿ ಶಾಲೆಗಳತ್ತ ಪಾಲಕರ ಚಿತ್ತ

• ಉದಯವಾಹಿನಿ ಕುಷ್ಟಗಿ

ಅಗತ್ಯ ಕೊಠಡಿಗಳು, ಆಟದ ಮೈದಾನ ಇದೆ. ಬಿಸಿಯೂಟ, ಸಮವಸ್ತ್ರ, ಪಠ್ಯಪುಸ್ತಕ ಎಲ್ಲವೂ ಉಚಿತವಾಗಿಯೇ ನೀಡಲಾಗುತ್ತಿದೆ. ಅನುಭವಿ ಶಿಕ್ಷಕರೂ ಇದ್ದಾರೆ. ಆದರೆ, ಮಕ್ಕಳ ಕಲರವ ಮಾತ್ರ ಇಲ್ಲ. ಹೌದು, ಪಟ್ಟಣದ ಕೆಲ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು ಮಕ್ಕಳ ದಾಖಲಾತಿ ಕೊರತೆಯಿಂದ ಭಣಗುಡುತ್ತಿವೆ, ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅಕ್ಕಪಕ್ಕದಲ್ಲೇ ಇರುವ ಖಾಸಗಿ ಶಾಲೆಗಳಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಮಕ್ಕಳಿಂದ ಕೊಠಡಿಗಳು ತುಂಬಿ ತುಳುಕುತ್ತಿರುವುದು ವಿಪರ್ಯಾಸದ ಸಂಗತಿ. ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವಂತೆ ಶಾಲಾ ಶಿಕ್ಷಣ ಇಲಾಖೆ ದಾಖಲಾತಿ ಆಂದೋಲನ ನಡೆಸುತ್ತಿದೆ. ಅಷ್ಟೇ ಏಕೆ ಪಾಲಕರ ಮನೆ ಬಾಗಿಲು ತಟ್ಟುತ್ತಿರುವ ಶಿಕ್ಷಕರು ದಯವಿಟ್ಟು ಮಕ್ಕಳನ್ನು ನಮ್ಮ ಶಾಲೆಗೆ ಕಳಿಸಿ ಎಂದು ಮನವರಿಕೆ ಮಾಡಿ ಕೈಮುಗಿತ್ತಿದ್ದಾರೆ. ಇಷ್ಟಾದರೂ 1–5ನೇ ತರಗತಿ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಪಾಲಕರು ಅಷ್ಟಾಗಿ ಉತ್ಸಾಹ ತೋರುತ್ತಿಲ್ಲ. ಬಹುತೇಕ ಶಾಲೆಗಳಲ್ಲಿನ ಮಕ್ಕಳ ದಾಖಲಾತಿ ಸಂಖ್ಯೆ 50 ದಾಟಿಲ್ಲ ಎಂಬುದು ಗಮನಾರ್ಹ.

**ಎಲ್ಲೆಲ್ಲಿ ಕಡಿಮೆ ಸಂಖ್ಯೆ:** ಪಟ್ಟಣದ ಇಂದಿರಾ ನಗರದ ಶಾಲೆಗೆ ಭೇಟಿ ನೀಡಿದಾಗ ಈ ವರ್ಷದ ದಾಖಲಾತಿ 30 ಇದ್ದರೆ ಮಕ್ಕಳ ಹಾಜರಾತಿ ಕೇವಲ 18 ಇತ್ತು. ಈ ಶಾಲೆಯಲ್ಲಿ ಕಳೆದ ಐದಾರು ವರ್ಷಗಳಿಂದಲೂ ಮಕ್ಕಳ ದಾಖಲಾಗಿ ಸಂಖ್ಯೆ 30ರ ಒಳಗೆ ಇದೆ. 1997ರಲ್ಲಿ ಆರಂಭವಾದ ಈ ಶಾಲೆಗೆ ಮಕ್ಕಳೇ ಬಾರದಿದ್ದರೆ ಈ ಶಾಲೆ ಮುನ್ನಡೆಸುವ ಅಗತ್ಯವಿದೆಯೆ ಎಂಬ ಪ್ರಶ್ನೆ ಶಿಕ್ಷಣ ಇಲಾಖೆಯ ಮುಂದಿದೆ.

ಅದೇ ರೀತಿ ಹನುಮಸಾಗರ ರಸ್ತೆ ಆಶ್ರಯ ಬಡಾವಣೆಯ ಶಾಲೆಯಲ್ಲಿ 28, ಅನ್ನದಾನದೇಶ್ವರ ನಗರದ ಶಾಲೆಯಲ್ಲಿ 27, 12ನೇ ವಾರ್ಡ್ ತೆಗ್ಗಿನ ಓಣಿ ಶಾಲೆಯಲ್ಲಿ 40 ಹಾಗೂ ಮೂರು ಜನ ಶಿಕ್ಷಕರಿರುವ ಸಂದೀಪ್ ನಗರ ಆಶ್ರಯ ಕಾಲೊನಿ ಶಾಲೆಯಲ್ಲಿ 50 ಮಕ್ಕಳ ದಾಖಲಾತಿ ಇದ್ದರೂ, ಹಾಜರಾತಿ ಮಾತ್ರ ಅರ್ಧದಷ್ಟೇ ಇರುತ್ತದೆ' ಎಂದು ಮೂಲಗಳು ತಿಳಿಸಿವೆ.

ಎಲ್ಲವೂ ಉಚಿತವಾಗಿರುವ ಸರ್ಕಾರಿ ಶಾಲೆಗಳ ಬದಲು ಪಾಲಕರು ತಮ್ಮ ಮಕ್ಕಳನ್ನು ದುಬಾರಿ ಶುಲ್ಕ ತೆತ್ತು ಮಕ್ಕಳನ್ನು ಸೇರಿಸಿಕೊಳ್ಳುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ದುಂಬಾಲು ಬೀಳುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ನುರಿತ ಶಿಕ್ಷಕರಿದ್ದಾರೆ. ಆದರೆ, ಬಹುತೇಕ ಖಾಸಗಿ ಶಾಲೆಗಳಲ್ಲಿ ಟಿಇಟಿ ತೇರ್ಗಡೆಯಾಗದ ಬೋಧಕರಿದ್ದಾರೆ. ಆದರೂ ಸರ್ಕಾರಿ ಶಾಲೆಗಳತ್ತ ಪಾಲಕರು ನಿರೀಕ್ಷೆಯಷ್ಟು ಸುಳಿಯುತ್ತಿಲ್ಲವೇಕೆ' ಎಂಬ ಪ್ರಶ್ನೆ ಸಾರ್ವಜನಿಕರಿಂದ ಕೇಳಿಬರುತ್ತಿದೆ.



ಉದಯವಾಹಿನಿ ಚಿತ್ರ

> ಕಿರಿಯ ಪ್ರಾಥಮಿಕ ಶಾಲೆಗಳಲ್ಲಿರುವ ಮಕ್ಕಳ ದಾಖಲಾತಿ ಕೊರತೆ ನೀಗಿಸಲು ಶಾಲಾ ಶಿಕ್ಷಣ ಇಲಾಖೆಯ ಮೂಲಕ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ
> –ದಂಡಪ್ಪ ಹೊಸಮನಿ, ಸಿಆರ್‌ಪಿ ಕುಷ್ಟಗಿ

### ಶಾಲೆ ಸುತ್ತ ಮದ್ಯ ಮಾಂಸ ತ್ಯಾಜ್ಯ


ಕುಷ್ಟಗಿ ಪಟ್ಟಣದ ಇಂದಿರಾ ನಗರ ಶಾಲೆಯ ಸುತ್ತಲಿನ ವಾತಾವರಣ ಮಲೀನಗೊಂಡಿದೆ. ಅಲ್ಲಿರುವ ಬಾರ್ ಮಾಂಸಾಹಾರ ಖಾನಾವಳಿಗಳ ಮಾಲೀಕರು ತ್ಯಾಜ್ಯ ತಂದು ಬೇಕಾಬಿಟ್ಟಿ ಬಿಸಾಡುತ್ತಿದ್ದಾರೆ. ಇದರಿಂದ ಶಾಲೆ ಪಕ್ಕದ ಪ್ರದೇಶ ಮಲೀನಗೊಂಡು ಶಾಲೆಯ ಮಕ್ಕಳು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ ಎಂಬ ಆರೋಪವಿದೆ. ಮದ್ಯದ ಖಾಲಿ ಪಾಕೆಟ್‌ಗಳು ಮಾಂಸದ ತ್ಯಾಜ್ಯ ಕೊಳೆತ ವಸ್ತುಗಳಿಂದಾಗಿ ಮೂಗುಮುಚ್ಚಿಕೊಂಡು ಓಡಾಡುವ ಸ್ಥಿತಿಯಿದೆ. ಪುರಸಭೆಯ ಕಸ ಸಂಗ್ರಹ ವಾಹನ ಇಲ್ಲಿ ಬರುವುದೇ ಇಲ್ಲ ಎಂದು ಸ್ಥಳೀಯ ನಿವಾಸಿಗಳು ದೂರುತ್ತಾರೆ.

> ನಮ್ಮ ಶಾಲೆಯಲ್ಲಿರುವ ಅನುಕೂಲ ಶೈಕ್ಷಣಿಕ ವಾತಾವರಣ ಕುರಿತು ಪಾಲಕರಿಗೆ ಮನವರಿಕೆ ಮಾಡಿಕೊಡಲು ಮನೆ ಮನೆಗೆ ಭೇಟಿ ನೀಡುತ್ತಿದ್ದೇವೆ
> –ರಾಜೇಸಾಬ್ ನದಾಫ್, ಇಂದಿರಾ ನಗರ ಶಾಲೆ ಶಿಕ್ಷಕ

> ಶಿಕ್ಷಣವೇ ಇಲ್ಲವೆಂದ ಮೇಲೆ ಊಟ ಬಟ್ಟೆ ಕೊಟ್ಟರೇನು ಪ್ರಯೋಜನ? ಅನೇಕ ಶಿಕ್ಷಕರು ಬರೀ ನೌಕರಿ ಮಾಡಲು ಬರುತ್ತಾರೆ. ಮಕ್ಕಳಿಗೆ ಕನ್ನಡವೂ ಬರೆಯಲು ಬರಲ್ಲ ಎಂದರೆ ಸರ್ಕಾರಿ ಶಾಲೆಗಳ ಗುಣಮಟ್ಟ ಅರ್ಥವಾಗುತ್ತೆ –ಹನುಮಗೌಡ ಪಾಟೀಲ, ಸ್ಥಳೀಯ ನಿವಾಸಿ

# ಡಿಜಿಟಲ್ ಮೂಲಸೌಕರ್ಯದಲ್ಲಿ ಭಾರತ ಗೇಮ್ ಚೇಂಜರ್; ಫೋಡ್ಸಿ

**ಸ್ಯಾನ್‌ಫ್ರಾನ್ಸಿಸ್ಕೋ:** ಭಾರತದ ಡಿಜಿಟಲ್ ಮೂಲಸೌಕರ್ಯ ಅಭಿವೃದ್ಧಿಯು ಗೇಮ-ಚೇಂಜರ್ ಆಗಿದ್ದು, ದೇಶವನ್ನು ಇತರ ರಾಷ್ಟ್ರಗಳಿಗಿಂತ ಮುಂದಿಡುತ್ತಿದೆ ಎಂದು ಡೇಟಾಬ್ರಿಕ್ಸ್ ಸಿಇಒ ಮತ್ತು ಸಹ-ಸಂಸ್ಥಾಪಕ ಅಲಿ ಘೋಡ್ಸಿ ಹೇಳಿದ್ದಾರೆ. ಡೇಟಾಬ್ರಿಕ್ಸ್ ಡೇಟಾ + ಎಐ ಶೃಂಗಸಭೆ 2025 ರಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ, ಹಲವಾರು ಇತರ ಪ್ರದೇಶಗಳು, ರಾಷ್ಟ್ರಗಳಲ್ಲಿ ಆರ್ಥಿಕ ಹಿಂಜರಿತವು ಕಳವಳಕಾರಿಯಾಗಿರುವ ಸಮಯದಲ್ಲಿ ಭಾರತ ಏರಿಳಿತದಲ್ಲಿದೆ ಎಂದು ಘೋಡ್ಸಿ ಹೇಳಿದರು. ಕಳೆದ ದಶಕದಲ್ಲಿ ಭಾರತದಲ್ಲಿ ಅವರು ಸಾಕಷ್ಟು ಡಿಜಿಟಲ್ ಮೂಲಸೌಕರ್ಯವನ್ನು ನಿರ್ಮಿಸಿದ್ದು, ಅದು ಗೇಮ್-ಚೇಂಜರ್ ಆಗಿದೆ. ಇತರ ದೇಶಗಳಲ್ಲಿಯೂ ನಮ್ಮಲ್ಲಿ ಅದು ಇಲ್ಲ. ವಿಶ್ವದ



ಇತರ ದೇಶಗಳಿಗೆ ಹೋಲಿಸಿದರೆ ಭಾರತ ಈಗ ಡಿಜಿಟಲ್ ಮೂಲಸೌಕರ್ಯದಲ್ಲಿ ಮುಂದಿದೆ ಎಂದು ಘೋಡ್ಸಿ ಪಿಟಿಐ ಭಾರತದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದರು. ಇದು ಡೇಟಾ ಮತ್ತು ಎಐನಲ್ಲಿ ಖಂಡಿತವಾಗಿಯೂ, ನಾವೀನ್ಯತೆ ಸಾಧಿಸಲು ಹೆಚ್ಚು ಸುಲಭಗೊಳಿಸುತ್ತದೆ ಎಂದು ಅವರು ಹೇಳಿದರು. ಕ್ಷೇತ್ರದಲ್ಲಿ ಹೊಸ ಕಂಪನಿಗಳೊಂದಿಗೆ, ನಾವು ಪಾಲುದಾರಿಕೆ ಹೊಂದಿರುವ ವಿಶ್ವದ ಟಾಟಾಗಳು ನಂತಹ ದೀರ್ಘಕಾಲದಿಂದ ಇರುವ ಕಂಪನಿಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲು ಡೇಟಾಬ್ರಿಕ್ಸ್ ತುಂಬಾ ಉತ್ಸುಕವಾಗಿದೆ ಎಂದು ಘೋಡ್ಸಿ ಹೇಳಿದರು. ಇದು ಒಂದು ದೈತ್ಯ ಮಾರುಕಟ್ಟೆಯಾಗಿದೆ ಮತ್ತು ಪ್ರಪಂಚದಾದ್ಯಂತ ಕಾರ್ಯತಂತ್ರದಲ್ಲಿ ನಡೆಯುತ್ತಿರುವ ಪಿವೋಟ್‌ಗಳೊಂದಿಗೆ, ಭಾರತವು ಹೆಚ್ಚು ಮುಖ್ಯವಾಗುತ್ತಿದೆ. ತುಂಬಾ ಉತ್ಸುಕವಾಗಿದೆ ಭಾರತದಲ್ಲಿ ಕೇವಲ ಅವಕಾಶಗಳಿವೆ ಮತ್ತು ದಿಗಂತದಲ್ಲಿ ಯಾವುದೇ ತೊಂದರೆಗಳಿಲ್ಲ ಎಂದು ತೋರುತ್ತದೆ ಎಂದಿದ್ದಾರೆ. ಅಮೆರಿಕದಲ್ಲಿ ವಲಸಿಗರ ಪರಿಸ್ಥಿತಿ ಮತ್ತು ಕಂಪನಿಯ ನೇಮಕಾತಿ ಉಪಕ್ರಮದ ಮೇಲೆ ಅದರ ಪ್ರಭಾವದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಘೋಡ್ಸಿ, ತಾನು ಒಂಬತ್ತು ದೇಶಗಳಲ್ಲಿ ವಾಸಿಸುತ್ತಿದ್ದೇನೆ ಮತ್ತು ಇಂದಿಗೂ ವಲಸಿಗರು ಇಲ್ಲಿಗೆ ಬರಲು ಇದು ಅತ್ಯುತ್ತಮ ದೇಶಗಳಲ್ಲಿ ಒಂದಾಗಿದೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದರು. 20–30 ವರ್ಷಗಳ ಹಿಂದೆ, ಭಾರತದಲ್ಲಿ ಐಐಟಿ ಟಾಪರ್ ವೃತ್ತಿ ಅವಕಾಶಗಳನ್ನು ಹುಡುಕುತ್ತಾ ಅಮೆರಿಕಕ್ಕೆ ಬರಲು ಬಯಸುವುದು ಸಾಮಾನ್ಯವಾಗಿತ್ತು ಎಂದು ಅವರು ಗಮನಸೆಳೆದರು. ಆದಾಗ್ಯೂ, ಕಳೆದ 5–10 ವರ್ಷಗಳಲ್ಲಿ ಇದು ಬದಲಾಗಿದೆ ಎಂದು ಅವರು ಗಮನಿಸಿದರು. ನೀವು ಭಾರತದಲ್ಲಿಯೇ ಇರಿ, ಬೆಂಗಳೂರಿನಲ್ಲಿಯೇ ಇರಿ, ಅಲ್ಲಿ ನಿಜವಾಗಿಯೂ ಹೆಚ್ಚಿನ ಸಂಬಳದ ಕೆಲಸವನ್ನು ಪಡೆಯಿರಿ. ನಿಮ್ಮ ಕುಟುಂಬ ಅಲ್ಲಿಯೇ ಇದೆ, ನಿಮಗೆ ಅಲ್ಲಿ ಸಂಸ್ಕೃತಿ ಇದೆ. ಅಮೆರಿಕಕ್ಕೆ ಏಕೆ ಹೋಗಬೇಕು ಅದು ಈಗಾಗಲೇ ಹಲವು, ಹಲವು, ಹಲವು ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ (ಈ) ಪ್ರವೃತ್ತಿ ಈಗಾಗಲೇ ಒಂದು ರೀತಿಯಲ್ಲಿ ನಡೆಯುತ್ತಿದೆ.ಇದು ಈಗ ವಾಸ್ತವವಾಗಿದೆ ಎಂದು ಗಮನಿಸಿದ ಘೋಡ್ಸಿ ಅವರು ಕಂಪನಿಯು ಈಗ ಭಾರತದಲ್ಲಿ ಪ್ರತಿಭೆಗಳನ್ನು ನೇಮಿಸಿಕೊಳ್ಳುತ್ತಿದೆ ಎಂದು ಹೇಳಿದರು.

# ಅಮೆರಿಕದ ರಾಯಭಾರ ಕಚೇರಿ ಸ್ಥಳಾಂತರಕ್ಕೆ ಟ್ರಂಪ್ ಒಪ್ಪಿಗೆ

## ಅಪಾಯಕಾರಿ ಜಾಗ; ಮಧ್ಯಪ್ರಾಚ್ಯದಿಂದ ಕೆಲ ಸೈನ್ಯ ತುಕಡಿ ಸ್ಥಳಾಂತರಿಸುವ ನಿರ್ಧಾರ


**ಅತ್ಯಂತ ಎಚ್ಚರಿಕೆಯ ಹೆಜ್ಜೆ**

**ವಾಷಿಂಗ್ಟನ್ ಡಿಸಿ:** ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯಾವ ಕ್ಷಣದಲ್ಲಿ ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದನ್ನು ಊಹಿಸುವುದು ಕಷ್ಟ. ಅದರಲ್ಲೂ ಮಧ್ಯಪ್ರಾಚ್ಯ ವಿಚಾರದಲ್ಲಿ ಅತ್ಯಂತ ಎಚ್ಚರಿಕೆಯ ಹೆಜ್ಜೆ ಇಡುತ್ತಿರುವ ಅವರು, ಈ ಪ್ರದೇಶದಲ್ಲಿ ಅಮೆರಿಕದ ಪ್ರಭಾವವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮುಂದುವರೆಸಿದ್ದಾರೆ.

ಆದರೆ ಇರಾನ್ ಜೊತೆಗಿನ ಅಮೆರಿಕದ ರಾಜತಾಂತ್ರಿಕ ಸಂಬಂಧ ಹದಗೆಟ್ಟಿರುವ ಹಿನ್ನೆಲೆಯಲ್ಲಿ, ಮಧ್ಯಪ್ರಾಚ್ಯದಲ್ಲಿ ಹೆಚ್ಚಿನ ಮಿಲಿಟರಿ ಪ್ರಭಾವ ಇರುವಂತೆ ನೋಡಿಕೊಳ್ಳುಲು ಡೊನಾಲ್ಡ್ ಟ್ರಂಪ್ ನಿರ್ಧರಿಸಿದ್ದಾರೆ. ಅದರಂತೆ ಇತ್ತೀಚಿಗಷ್ಟೇ ಅರಬ್ಬೀ ಸಮುದ್ರಕ್ಕೆ ಅಮೆರಿಕದ ಎರಡು ಯುದ್ಧ ನೌಕೆಗಳಾದ ಹ್ಯಾರಿ ಎಸ್. ಟ್ರೂಮನ್ ಮತ್ತು ಯುಎಸ್‌ಎಸ್ ಕಾರ್ಲ್ ವಿನ್ಸನ್ ರವಾನೆ ಮಾಡುವ ಆದೇಶ ಕೂಡ ಹೊರಡಿಸಿದ್ದರು. ಆದರೆ ಈಗ ಏಕಾಏಕಿ ತಮ್ಮ ನಿರ್ಧಾರ ಬದಲಾಯಿಸಿರುವ ಡೊನಾಲ್ಡ್ ಟ್ರಂಪ್, ಮಧ್ಯಪ್ರಾಚ್ಯದಿಂದ ಅಮೆರಿಕದ ಕೆಲವು ಸೈನ್ಯ ತುಕಡಿಗಳನ್ನು ಸ್ಥಳಾಂತರಿಸುವ ಘೋಷಣೆ ಮಾಡಿದ್ದಾರೆ. ಮಧ್ಯಪ್ರಾಚ್ಯವನ್ನು ಅಪಾಯಕಾರಿ ಜಾಗ ಎಂದು ಕರೆದಿರುವ ಡೊನಾಲ್ಡ್ ಟ್ರಂಪ್, ಇರಾಕ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯನ್ನೂ ಭಾಗಶಃ ಸ್ಥಳಾಂತರಿಸುವ ಬಗ್ಗೆ ಚಿಂತಿಸುತ್ತಿದ್ದಾರೆ. ಮಧ್ಯಪ್ರಾಚ್ಯ ಸುತ್ತಲಿನ ಪ್ರದೇಶಗಳಲ್ಲಿ ಬೀಡು ಬಿಟ್ಟಿರುವ ಅಮೆರಿಕನ್ ಪಡೆಗಳ ಯೋಧರಿಗೆ, ಕೆಲವು ನಿರ್ದಿಷ್ಟ ಸ್ಥಳಗಳಿಗೆ ಸ್ಥಳಾಂತರಗೊಳ್ಳುವಂತೆ ಸೂಚನೆ ನೀಡಲಾಗುವುದು ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಆದರೆ ಇರಾಕ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಸ್ಥಳಾಂತರ ನಿರ್ಧಾರಕ್ಕೆ, ಯಾವ ಭದ್ರತಾ ಅಪಾಯಗಳು ಕಾರಣ ಎಂಬುದನ್ನು ಡೊನಾಲ್ಡ್ ಟ್ರಂಪ್ ಬಹಿರಂಗಪಡಿಸಿಲ್ಲ. ಬಹ್ರೇನ್, ಕುವೈತ್‌ನಿಂದ ಸ್ವಯಂಪ್ರೇರಿತ ನಿರ್ಗಮನಕ್ಕೆ ಅಮೆರಿಕದ ವಿದೇಶಾಂಗ ಇಲಾಖೆ ಅಧಿಕಾರ ನೀಡಿದೆ. ಮಧ್ಯಪ್ರಾಚ್ಯಕ್ಕೆ ಸಂಬಂಧಿಸಿದಂತೆ ಅಮೆರಿಕದ ಈ ದಿಢೀರ್ ನಿರ್ಧಾರಗಳು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿವೆ. ಅಮೆರಿಕದ ಇತ್ತೀಚಿನ ನಿಲುವನ್ನು ಪ್ರತಿಬಿಂಬಿಸುವಂತೆ, ಅಮೆರಿಕದ ವಿದೇಶಾಂಗ ಇಲಾಖೆ ತನ್ನ ವಿಶ್ವಾದ್ಯಂತ ಪ್ರಯಾಣ ಸಲಹೆಯನ್ನು ನವೀಕರಿಸಿದೆ. ಜೂನ್ 11 ರಂದು, ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾದ ಕಾರಣ ತುರ್ತು ಪರಿಸ್ಥಿತಿಯಲ್ಲದ ಯುಎಸ್ ಸರ್ಕಾರಿ ಸಿಬ್ಬಂದಿಯನ್ನು ನಿರ್ಗಮಿಸಲು ವಿದೇಶಾಂಗ ಇಲಾಖೆ ಆದೇಶಿಸಿದೆ ಎಂದು ಮೂಲಗಳು ತಿಳಿಸಿವೆ. ಈ ಪ್ರದೇಶದಲ್ಲಿನ ಅಸ್ಥಿರತೆಯ ಕಾರಣದಿಂದಾಗಿ ಅಮೆರಿಕ ತನ್ನ ಕೆಲವು ಸಿಬ್ಬಂದಿಯನ್ನು ಸ್ಥಳಾಂತರಿಸುವ ನಿರ್ಧಾರ ಮಾಡಿದೆ. ಇರಾನ್ ಜೊತೆ ಪರಮಾಣು ಒಪ್ಪಂದ ಮಾಡಿಕೊಳ್ಳುವ ಟ್ರಂಪ್ ಅವರ ಪ್ರಯತ್ನಗಳು ಸ್ಥಗಿತಗೊಂಡಂತೆ ಕಂಡುಬರುತ್ತಿವೆ. ಇದೇ ವೇಳೆ ಇರಾನ್‌ನ ಪರಮಾಣು ಸೌಲಭ್ಯಗಳ ಮೇಲೆ ದಾಳಿ ಮಾಡಲು ಇಸ್ರೇಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ ಎಂದು ಅಮೆರಿಕದ ಗುಪ್ತಚರ ವರದಿಗಳು ಹೇಳಿವೆ.

ಮಧ್ಯಪ್ರಾಚ್ಯ ಶೀಘ್ರದಲ್ಲೇ ಅಪಾಯಕಾರಿ ಸ್ಥಳವಾಗಿ ಬದಲಾಗಬಹುದು ಎಂಬ ಕಾರಣಕ್ಕೆ, ಕೆಲವು ಪ್ರಮುಖ ಸಿಬ್ಬಂದಿ ಸೈನ್ಯತುಕಡಿಯನ್ನು ಸ್ಥಳಾಂತರಿಸುವ ನಿರ್ಧಾರ ಮಾಡಲಾಗಿದೆ ಎಂದು ಡೊನಾಲ್ಡ್ ಟ್ರಂಪ್ ವರದಿಗಾರರಿಗೆ ತಿಳಿಸಿದ್ದಾರೆ.



**ಇರಾನ್ ವಿರುದ್ಧ ಗುಡುಗಿದ ಟ್ರಂಪ್:** ಇನ್ನು ಇರಾನ್ ವಿರುದ್ಧ ಮತ್ತೆ ವಾಗ್ದಾಳಿ ನಡೆಸಿರುವ ಅಮೆರಿಕ ಅಧ್ಯಕ್ಷ ಟ್ರಂಪ್, ಯಾವುದೇ ಕಾರಣಕ್ಕೂ ಇರಾನ್ ಪರಮಾಣು ಶಸ್ತ್ರಸಜ್ಜಿತ ದೇಶವಾಗಲು ನಾವು ಅವಕಾಶ ನೀಡುವುದಿಲ್ಲ ಎಂದು ಗುಡಗಿದ್ದಾರೆ. ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತಾದ ಮಾತುಕತೆಗಳು ವಿಫಲವಾದರೆ, ಅದರ ಮೇಲೆ ದಾಳಿ ಮಾಡುವುದಾಗಿ ಟ್ರಂಪ್ ಪದೇ ಪದೇ ಬೆದರಿಕೆ ಹಾಕಿದ್ದಾರೆ.

ಆದರೆ ಇದಕ್ಕೆ ವ್ಯತಿರಿಕ್ತವಾಗೊ ಅಮೆರಿಕದ ಪ್ರಮುಖ ಬೇಡಿಕೆಯಾದ ಯುರೇನಿಯಂ ಪುಷ್ಟೀಕರಣವನ್ನು ನಿಲ್ಲಿಸುವ ಬೇಡಿಕೆಯನ್ನು ಇರಾನ್ ಸ್ಪಷ್ಟವಾಗಿ ತಳ್ಳಿಹಾಕಿದೆ. ಇರಾನ್ ಮೇಲೆ ದಾಳಿ ಮಾಡಿದರೆ, ಅದು ಈ ಪ್ರದೇಶದಲ್ಲಿನ ಅಮೆರಿಕದ ನೆಲೆಗಳ ಮೇಲೆ ದಾಳಿ ಮಾಡುವ ಮೂಲಕ ಪ್ರತೀಕಾರ ತೀರಿಸಿಕೊಳ್ಳುತ್ತದೆ ಎಂದು ಇರಾನ್ ರಕ್ಷಣಾ ಸಚಿವ ಅಜೀಜ್ ನಾಸಿರ್ಜಾ ಅಮೆರಿಕಕ್ಕೆ ನೇರ ಎಚ್ಚರಿಕೆ ನೀಡಿದ್ದಾರೆ.

**ಮಿಲಿಟರಿ ಉಪಸ್ಥಿತಿ:** ಇರಾಕ್, ಕುವೈತ್, ಕತಾರ್, ಬಹ್ರೇನ್, ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ, ಅಮೆರಿಕ ತನ್ನ ಮಿಲಿಟರಿ ಉಪಸ್ಥಿತಿಯನ್ನು ಹೊಂದಿದೆ. ಸದ್ಯ ಕೆಲವೇ ಕೆಲವು ಸೈನ್ಯ ತುಕಡಿಗಳನ್ನು ಮಧ್ಯಪ್ರಾಚ್ಯದಿಂದ ಸ್ಥಳಾಂತರಿಸಲಾಗುತ್ತಿದ್ದು, ಮಧ್ಯಪ್ರಾಚ್ಯದ ಅತಿದೊಡ್ಡ ಅಮೆರಿಕದ ಮಿಲಿಟರಿ ನೆಲೆಯಾದ ಕತಾರ್‌ನಲ್ಲಿರುವ ಅಲ್ ಉದೈದ್ ವಾಯುನೆಲೆಯಲ್ಲಿನ ಕಾರ್ಯಾಚರಣೆಯಲ್ಲಿ ಯಾವುದೇ ಬದಲಾವಣೆಗಳಿಲ್ಲ ಎಂದು ಅಮೆರಿಕ ಸ್ಪಷ್ಟಪಡಿಸಿದೆ.

**ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ**

**ಇರಾನ್ ಜೊತೆಗಿನ ಉದ್ವಿಗ್ನತೆ ಹೆಚ್ಚಿರುವ ಹಿನ್ನೆಲೆಯಲ್ಲಿ ಮಧ್ಯಪ್ರಾಚ್ಯದಲ್ಲಿ ಬೀಡು ಬಿಟ್ಟಿರುವ ಕೆಲವು ಸೈನ್ಯ ತುಕಡಿಗಳ ಸ್ಥಳಾಂತರಕ್ಕೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶ ಹೊರಡಿಸಿದ್ದಾರೆ. ಇಷ್ಟೇ ಅಲ್ಲದೇ ಇರಾಕ್ ರಾಜಧಾನಿ ಬಾಗ್ದಾದ್‌ನಲ್ಲಿರುವ ಅಮೆರಿದಕದ ರಾಯಭಾರ ಕಚೇರಿಯನ್ನೂ ಸ್ಥಳಾಂತರಿಸಲು ಟ್ರಂಪ್ ಒಪ್ಪಿಗೆ ನೀಡಿದ್ದಾರೆ.**

# ಬಾಂಗ್ಲಾ ಭಾರತದೊಂದಿಗೆ ಉತ್ತಮ ಸಂಬಂಧ ಬಯಸುತ್ತದೆ; ಯೂನಸ್

**ಲಂಡನ್:** ಬಾಂಗ್ಲಾದೇಶದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ತಮ್ಮ ಮಧ್ಯಂತರ ಸರ್ಕಾರ ಭಾರತದೊಂದಿಗೆ ಉತ್ತಮ ಸಂಬಂಧವನ್ನು ಬಯಸುತ್ತಿದೆ, ಯಾವಾಗಲೂ ಏನೋ ತಪ್ಪಾಗುತ್ತಿತ್ತು ಎಂದರು. ಲಂಡನ್‌ನಲ್ಲಿ ಚಾಥಮ್ ಹೌಸ್ ಥಿಂಕ್ ಟ್ಯಾಂಕ್ ನಿರ್ದೇಶಕ ಬ್ರಾನ್ವೆನ್ ಮ್ಯಾಡಾಕ್ಸ್ ಅವರೊಂದಿಗಿನ ಸಂವಾದದ ಸಂದರ್ಭದಲ್ಲಿ, ಯೂನಸ್ ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧಗಳು, ಜುಲೈ ಚಾರ್ಟರ್‌ನಿಂದ ಪ್ರಾರಂಭವಾಗುವ ದೇಶದ ಪ್ರಜಾಪ್ರಭುತ್ವದ ಮಾರ್ಗಸೂಚಿ ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ಪ್ರಸ್ತಾಪಿಸಿದರು. ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಹಸ್ತಾಂತರಿಸುವಂತೆ ಕೋರಿ ಭಾರತಕ್ಕೆ ನೀಡಲಾದ ಅನೌಪಚಾರಿಕ ರಾಜತಾಂತ್ರಿಕ ಟಿಪ್ಪಣಿಯನ್ನು ಮ್ಯಾಡಾಕ್ಸ್ ಉಲ್ಲೇಖಿಸಿದರು, ಈ ವಿಷಯದ ಬಗ್ಗೆ ನವೀಕರಣವನ್ನು ಕೋರಿದರು.

**ನಮಗೆ ಸಹಾಯ ಮಾಡಿ**



ಇದು ಮುಂದುವರಿಯುತ್ತದೆ ನಾವು ಇಡೀ ಪ್ರಕ್ರಿಯೆಯು ತುಂಬಾ ಕಾನೂನುಬದ್ಧವಾಗಿರಬೇಕು, ತುಂಬಾ ಸರಿಯಾಗಿರಬೇಕು ಎಂದು ಬಯಸುತ್ತೇವೆ ನಾವು ಭಾರತದೊಂದಿಗೆ ಉತ್ತಮ ಸಂಬಂಧವನ್ನು ನಿರ್ಮಿಸಲು ಬಯಸುತ್ತೇವೆ. ಇದು ನಮ್ಮ ನೆರೆಯವರು, ಅವರೊಂದಿಗೆ ಯಾವುದೇ ರೀತಿಯ ಮೂಲಭೂತ ಸಮಸ್ಯೆಯನ್ನು ಹೊಂದಲು ನಾವು ಬಯಸುವುದಿಲ್ಲ ಎಂದು ಯೂನಸ್ ಹೇಳಿದರು. ಭಾರತೀಯ ಪತ್ರಿಕೆಗಳಿಂದ ಬರುವ ಎಲ್ಲಾ ನಕಲಿ ಸುದ್ದಿಗಳಿಂದಾಗಿ ಪ್ರತಿಬಾರಿಯೂ ವಿಷಯಗಳು ತಪ್ಪಾಗುತ್ತವೆ, ಅನೇಕ ಜನರು ಅದು ಉನ್ನತ ಮಟ್ಟದ ನೀತಿ ನಿರೂಪಕರೊಂದಿಗೆ ಸಂಪರ್ಕವನ್ನು ಹೊಂದಿದೆ ಎಂದು ಹೇಳುತ್ತಾರೆ ಎಂದು ಅವರು ಹೇಳಿದರು. ಆದ್ದರಿಂದ, ಬಾಂಗ್ಲಾದೇಶವನ್ನು ತುಂಬಾ ನಡುಗುವಂತೆ, ತುಂಬಾ ಕೋಪಗೊಳ್ಳುವಂತೆ ಮಾಡುವುದು ಇದೇ. ನಾವು ಈ ಕೋಪವನ್ನು ಮೀರಲು ಪ್ರಯತ್ನಿಸುತ್ತೇವೆ ಆದರೆ ಸೈಬರ್‌ಸ್ಪೇಸ್‌ನಲ್ಲಿ ಹಲವಾರು ವಿಷಯಗಳು ನಡೆಯುತ್ತಲೇ ಇರುತ್ತವೆ. ನಾವು ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ? ಇದ್ದಕ್ಕಿದ್ದಂತೆ ಅವರು ಏನನ್ನಾದರೂ ಹೇಳುತ್ತಾರೆ, ಏನನ್ನಾದರೂ ಮಾಡುತ್ತಾರೆ, ಕೋಪವು ಮತ್ತೆ ಬರುತ್ತದೆ ಎಂದರು. ಇದು ನಮ್ಮ ದೊಡ್ಡ ಕೆಲಸ, ನಮ್ಮ ಜೀವನವನ್ನು ಮುಂದುವರಿಸಲು ಕನಿಷ್ಠ ಶಾಂತಿಯುತ ಜೀವನವನ್ನು ಹೊಂದಲು ನಮಗೆ ಸಾಧ್ಯವಾಗುತ್ತದೆ ಎಂದು ಖಚಿತ ಪಡಿಸಿಕೊಳ್ಳುವುದು. ನಾವು ಕನಸು ಕಾಣುತ್ತಿರುವ ಜೀವನವನ್ನು ಸೃಷ್ಟಿಸುವುದು ಎಂದು ಅವರು ಹೇಳಿದರು. ಹಸೀನಾ ಅವರ ಬಗ್ಗೆ ಭಾರತದ ಅಸ್ಪಷ್ಟ ಪಾತ್ರದ ಬಗ್ಗೆ ಪ್ರೇಕ್ಷಕರ ಪ್ರಶ್ನೆಗೆ, ಯೂನಸ್ ಹೀಗೆ ಪ್ರತಿಕ್ರಿಯಿಸಿದರು. ಹಸೀನಾ ಅವರು ಅಲ್ಲಿಗೆ ಹೋಗಿದ್ದರಿಂದ ಅವರ ವಿರುದ್ಧದ ಎಲ್ಲಾ ಕೋಪವು ಈಗ ಭಾರತಕ್ಕೆ ವರ್ಗಾಯಿಸಲ್ಪಟ್ಟಿದೆ. ಪ್ರಧಾನಿ ಮೋದಿಯವರೊಂದಿಗೆ ಮಾತನಾಡಲು ನನಗೆ ಅವಕಾಶ ಸಿಕ್ಕಾಗ, ನಾನು ಹೇಳಿದೆ. ಆ 5ರಂದು ದೇಶದಲ್ಲಿ ನಡೆದ ಪ್ರಮುಖ ವಿದ್ಯಾರ್ಥಿ ನೇತೃತ್ವದ ಆಂದೋಲನದ ನಂತರ ಅವರು ಬಾಂಗ್ಲಾದೇಶದಲ್ಲಿ ಪದಚ್ಯುತಗೊಂಡ ನಂತರ ಅವರು ಬಾಂಗ್ಲಾದೇಶದಲ್ಲಿ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ, ಇದರಿಂದಾಗಿ ಅವರು ಢಾಕಾದಿಂದ ಪಲಾಯನ ಮಾಡ ಬೇಕಾಯಿತು. ಆಗಸ್ಟ್‌ನಲ್ಲಿ ಬಾಂಗ್ಲಾದೇಶದಲ್ಲಿ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ 84 ವರ್ಷದ ನೊಬೆಲ್ ಪ್ರಶಸ್ತಿ ವಿಜೇತ ಯೂನಸ್, 2026ರ ಮೊದಲಾರ್ಧದ ವೇಳೆಗೆ ರಾಷ್ಟ್ರೀಯ ಚುನಾವಣೆಗಳು ನಡೆಯಲಿವೆ ಎಂದು ಘೋಷಿಸಿದರು.

> **ನೀವು ಅವರಿಗೆ ಆತಿಥ್ಯ ವಹಿಸಲು ಬಯಸುತ್ತೀರಿ, ಆ ನೀತಿಯನ್ನು ತ್ಯಜಿಸಲು ನಾನು ನಿಮ್ಮನ್ನು ಒತ್ತಾಯಿಸಲು ಸಾಧ್ಯವಿಲ್ಲ. ಆದರೆ ಅವರು ಬಾಂಗ್ಲಾದೇಶದ ಜನರೊಂದಿಗೆ ಅವರು ಮಾತನಾಡುವ ರೀತಿಯಲ್ಲಿ ಮಾತನಾಡದಂತೆ ಖಚಿತಪಡಿಸಿಕೊಳ್ಳಲು ದಯವಿಟ್ಟು ನಮಗೆ ಸಹಾಯ ಮಾಡಿ. ಅವರು ಅಂತಹ ದಿನಾಂಕ, ಅಂತಹ ಗಂಟೆಯಲ್ಲಿ ಮಾತನಾಡುತ್ತಾರೆ ಎಂದು ಘೋಷಿಸುತ್ತಾರೆ, ಇಡೀ ಬಾಂಗ್ಲಾದೇಶವು ತುಂಬಾ ಕೋಪಗೊಳ್ಳುತ್ತದೆ, ಎಂದು ಅವರು ಹೇಳಿದರು.**

# ಮದುವೆ ಆಗಿ 15 ದಿನಕ್ಕೆ ಪತಿಯನ್ನು ಕೊಚ್ಚಿ ಕೊಂದ ಪತ್ನಿ

**ಸಾಂಗ್ಲಿ:** ಇಂದೋರ್ ಉದ್ಯಮಿ ರಾಜಾ ರಘುವಂಶಿ ಹತ್ಯೆ ಮಾದರಿಯಲ್ಲೇ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ 27 ವರ್ಷದ ಮಹಿಳೆಯೊಬ್ಬರು ತಮ್ಮ ವಿವಾಹವಾದ ಹದಿನೈದು ದಿನಗಳ ನಂತರ ತನ್ನ ಪತಿಯನ್ನು ಕಡಿದು ಕೊಂದ ಪ್ರಕರಣ ಬೆಳಕಿಗೆ ಬಂದಿದೆ. ಹದಿನೈದು ದಿನಗಳ ಹಿಂದೆ ಕೈ ಹಿಡಿದಿದ್ದ ತನ್ನ 53 ವರ್ಷದ ಪತಿ ಅನಿಲ್ ಲೋಖಂಡೆ ಮೇಲೆ ಹಲ್ಲೆ ಮಹಳೆ ಹಲ್ಲೆ ನಡೆಸಿ ಕೊಲೆ ಮಾಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ, ಆರೋಪಿಯನ್ನು ಬಂಧಿಸಲಾಗಿದೆ. ದಂಪತಿ ಸಾಂಗ್ಲಿ ಜಿಲ್ಲೆಯ ಕುಪ್ವಾಡ್ ತಹಶೀಲ್‌ನಲ್ಲಿ ವಾಸಿಸುತ್ತಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಲೋಖಂಡೆ ಅವರ ಮೊದಲ ಪತ್ನಿ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದರಿಂದ ಇದು ಅವರ ಎರಡನೇ ವಿವಾಹವಾಗಿತ್ತು ಎಂದು ಹೇಳಿದರು.

ಲೋಖಂಡೆ ಅವರು ಮದುವೆಯನ್ನು ಪೂರ್ಣಗೊಳಿಸಲು ಒತ್ತಾಯಿಸಿದ್ದರಿಂದ ಪತ್ನಿ ಸಿಟ್ಟಿಗೆದ್ದರು, ಇದು ಅವರ ನಡುವೆ ತೀವ್ರ ವಾಗ್ವಾದಕ್ಕೆ ಕಾರಣವಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ರಾಧಿಕಾ ಎಂದು ಗುರುತಿಸಲ್ಪಟ್ಟಿದ್ದು, ಕೋಪದಿಂದ ತನ್ನ ಪತಿ ಹಾಸಿಗೆಯಲ್ಲಿ ಮಲಗಿದ್ದಾಗ ಕೊಡಲಿಯಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾಳೆ ಎಂದು ಕುಪ್ವಾಡ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಂತರ ಮಹಿಳೆಯನ್ನು ಬಂಧಿಸಿ ಭಾರತೀಯ ನ್ಯಾಯ ಸಂಹಿತಾದ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದರು, ಪ್ರಕರಣದ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ.

ಇಂದೋರ್ ಮೂಲದ ಸಾರಿಗೆ ಉದ್ಯಮಿ ರಾಜಾ ರಘುವಂಶಿ ಅವರನ್ನು ಕಳೆದ ತಿಂಗಳು ಮೇಘಾಲಯಕ್ಕೆ ಹನಿಮೂನ್ ಪ್ರವಾಸದಲ್ಲಿದ್ದಾಗ ಅವರ ಪತ್ನಿ ಸೋನಂ ಅವರ ಆಜ್ಞೆಯ ಮೇರೆಗೆ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸೋನಮ್ ತನ್ನ ಆಪಾದಿತ ಪ್ರೇಮಿಯೊಂದಿಗೆ ರಾಜಾ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ. ಕೊಲೆಗೆ ಸಂಬಂಧಿಸಿದಂತೆ ಸೋನಮ್, ಇತರ ನಾಲ್ವರನ್ನು ಇಲ್ಲಿಯವರೆಗೆ ಬಂಧಿಸಲಾಗಿದೆ.

# ಅಪ್ರಾಪ್ತೆಯರ ಮೇಲೆ ಅತ್ಯಾಚಾರ: ಅತಿಥಿಗೃಹದ ಮಾಲೀಕ, ವ್ಯವಸ್ಥಾಪಕ ಬಂಧನ



**ಪಣಜಿ:** ಉತ್ತರ ಗೋವಾ ಜಿಲ್ಲೆಯ ಅತಿಥಿ ಗೃಹವೊಂದರಲ್ಲಿ ಇಬ್ಬರು ಪುರುಷರಿಂದ ಮೂವರು ಅಪ್ರಾಪ್ತ ಬಾಲಕಿಯರ ಅತ್ಯಾಚಾರ ಎಸಗಿದ ಆರೋಪದ ಮೇಲೆ ಪೊಲೀಸರು ಅದರ ಮಾಲೀಕರು, ವ್ಯವಸ್ಥಾಪಕರನ್ನು ಬಂಧಿಸಿದ್ದಾರೆ, ಇದರೊಂದಿಗೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೂನ್ 7, 8ರಂದು ಕ್ಯಾಲಂಗುಟ್ ಪ್ರದೇಶದಲ್ಲಿರುವ ಅತಿಥಿ ಗೃಹದಲ್ಲಿ 11, 13, 15 ವರ್ಷ ವಯಸ್ಸಿನ ಬಾಲಕಿಯರ ಮೇಲೆ ಇಬ್ಬರು ಪುರುಷರು ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ಐವರು ಒಟ್ಟಿಗೆ ಅತಿಥಿ ಗೃಹಕ್ಕೆ ಭೇಟಿ ನೀಡಿದ್ದರು ಎಂದು ಅವರು ಹೇಳಿದರು. ಮೂರು ಬಾಲಕಿಯರ ಪೋಷಕರು ನಮ ಮಕ್ಕಳು ನಾಪತ್ತೆಯಾಗಿದ್ದಾರೆ ಎಂದು ದೂರು ದಾಖಲಿಸಿದರು. ಪೊಲೀಸರು ಬಹು ತಂಡಗಳನ್ನು ರಚಿಸಿ, ಅದೇ ದಿನ ಅವರನ್ನು ಅತಿಥಿ ಗೃಹದಿಂದ ರಕ್ಷಿಸಿ, ಅಲ್ತಾಫ್ ಮುಜಾವರ್ (19), ಓಂ ನಾಯಕ್ (21) ಅವರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಡರಾತ್ರಿ ಅತಿಥಿ ಗೃಹದ ಮಾಲೀಕ ರಜತ್ ಚೌಹಾಣ್ (31), ವ್ಯವಸ್ಥಾಪಕ ಮನ್ಸೂರ್ ಪೀರ್ (35) ಎಂಬ ಇನ್ನಿಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಗುಪ್ತಾ ಪಿಟಿಐಗೆ ತಿಳಿಸಿದ್ದಾರೆ. ಪೋಷಕರ ಪರಿಶೀಲನೆ, ಒಪ್ಪಿಗೆಯಿಲ್ಲದೆ ಅಪ್ರಾಪ್ತ ಬಾಲಕಿಯರಿಗೆ ಅತಿಥಿ ಗೃಹದಲ್ಲಿ ವಸತಿ ಕಲ್ಪಿಸಿದ್ದಕ್ಕಾಗಿ, ಕಾನೂನುಗಳನ್ನು ಉಲ್ಲಂಘಿಸಿ ಅಪರಾಧಕ್ಕೆ ಪ್ರಚೋದನೆ ನೀಡಿದ್ದಕ್ಕಾಗಿ ಅವರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು. ನಾಲ್ವರು ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, ಗೋವಾ ಮಕ್ಕಳ ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಾವು ಅತಿಥಿ ಗೃಹವನ್ನು ಸೀಲ್ ಮಾಡುತ್ತಿದ್ದೇವೆ, ಅದರ ಪರವಾನಗಿಯನ್ನು ರದ್ದುಗೊಳಿಸಲು ಮುಂದಾಗುತ್ತಿದ್ದೇವೆ. ಯಾವುದೇ ಕುಟುಂಬ, ಸಂಬಂಧಿಕರು ಮಗುವಿಗೆ ಸ್ಥಳಾವಕಾಶ ನೀಡಿದರೆ ಅತಿಥಿ ಗೃಹ ನಿರ್ವಹಣೆ ಮತ್ತು ಮಾಲೀಕರನ್ನು ಬಿಡಲಾಗುವುದಿಲ್ಲ ಎಂದು ಎಸ್ಪಿ ಎಚ್ಚರಿಸಿದ್ದಾರೆ.

# ಮಂಗಳಸೂತ್ರವೇ ಸೋನಮ್ ಸಿಕ್ಕಿಬೀಳಲು ಕಾರಣ

**ಶಿಲ್ಲಾಂಗ್:** ರಾಜಾ ರಘುವಂಶಿ ಮತ್ತು ಅವರ ಪತ್ನಿ ಸೋನಮ್ ಕಾಣೆಯಾಗುವ ಮೊದಲು ತಮ್ಮ ಸೂಟ್‌ಕೇಸ್ ಅನ್ನು ಸೊಹ್ರಾದಲ್ಲಿರುವ ಹೋಂಸ್ಟೇಯಲ್ಲಿ ಬಿಟ್ಟು ಹೋಗಿದ್ದರು, ಮತ್ತು ಅದರಲ್ಲಿ ಕಂಡುಬಂದ ಮಂಗಳಸೂತ್ರ, ಉಂಗುರವು ತನಿಖಾಧಿಕಾರಿಗಳಿಗೆ ಹನಿಮೂನ್ ಕೊಲೆ ಪ್ರಕರಣವನ್ನು ಭೇದಿಸಲು ಸಹಾಯ ಮಾಡಿದೆ ಎಂದು ಮೇಘಾಲಯ ಡಿಜಿಪಿ ಐ ನೊಂಗ್ರಾಂಗ್ ಹೇಳಿದ್ದಾರೆ. ಸೋನಮ್ (25), ರಾಜಾ (29) ಮೇ 11ರಂದು ಇಂದೋರ್‌ನಲ್ಲಿ ವಿವಾಹವಾದರು, ಮೇ 20ರಂದು ತಮ್ಮ ಹನಿಮೂನ್‌ಗೆ ಅಸ್ಸಾಂನ ಗುವಾಹಟಿ ಮೂಲಕ ಮೇಘಾಲಯ ತಲುಪಿದರು. ಇಬ್ಬರೂ ಮೇ 23 ರಂದು ಪೂರ್ವ ಖಾಸಿ ಹಿಲ್ಸ್ ಜಿಲ್ಲೆಯ ಸೊಹ್ರಾದಲ್ಲಿ, ನೊಂಗ್ರಿ ಯಾತ್ ಗ್ರಾಮದ ಹೋಂಸ್ಟೇಯಿಂದ ಪರಿಶೀಲಿಸಿದ ಗಂಟೆಗಳ ನಂತರ ನಾಪತ್ತೆಯಾಗಿದ್ದರು.



ಮಂಗಳಸೂತ್ರ ಎಂಬುದು ವಿವಾಹಿತ ಹಿಂದೂ ಮಹಿಳೆಯರು ಧರಿಸುವ ಹಾರವಾಗಿದೆ. ಜೂನ್ 2 ರಂದು ವೈಸಾವ್ಡಾಂಗ್ ಜಲಪಾತದ ಬಳಿಯ ಕಮರಿಯಲ್ಲಿ ರಾಜಾ ಅವರ ಮೃತದೇಹ ಪತ್ತೆಯಾಗಿತ್ತು. ಜೂನ್ 9 ರ ಮುಂಜಾನೆ ಉತ್ತರ ಪ್ರದೇಶದ ಘಾಜಿಪುರದಲ್ಲಿ ಸುಮಾರು 1,200 ಕಿ.ಮೀ ದೂರದಲ್ಲಿ ಕಾಣಿಸಿಕೊಂಡು ಶರಣಾದ ಸೋನಮ್‌ಗಾಗಿ ಹುಡುಕಾಟ ಮುಂದುವರೆದಿತ್ತು. ಆಕೆಯ ಗೆಳೆಯ ರಾಜ್ ಕುಶ್ವಾಹ ಮತ್ತು ಮೂವರು ಗುತ್ತಿಗೆ ಕೊಲೆಗಾರರನ್ನು ಸಹ ಪೊಲೀಸರು ಬಂಧಿಸಿದ್ದಾರೆ. ಮೇ 22 ರಂದು ಯಾವುದೇ ಪೂರ್ವ ಬುಕಿಂಗ್ ಇಲ್ಲದೆ ದಂಪತಿಗಳು ಸೊಹ್ರಾದಲ್ಲಿರುವ ಹೋಂಸ್ಟೇಗೆ ನಡೆದರು ಎಂದು ತನಿಖೆಯ ಭಾಗವಾಗಿರುವ ಮತ್ತೊಬ್ಬ ಪೊಲೀಸ್ ಅಧಿಕಾರಿ ಪಿಟಿಐಗೆ ತಿಳಿಸಿದ್ದಾರೆ.ಅವರಿಗೆ ಅಲ್ಲಿ ಕೊಠಡಿ ಸಿಗಲಿಲ್ಲ, ಆದ್ದರಿಂದ, ತಮ್ಮ ಸೂಟ್‌ಕೇಸ್ ಅನ್ನು ಹೋಂಸ್ಟೇಯಲ್ಲಿ ಇಡಲು ನಿರ್ಧರಿಸಿದರು, ಏಕೆಂದರೆ ಡಬಲ್ ಡೆಕ್ಕರ್ ರೂಟ್ ಬ್ರಿಡ್ಜ್ ಅನ್ನು ನೋಡಲು ನೊಂಗ್ರಿಯಾಟ್ ಗ್ರಾಮಕ್ಕೆ 3,000 ಮೆಟ್ಟಿಲುಗಳಿಗಿಂತ ಹೆಚ್ಚು ನಡೆದುಕೊಂಡು ಹೋಗುವುದು ಕಷ್ಟಕರವಾಗಿತ್ತು ಎಂದು ಅವರು ಹೇಳಿದರು. ಅವರ ಸೂಟ್‌ಕೇಸ್ ಸೊಹ್ರಾ ಹೋಂಸ್ಟೇಯಲ್ಲಿಯೇ ಇದ್ದರೂ, ಮೇ 23 ರಂದು ಮುಂಜಾನೆ ಚೆಕ್ ಔಟ್ ಆಗುವ ಮೊದಲು ಅವರು ನೊಂಗ್ರಿಯಾಟ್‌ನಲ್ಲಿರುವ ಮತ್ತೊಂದು ಹೋಂಸ್ಟೇಯಲ್ಲಿ ರಾತ್ರಿ ಕಳೆದರು. ಅವರು ಸೊಹ್ರಾಗೆ ಹಿಂತಿರುಗಿ, ಪಾರ್ಕಿಂಗ್ ಸ್ಥಳದಿಂದ ತಮ್ಮ ಸ್ಕೂಟರ್ ತೆಗೆದುಕೊಂಡು ವೈಸಾವ್ಡಾಂಗ್ ಜಲಪಾತಕ್ಕೆ ಹೋದರು, ಅಲ್ಲಿ ರಾಜಾ ಅವರನ್ನು ಮೂವರು ಗುತ್ತಿಗೆ ಕೊಲೆಗಾರರು ಅವರ ಪತ್ನಿಯ ಮುಂದೆ ಕೊಂದಿದ್ದಾರೆ ಎಂದು ಅವರು ಹೇಳಿದರು.

ನೊಂಗ್ರಿಯಾಟ್‌ನಿಂದ ಸೊಹ್ರಾಗೆ ಹಿಂತಿರುಗುತ್ತಿದ್ದಾಗ ಪ್ರವಾಸಿ ಮಾರ್ಗದರ್ಶಿಯೊಬ್ಬರು ಮೂವರು ಹಿಂದಿ ಮಾತನಾಡುವ ಪುರುಷರೊಂದಿಗೆ ದಂಪತಿಗಳನ್ನು ನೋಡಿದ್ದಾರೆ ಎಂದು ಪಿಟಿಐ ಶನಿವಾರ ವರದಿ ಮಾಡಿತ್ತು.ಆರೋಪಿಗಳು ಅಪರಾಧವನ್ನು ಒಪ್ಪಿಕೊಂಡಿದ್ದಾರೆ, ಎಲ್ಲಾ ಪುರಾವೆಗಳೊಂದಿಗೆ, ನಿರಾಕರಿಸಲು ಯಾವುದೇ ಅವಕಾಶವಿಲ್ಲ ಎಂದು ಪೊಲೀಸ್ ಅಧಿಕಾರಿ ಹೇಳಿದರು. ಶಿಲ್ಲಾಂಗ್‌ನ ನ್ಯಾಯಾಲಯವು ಸೋನಮ್, ಆಕೆಯ ಗೆಳೆಯ ಮತ್ತು ಮೂವರು ಕೊಲೆಗಾರರನ್ನು ಎಂಟು ದಿನಗಳ ಪೊಲೀಸ್ ಕಸ್ಟಡಿಗೆ ಕಳುಹಿಸಿದೆ.

> **ಸೋನಮ್ ಅವರ ಮಂಗಳಸೂತ್ರ ಮತ್ತು ಸೊಹ್ರಾದಲ್ಲಿರುವ ಹೋಂಸ್ಟೇಯಲ್ಲಿ ದಂಪತಿಗಳು ತ್ಯಜಿಸಿದ್ದ ಸೂಟ್‌ಕೇಸ್‌ನಿಂದ ಉಂಗುರವನ್ನು ನಾವು ವಶಪಡಿಸಿಕೊಂಡಿದ್ದೇವೆ. ಆಭರಣಗಳನ್ನು ಬಿಟ್ಟು ಬಂದ ವಿವಾಹಿತ ಮಹಿಳೆಯೊಬ್ಬರು ಪ್ರಕರಣದಲ್ಲಿ ಶಂಕಿತಳಾಗಿ ಅವಳನ್ನು ಹಿಂಬಾಲಿಸಲು ನಮಗೆ ಸುಳಿವು ನೀಡಿದರು ಎಂದು ನೊಂಗ್ರಾಂಗ್ ಪಿಟಿಐಗೆ ತಿಳಿಸಿದರು.**

# ಜುಲೈ ಅಂತ್ಯಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕ; ಸದ್ದಿಲ್ಲದೆ ಆಯ್ಕೆ ಪ್ರಕ್ರಿಯೆ ಆರಂಭ

## ರೇಸ್‌ನಲ್ಲಿದೆ ಹಲವು ನಾಯಕರ, ಯಾರ್ಯಾರು? | ಮಳೆಗಾಲದ ಅಧಿವೇಶನ ಪ್ರಾರಂಭಕ್ಕೂ ಮೊದಲು ನೇಮಕ

**ಹೊಸದಿಲ್ಲಿ:** ಸಂಸತ್ತಿನ ಮಳೆಗಾಲದ ಅಧಿವೇಶನ ಪ್ರಾರಂಭವಾಗುವ ಮೊದಲು, ಜು. 21 ರೊಳಗೆ ಭಾರತೀಯ ಜನತಾ ಪಕ್ಷ ತನ್ನ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡುವ ನಿರೀಕ್ಷೆಯಿದೆ. ಇದರ ಜೊತೆಗೆ ಸುಮಾರು 10 ರಾಜ್ಯಗಳಿಗೆ ಹೊಸ ರಾಜ್ಯ ಅಧ್ಯಕ್ಷರ ಆಯ್ಕೆಯೂ ನಡೆಯಲಿದೆ. ಹೊಸ ಅಧ್ಯಕ್ಷರ ಆಯ್ಕೆಯು ಬಿಹಾರ ವಿಧಾನ ಸಭಾ ಚುನಾವಣೆಗೂ ಮುಂಚಿತವಾಗಿ ನಡೆಯಲಿದ್ದು,

ಪಕ್ಷದ ನಾಯಕತ್ವದಲ್ಲಿ ಗೊಂದಲ ಉಂಟಾಗದಂತೆ ನೋಡಿಕೊಳ್ಳಲು ಈ ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಆಗಿರುವ ಜೆ.ಪಿ. ನಡ್ಡಾ ಅವರ ಅಧಿಕಾರಾವಧಿ ಜೂನ್ 2024ರಲ್ಲಿ ಮುಕ್ತಾಯಗೊಂಡಿದೆ. ಪ್ರಸ್ತುತ ಅವರು ಕೇಂದ್ರ ಸಚಿವರಾಗಿ ಕಾರ್ಯ ನಿರ್ವ ಹಿಸುತ್ತಿದ್ದಾರೆ.

ಹೀಗಾಗಿ ಪಕ್ಷವು ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಚುರುಕುಗೊಳಿಸಿದೆ. ಪಕ್ಷದ ಸಂವಿಧಾನದ ಪ್ರಕಾರ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಹೊಸ ಅಧ್ಯಕ್ಷರು 12 ಪ್ರಮುಖ ಚುನಾವಣೆಗಳನ್ನು ಎದುರಿಸಬೇಕಾಗುತ್ತದೆ.



ಶಿವರಾಜ್ ಸಿಂಗ್ ಚೌಹಾಣ್, ಸುನೀಲ್ ಬನ್ಸಾಲ್, ಧರ್ಮೇಂದ್ರ ಪ್ರಧಾನ್, 8 ಸಂಭಾವ್ಯ ಅಭ್ಯರ್ಥಿಗಳ ಹೆಸರುಗಳು ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ. ಬಿಜೆಪಿ ತನ್ನ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ಮುಂದಿನ ವಾರದಿಂದ ಪ್ರಾರಂಭವಾಗುತ್ತದೆ. ಸಂಸತ್ತಿನ ಮುಂಗಾರು ಅಧಿವೇಶನ ಪ್ರಾರಂಭವಾಗುವ ಮೊದಲು ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲು ಪಕ್ಷವು ಸಿದ್ಧತೆ ನಡೆಸಿದೆ. ಪಕ್ಷದ ಹಿರಿಯ ನಾಯಕರ ಪ್ರಕಾರ, ರಾಜ್ಯ ಮಟ್ಟದ ನೇಮಕಾತಿಗಳ ನಂತರ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ತಕ್ಷಣವೇ ಪ್ರಾರಂಭವಾಗುತ್ತದೆ. ಈ ಕುರಿತು ಪಕ್ಷದ ಉನ್ನತ ನಾಯಕರೊಂದಿಗೆ ಅನೌಪಚಾರಿಕ ಮಾತುಕತೆಗಳು ನಡೆದಿವೆ. ನಾಯಕತ್ವ ಬದಲಾವಣೆಯನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂದು ನಿರ್ಧರಿಸಲಾಗಿದೆ. ಬಿಹಾರದಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ. ಆಗಸ್ಟ್ 15 ರ ನಂತರ ಚುನಾವಣೆಗಳು ನಡೆಯುವ ಸಾಧ್ಯತೆ ಇದೆ. ಈ ವೇಳೆ ಬಿಜೆಪಿ ನಾಯಕತ್ವದ ಗೊಂದಲವನ್ನು ತಪ್ಪಿಸಲು ಬಯಸುತ್ತದೆ. ಅದಕ್ಕಾಗಿ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಮೊದಲೇ ನೇಮಿಸಲು ತೀರ್ಮಾನಿಸಿದೆ. ಸುಮಾರು ಹತ್ತು ರಾಜ್ಯಗಳಲ್ಲಿ ರಾಜ್ಯ ಅಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಜೂನ್ 21 ರ ವೇಳೆಗೆ ಹೊಸ ರಾಜ್ಯ ಮುಖ್ಯಸ್ಥರನ್ನು ನೇಮಿಸುವ ಸಾಧ್ಯತೆಯಿದೆ. ನಂತರ ರಾಷ್ಟ್ರೀಯ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಪಕ್ಷದ ಅಧ್ಯಕ್ಷರು 3 ವರ್ಷಗಳ ಅವಧಿಯನ್ನು ಹೊಂದಿರುತ್ತಾರೆ, 2 ಬಾರಿಗಿಂತ ಹೆಚ್ಚು ಕಾಲ ಆ ಸ್ಥಾನವನ್ನು ಅಲಂಕರಿಸುವಂತಿಲ್ಲ ಎಂದು ಬಿಜೆಪಿ ನಿಯಮ ಹೇಳುತ್ತದೆ. ಹೊಸ ಅಧ್ಯಕ್ಷರು ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಮುಂಬರುವ ಚುನಾವಣೆಗಳಲ್ಲಿ ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿ ಅವರ ಮೇಲಿರುತ್ತದೆ. ಪಕ್ಷದ ಸಂಘಟನೆಯನ್ನು ಬಲಪಡಿಸುವುದು, ಕಾರ್ಯಕರ್ತರನ್ನು ಹುರಿದುಂಬಿಸುವುದು ರಾಷ್ಟ್ರೀಯ ಅಧ್ಯಕ್ಷರ ಪ್ರಮುಖ ಕಾರ್ಯವಾಗಿರುತ್ತದೆ.

**ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ 8 ಸಂಭಾವ್ಯ ಅಭ್ಯರ್ಥಿ**


- ಶಿವರಾಜ್ ಸಿಂಗ್ ಚೌಹಾಣ್
- ಸುನೀಲ್ ಬನ್ಸಾಲ್
- ಧರ್ಮೇಂದ್ರ ಪ್ರಧಾನ್
- ರಘುಬರ್ ದಾಸ್
- ಸ್ಮೃತಿ ಇರಾನಿ
- ವನತಿ ಶ್ರೀನಿವಾಸನ್
- ತಮಿಳಿಸೈ ಸೌಂದರರಾಜನ್

**ಸದ್ಯದಲ್ಲೇ ಉತ್ತರ ಸಿಗಲಿದೆ**

**ಭಾರತೀಯ ಜನತಾ ಪಕ್ಷಕ್ಕೆ ಹೊಸ ಸಾರಥಿ ಆಯ್ಕೆಗೆ ಪ್ರಕ್ರಿಯೆಗಳು ಆರಂಭವಾಗಿದ್ದು, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಯಾರಾಗುತ್ತಾರೆಂಬ ಪ್ರಶ್ನೆಗೆ ಸದ್ಯದಲ್ಲೇ ಉತ್ತರ ಸಿಗಲಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಉತ್ತರಾಧಿಕಾರಿ ಆಯ್ಕೆ ಪ್ರಕ್ರಿಯೆ ವೇಗ ಪಡೆದುಕೊಂಡಿದ್ದು, ಹೊಸ ಅಧ್ಯಕ್ಷರ ಆಯ್ಕೆಯು ಬಿಹಾರ ವಿಧಾನಸಭಾ ಚುನಾವಣೆಗೂ ಮುಂಚಿತವಾಗಿ ನಡೆಯಲಿದೆ. ಶಿವರಾಜ್ ಸಿಂಗ್ ಚೌಹಾಣ್, ಸುನೀಲ್ ಬನ್ಸಾಲ್, ಧರ್ಮೇಂದ್ರ ಪ್ರಧಾನ್ ಸೇರಿದಂತೆ ಕೆಲ ಸಂಭಾವ್ಯ ಅಭ್ಯರ್ಥಿಗಳ ಹೆಸರುಗಳು ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ.**

# ಮಿನಿ ನ್ಯೂಸ್

## ಅಮೆರಿಕ ಸೇನಾ ದಿನಾಚರಣೆಗೆ ಪಾಕ್ ಮಿಲಿಟರಿ ಮುಖ್ಯಸ್ಥ ಚೀಫ್‌ಗೆಸ್ಟ್



**ವಾಷಿಂಗ್ಟನ್:** ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಅವರನ್ನು ಅಮೆರಿಕ ಸೇನಾ ದಿನಾಚರಣೆಗೆ ಆಹ್ವಾನ ನೀಡುವ ಮೂಲಕ ಅಮೆರಿಕ ಮತ್ತೆ ತನ್ನ ನರಿಬುದ್ಧಿ ಪ್ರದರ್ಶಿಸಿದೆ. ಈ ವಾರ ವಾಷಿಂಗ್ಟನ್ ಡಿಸಿಯಲ್ಲಿ ನಡೆಯಲಿರುವ ಅಮೆರಿಕ ಸೇನೆಯ 250 ನೇ ವಾರ್ಷಿಕೋತ್ಸವದ ಆಚರಣೆಯಲ್ಲಿ ಭಾಗವಹಿಸಲು ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ವಾಷಿಂಗ್ಟನ್‌ನಿಂದ ಆಹ್ವಾನ ಬಂದ ನಂತರ, ಮುನೀರ್ ಶನಿವಾರ ಅಮೆರಿಕದ ರಾಜಧಾನಿಯಲ್ಲಿ ನಡೆಯಲಿರುವ ಮಿಲಿಟರಿ ಮೆರವಣಿಗೆಯಲ್ಲಿ ತಮ್ಮ ಉಪಸ್ಥಿತಿಯನ್ನು ದೃಢಪಡಿಸಿದ್ದಾರೆ, ಇದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 79ನೇ ಹುಟ್ಟುಹಬ್ಬವೂ ಆಗಿದೆ. ಭಾರತ, ಪಾಕಿಸ್ತಾನ ನಡುವಿನ ಹೆಚ್ಚಿದ ಉದ್ವಿಗ್ನತೆಯ ನಡುವೆ ಅವರ ಭೇಟಿ ಬಂದಿದೆ. ಮೂಲಗಳ ಪ್ರಕಾರ, ಮುನೀರ್ ತಮ್ಮ ಭೇಟಿಯ ಸಮಯದಲ್ಲಿ ಅಮೆರಿಕ ವಿದೇಶಾಂಗ ಇಲಾಖೆ, ಪೆಂಟಗನ್‌ನ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಪಾಕಿಸ್ತಾನ, ಅಮೆರಿಕ ಎರಡೂ ಉನ್ನತ ಮಟ್ಟದ ಮಿಲಿಟರಿ ನಿಶ್ಚಿತಾರ್ಥವನ್ನು ದೃಢಪಡಿಸಿಲ್ಲ. ಮುನೀರ್ ಅವರನ್ನು ಅಮೆರಿಕದ ಉನ್ನತ ಜನರಲ್ ಹೊಗಳಿದ ಕೆಲವು ದಿನಗಳ ನಂತರ ಈ ಭೇಟಿ ಬಂದಿದೆ. ಈ ವಾರ ನಡೆದ ಕಾಂಗ್ರೆಸ್ ವಿಚಾರಣೆಯಲ್ಲಿ, ಯುಎಸ್ ಸೆಂಟ್ರಲ್ ಕಮಾಂಡ್‌ನ ಮುಖ್ಯಸ್ಥ ಜನರಲ್ ಮೈಕೆಲ್ ಕುರಿಲ್ಲಾ, ಪಾಕಿಸ್ತಾನವನ್ನು ಭಯೋತ್ಪಾದನಾ ನಿಗ್ರಹ ಜಗತ್ತಿನಲ್ಲಿ ಅದ್ಭುತ ಪಾಲುದಾರ ಎಂದು ಕರೆದರು, ಖೋರಾಸನ್ ವಿರುದ್ಧದ ಕಾರ್ಯಾಚರಣೆಗಳಿಗೆ ಇಸ್ಲಾಮಾಬಾದ್ ನೀಡಿದ ಕೊಡುಗೆಗಳನ್ನು ಒತ್ತಿ ಹೇಳಿದರು.

## 2700 ಕೋಟಿ ವಂಚನೆ ಪ್ರಕರಣ ಬೆನ್ನತ್ತಿದ ಇಡಿ

**ನವದೆಹಲಿ:** ಹೂಡಿಕೆದಾರರಿಗೆ 2,700 ಕೋಟಿ ರೂ. ವಂಚನೆ ಆರೋಪದ ಮೇಲೆ ರಾಜಸ್ಥಾನ ಮತ್ತು ಗುಜರಾತ್‌ನ ವಿವಿಧ ಪ್ರದೇಶಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ನೆಕ್ಸಾ ಎವರ್‌ಗ್ರೀನ್ ಎಂಬ ಕಂಪನಿಯ ವಿರುದ್ಧ ರಾಜಸ್ಥಾನ ಪೊಲೀಸರು ದಾಖಲಿಸಿದ ಎಫ್‌ಐಆರ್‌ನಿಂದ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಗುಜರಾತ್‌ನ ಧೋಲೇರಾ ನಗರದಲ್ಲಿ ಹೆಚ್ಚಿನ ಆದಾಯ, ಭೂಮಿಯನ್ನು ನೀಡುವ ಭರವಸೆ ನೀಡುವ ಮೂಲಕ ಕಂಪನಿಯು ಹೂಡಿಕೆದಾರರಿಗೆ 2,700 ಕೋಟಿ ರೂ.ಗಳಷ್ಟು ವಂಚಿಸಿದೆ ಎಂದು ಆರೋಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ತನಿಖೆಯ ಭಾಗವಾಗಿ ರಾಜಸ್ಥಾನದ ಸಿಕಾರ್, ಜೈಪುರ, ಜೋಧ್‌ಪುರ, ಜುನ್‌ಜುನು, ಗುಜರಾತ್‌ನ ಅಹಮದಾಬಾದ್‌ನಲ್ಲಿ ಸುಮಾರು ಎರಡು ಜನ್ ಸ್ಥಳಗಳನ್ನು ಶೋಧಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ದಾಳಿ ವೇಳೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಇಡಿ ಮೂಲಗಳು ತಿಳಿಸಿವೆ.

## ಬಾಬಾ ಸಿದ್ದಿಕ್ ಹಂತಕ ಅಖ್ತರ್ ಕೆನಡಾದಲ್ಲಿ ಬಂಧನ

**ಮುಂಬೈ:** ಎನ್‌ಸಿಪಿ ನಾಯಕ ಬಾಬಾ ಸಿದ್ದಿಕ್ ಹತ್ಯೆಯ ಪ್ರಮುಖ ಸಂಚುಕೋರ ಎಂದು ಹೇಳಲಾಗುವ ಜೀಶನ್ ಅಖ್ತರ್ ಅವರನ್ನು ಕೆನಡಾದಲ್ಲಿ ಬಂಧಿಸಲಾಗಿದೆ ಎಂದು ಮಹಾರಾಷ್ಟ್ರ ಗೃಹ ಖಾತೆ ರಾಜ್ಯ ಸಚಿವ ಯೋಗೇಶ್ ಕದಮ್ ತಿಳಿಸಿದ್ದಾರೆ. ಮೂಲಗಳ ಪ್ರಕಾರ, ಅಖ್ತರ್ (22) ಅವರನ್ನು ನಕಲಿ ಪಾಸ್‌ಪೋರ್ಟ್ ಪ್ರಕರಣದಲ್ಲಿ ಬಂಧಿಸಲಾಗಿದೆ. ಬಾಬಾ ಸಿದ್ದಿಕ್ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿದ್ದ ಜೀಶನ್ ಅವರನ್ನು ಕೆನಡಾದಲ್ಲಿ ಬಂಧಿಸಲಾಗಿದೆ. ಅವರನ್ನು ಭಾರತಕ್ಕೆ ಮರಳಿ ಕರೆತರುವ ಪ್ರಕ್ರಿಯೆಯನ್ನು ನಾವು ಪ್ರಾರಂಭಿಸಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಅವರನ್ನು ವಾಪಸ್ ಕರೆತಂದ ನಂತರ ನಾವು ಅವರನ್ನು ಮತ್ತಷ್ಟು ವಿಚಾರಣೆ ಮಾಡುತ್ತೇವೆ ಎಂದು ಕದಮ್ ಪಿಟಿಐ ವೀಡಿಯೊಗಳಿಗೆ ತಿಳಿಸಿದ್ದಾರೆ. ಮುಂಬೈ ಪೊಲೀಸರ ಪ್ರಕಾರ, ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಅವರ ಸಹೋದರ ಅನ್ಮೋಲ್ ಬಿಷ್ಣೋಯ್, ಜೀಶನ್ ಅಖ್ತರ್, ಶುಭಂ ಲೋಂಕರ್ ಅವರಿಗೆ ಎನ್‌ಸಿಪಿ ನಾಯಕನ ಹತ್ಯೆಯನ್ನು ನಡೆಸಲು ಒಪ್ಪಂದ ಮಾಡಿಕೊಂಡಿದ್ದರು. ಮಹಾರಾಷ್ಟ್ರದ ಮಾಜಿ ಸಚಿವ ಸಿದ್ದಿಕ್ ಅವರನ್ನು ಅಕ್ಟೋಬರ್ 12, 2024 ರಂದು ಬಾಂದ್ರಾ ಪ್ರದೇಶದಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು. ಈ ಪ್ರಕರಣದಲ್ಲಿ ಪೊಲೀಸರು ಇಲ್ಲಿಯವರೆಗೆ ಕನಿಷ್ಠ 25 ಜನರನ್ನು ಬಂಧಿಸಿದ್ದಾರೆ.

## ಅಮರನಾಥ ಯಾತ್ರೆಗೆ ಸೂಕ್ತ ಭದ್ರತೆ

**ಶ್ರೀನಗರ:** ಅಮರನಾಥ ಯಾತ್ರೆಗೆ ಸಂಪೂರ್ಣ ಭದ್ರತಾ ವ್ಯವಸ್ಥೆ ಮಾಡಲಾಗಿದೆ ಎಂದು ಜಮ್ಮು, ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹೇಳಿದ್ದಾರೆ, ಯಾತ್ರಿಕರು ಹೆಚ್ಚಿನ ಸಂಖ್ಯೆಯಲ್ಲಿ ಗುಹೆ ದೇಗುಲಕ್ಕೆ ಭೇಟಿ ನೀಡಬೇಕೆಂದು ಒತ್ತಾಯಿಸಿದರು. ಈ ವರ್ಷದ ವಾರ್ಷಿಕ ಯಾತ್ರೆಯ ವಿಧ್ಯುಕ್ತ ಆರಂಭವನ್ನು ಗುರುತಿಸುವ ಮೂಲಕ ಸಿನ್ಹಾ ಗುಹೆ ದೇಗುಲದಲ್ಲಿ ಪ್ರಥಮ ಪೂಜೆ ನೆರವೇರಿಸಿದರು.ಇತ್ತೀಚಿನ ದಿನಗಳಲ್ಲಿ ಬಾಲ್ಟಾಲ್ ಟ್ರ್ಯಾಕ್ ಮೂಲಕ ಪವಿತ್ರ ಗುಹೆಯನ್ನು ತಲುಪಿದ ಅಮರನಾಥ ಜಿ ದೇಗುಲ ಮಂಡಳಿಯ ಮೊದಲ ಅಧ್ಯಕ್ಷರಾದರು. ಪ್ರಥಮ ಪೂಜೆ ಮುಕ್ತಾಯವಾಯಿತು. ಜುಲೈ 3 ರಂದು ಪ್ರಾರಂಭವಾಗಿ ಆ. 9 ರಂದು ರಕ್ಷಾ ಬಂಧನದಂದು ಮುಕ್ತಾಯಗೊಳ್ಳಲಿರುವ ಯಾತ್ರೆಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕೆಂದು ನಾನು ವಿನಂತಿಸುತ್ತೇನೆ ಎಂದು ಸಿನ್ಹಾ ಹೇಳಿದರು. ಈ ವರ್ಷ ಯಾತ್ರಿಕರಿಗೆ ದೇವಾಲಯ ಮಂಡಳಿ ಮತ್ತು ಆಡಳಿತವು ಸೌಲಭ್ಯಗಳನ್ನು ಸುಧಾರಿಸಿದೆ ಎಂದು ಅವರು ಹೇಳಿದರು.

ಜಮ್ಮು, ಕಾಶ್ಮೀರ ಪೊಲೀಸ್, ಸೇನೆ, ಸಿಆರ್‌ಪಿಎಫ್, ಇತರ ಸಿಎಪಿಎಫ್‌ಗಳು ಸಂಪೂರ್ಣ ಭದ್ರತಾ ವ್ಯವಸ್ಥೆಗಳನ್ನು ಮಾಡಿವೆ. ಆದ್ದರಿಂದ, ಯಾರೂ ಯಾವುದರ ಬಗ್ಗೆಯೂ ಯೋಚಿಸುವ ಅಗತ್ಯವಿಲ್ಲ ಎಂದು ನಾನು ಭಾವಿಸುತ್ತೇನೆ; ಅವರು ಬಾಬಾ ಅವರ ಆಶೀರ್ವಾದವನ್ನು ಪಡೆಯಬೇಕು ಎಂದು ಸಿನ್ಹಾ ಹೇಳಿರುವ ಅವರು ನಂತರ, ಎಕ್ಸ್‌ನಲ್ಲಿ ಹರ ಹರ ಮಹಾದೇವ್! ಎಂದು ಪೋಸ್ಟ್ ಮಾಡಿದ್ದಾರೆ. ಜಮ್ಮು, ಕಾಶ್ಮೀರದ ಜನರು, ನಾಗರಿಕ ಸಮಾಜ ಮತ್ತು ಎಲ್ಲಾ ಸೇವಾ ಪೂರೈಕೆದಾರರ ಅಮೂಲ್ಯ ಕೊಡುಗೆಗಳು ಯಾವಾಗಲೂ ಅಸಾಧಾರಣವಾಗಿವೆ. ಸೌಲಭ್ಯಗಳು, ಸೇವೆಗಳಲ್ಲಿನ ಗಮನಾರ್ಹ ಸುಧಾರಣೆಗಳು ಈ ವರ್ಷದ ತೀರ್ಥಯಾತ್ರೆ ಎಲ್ಲಾ ಭಕ್ತರಿಗೆ ಸ್ಮರಣೀಯ, ಆಧ್ಯಾತ್ಮಿಕವಾಗಿ ಪೂರೈಸುತ್ತದೆ ಎಂದು ನನಗೆ ಸಂಪೂರ್ಣ ನಂಬಿಕೆಯಿದೆ ಎಂದು ಅವರು ಹೇಳಿದರು.



# ತೆಲುಗಿಗೆ ಕಾಲಿಟ್ಟ ಸಪ್ತಮಿ ಗೌಡ

**ಮೊದಲ ಸಿನಿಮಾನಲ್ಲೇ ಪವರ್‌ಫುಲ್ ಪಾತ್ರ**

ನಟಿ ಸಪ್ತಮಿ ಗೌಡ 'ಕಾಂತಾರ' ಸಿನಿಮಾ ಮೂಲಕ ದೇಶದಾದ್ಯಂತ ಖ್ಯಾತಿ ಗಳಿಸಿದರು. ಆ ಬಳಿಕ ಪರಭಾಷೆಗಳಿಂದಲೂ ಅವರಿಗೆ ಆಫರ್‌ಗಳು ಬರಲು ಆರಂಭವಾದವು.

ಸಪ್ತಮಿ ಗೌಡ ಇದೀಗ ತೆಲುಗು ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ. ಸಪ್ತಮಿ ಗೌಡ ನಟಿಸಿರುವ ಮೊದಲ ತೆಲುಗು ಸಿನಿಮಾದ ಟ್ರೈಲರ್ ಬಿಡುಗಡೆ ಆಗಿದೆ. ಸಪ್ತಮಿಗೆ ಪವರ್‌ಫುಲ್ ಪಾತ್ರವೇ ಅವರಿಗೆ ಸಿಕ್ಕಿದೆ... ಸಪ್ತಮಿ ಗೌಡ, 'ಕಾಂತಾರ' ಸಿನಿಮಾದಿಂದಾಗಿ ದೇಶದೆಲ್ಲೆಡೆ ಜನಪ್ರಿಯತೆ ಪಡೆದಿದ್ದಾರೆ. ತಮ್ಮ ನಟನೆಯಿಂದ ಸದ್ದು ಮಾಡುತ್ತಿರುವ ಸುಂದರಿ ಸಪ್ತಮಿ ಗೌಡ, ಕನ್ನಡದ ಹೊರತಾಗಿ ಪರಭಾಷೆಗಳಲ್ಲಿಯೂ ಸಹ ನಟಿಸುತ್ತಿದ್ದಾರೆ.

ಈಗಾಗಲೇ ಬಾಲಿವುಡ್ ಸಿನಿಮಾನಲ್ಲಿ ನಟಿಸಿ ಬಂದಿರುವ ನಟಿ ಸಪ್ತಮಿ ಗೌಡ, ಇದೀಗ ನೆರೆಯ ತೆಲುಗು ಚಿತ್ರರಂಗಕ್ಕೆ ಕಾಲಿರಿಸಿದ್ದಾರೆ. ಸಪ್ತಮಿ ಗೌಡ ನಟನೆಯ ಮೊದಲ ತೆಲುಗು ಸಿನಿಮಾದ ಟ್ರೈಲರ್ ಈಗಾಗಲೇ ಬಿಡುಗಡೆ ಆಗಿದ್ದು, ಮೊದಲ ಸಿನಿಮಾನಲ್ಲಿಯೇ ಪವರ್‌ಫುಲ್ ಪಾತ್ರ ಅವರಿಗೆ ದೊರೆತಿದೆ. 'ಜಯಂ' ಖ್ಯಾತಿಯ ನಿತಿನ್ ನಟನೆಯ 'ತಮ್ಮುಡು' ಸಿನಿಮಾನಲ್ಲಿ ಸಪ್ತಮಿ ಗೌಡ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ. ಸಿನಿಮಾದ ಟ್ರೈಲರ್ ನಿನ್ನೆಯಷ್ಟೆ (ಜೂನ್ 11) ಬಿಡುಗಡೆ ಆಗಿದ್ದು, ಟ್ರೈಲರ್‌ನಲ್ಲಿ ಸಪ್ತಮಿ ಗೌಡ ಅವರ ಪಾತ್ರವೇ ಸಖತ್ ಹೈಲೆಟ್ ಆಗಿದೆ.

ತಮ್ಮುಡು ಸಿನಿಮಾನಲ್ಲಿ ಸಪ್ತಮಿ ಗೌಡ, ಬುಡಕಟ್ಟು ಯುವತಿಯ ಪಾತ್ರದಲ್ಲಿ ನಟಿಸಿದ್ದಾರೆ. ಊರಿನ ಜನರನ್ನು ಕಾಪಾಡಲು ನಾಯಕನಿಗೆ ನೆರವಾಗುವ ಪಾತ್ರದಂತೆ ಟ್ರೈಲರ್ ನಲ್ಲಿ ತೋರುತ್ತಿದೆ. ಸಪ್ತಮಿ ಗೌಡ, ಆಕ್ಷನ್ ದೃಶ್ಯಗಳಲ್ಲಿ ಸಹ ನಟಿಸಿದ್ದು, ಸಪ್ತಮಿಯ ಕೆಲವು 'ಹೀರೋಯಿಕ್' ಮಾದರಿಯ ದೃಶ್ಯಗಳು ಟ್ರೈಲರ್‌ನಲ್ಲಿವೆ. ಅಕ್ಕ-ತಮ್ಮನ ನಡುವಿನ ಕತೆಯನ್ನು ಈ ಸಿನಿಮಾ ಒಳಗೊಂಡಿದೆ.



# ಪಾರ್ಟಿಯಲ್ಲಿ ಇದ್ದಿದ್ದು ಲೋಕಲ್ ಡ್ರಿಂಕ್ಸ್

**ಬರ್ತ್‌ಡೇ ಗರ್ಲ್ ಮಂಗ್ಲಿ ಸ್ಪಷ್ಟನೆ**



ಬರ್ತ್‌ಡೇ ಪಾರ್ಟಿಗೆ ಅನುಮತಿ ಬೇಕೆಂದು ನನಗೆ ಗೊತ್ತಿರಲಿಲ್ಲ ಎಂದ ಗಾಯಕಿ ತೆಲುಗು, ಕನ್ನಡ ಸೇರಿ ಸೂಪರ್ ಹಿಟ್ ಸಿನಿಮಾಗಳ ಹಾಡುಗಳಿಗೆ ಧ್ವನಿಯಾಗಿರುವ ಜನಪದ ಗಾಯಕಿ ಮಂಗ್ಲಿ ಈಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ತ್ರಿಪುರಾದ ರೆಸಾರ್ಟ್‌ವೊಂದರಲ್ಲಿ ತನ್ನ ಬರ್ತ್‌ಡೇ ಪಾರ್ಟಿಯಲ್ಲಿ ಮಾದಕ ವಸ್ತು ಪತ್ತೆಯಾಗಿತ್ತು. ಬುಧವಾರ ತಡರಾತ್ರಿ ನಡೆದ ಈ ಕಾರ್ಯಕ್ರಮದಲ್ಲಿ ಪೂರ್ವಾನುಮತಿ ಇಲ್ಲದೇ ಪಾರ್ಟಿ ನಡೆಸಲಾಗಿದೆ ಎಂಬ ಆರೋಪದ ಮೇಲೆ ಪೊಲೀಸರು ದಾಳಿ ನಡೆಸಿದ್ದರು. ಪರಿಣಾಮವಾಗಿ, ಮಂಗ್ಲಿ ಮತ್ತು ಇತರ ಹಲವರ ವಿರುದ್ಧ ಪ್ರಕರಣ ಠಾಣೆಯಲ್ಲಿ ದಾಖಲಾಗಿದೆ. ಇದೀಗ ಪ್ರಕರಣಕ್ಕೆ ಸಂಬಂಧಿಸಿದಂತೆ ಗಾಯಕಿ ಸ್ಪಷ್ಟನೆ ನೀಡಿದ್ದಾರೆ. ಈ ವಿಡಿಯೋವನ್ನು ಸೋಷಿಯಲ್ ಮೀಡಿಯಾದಲ್ಲೂ ಹಂಚಿಕೊಂಡಿದ್ದಾರೆ.

ನನ್ನ ಕುಟುಂಬದೊಂದಿಗೆ ಸಮಯ ಕಳೆಯುವ ಉದ್ದೇಶದಿಂದ ನಾನು ಬರ್ತ್‌ಡೇ ಪಾರ್ಟಿ ಆಯೋಜಿಸಿದ್ದೆ. ಇದು ನನ್ನ ಪೋಷಕರ ಇಚ್ಛೆಯಂತೆ ನಡೆಯಿತು. ಈ ಪಾರ್ಟಿಯಲ್ಲಿ ನನ್ನ ಕುಟುಂಬದ ಎಲ್ಲಾ ಸದಸ್ಯರು, ಸಂಬಂಧಿಕರು, ಸ್ನೇಹಿತರೂ ಹಾಜರಿದ್ರು. ಡ್ರಿಂಗ್ಸ್ ಮತ್ತು ಸಾಂಗ್ ವ್ಯವಸ್ಥೆ ಕೂಡ ಮಾಡಲಾಗಿತ್ತು. ಆದ್ರೆ ಇವುಗಳಿಗೆ ಅನುಮತಿ ಅಗತ್ಯವಿದೆ ಅನ್ನೋದು ನನಗೆ ಗೊತ್ತಿರಲಿಲ್ಲ. ರೆಸಾರ್ಟ್‌ನಲ್ಲಿ ಹಠಾತ್ತನೆ ಪಾರ್ಟಿ ಮಾಡಲಾಗಿತ್ತು. ಯಾರಾದ್ರೂ ನನಗೆ ಮಾಹಿತಿ ಕೊಟ್ಟಿದ್ದರೆ ಖಂಡಿತವಾಗಿ ಬೇಕಾದ ಅನುಮತಿ ಪಡೆದುಕೊಳ್ಳುತ್ತಿದೆ. ಯಾರೊಬ್ಬರೂ ಅನುಮತಿ ಅಗತ್ಯ ಅಂತ ನನಗೆ ಹೇಳಲಿಲ್ಲ. ನಾನು ತಿಳಿದೂ ತಿಳಿದೂ ಯಾವುದೇ ತಪ್ಪು ಮಾಡಿಲ್ಲ ಎಂದು ಹೇಳಿದ್ದಾರೆ. ಅಲ್ಲದೇ ರೆಸಾರ್ಟ್‌ನಲ್ಲಿ ಸ್ಥಳೀಯ ಮದ್ಯ (ಲೋಕಲ್ ಡ್ರಿಂಕ್ಸ್) ಮಾತ್ರ ಇತ್ತು. ಬೇರೆ ಯಾವುದೇ ಮಾದಕ ವಸ್ತುಗಳು ಬಳಸಿರಲಿಲ್ಲ ಅಥವಾ ಕಂಡುಬಂದಿಲ್ಲ. ಪೊಲೀಸರು ಶೋಧ ನಡೆಸಿದಾಗಲೂ ಯಾವುದೇ ಅಕ್ರಮ ವಸ್ತುಗಳು ಪತ್ತೆಯಾಗಿಲ್ಲ. ಗಾಂಜಾ ಸೇವಿಸಿದ್ದ ವ್ಯಕ್ತಿ ಬೇರೆಡೆ ಮತ್ತು ಬೇರೆ ಸಮಯದಲ್ಲಿ ಸೇವಿಸಿದ್ದಾನೆ ಅನ್ನೋದನ್ನ ಪೊಲೀಸರೇ ಖಚಿತಪಡಿಸಿದ್ದಾರೆ. ನಾವು ಅಧಿಕಾರಿಗಳಿಗೆ ಸಂಪೂರ್ಣ ಸಹಕರಿಸುತ್ತಿದ್ದೇವೆ. ತಿಳಿದೂ ತಿಳಿದೂ ಅಂತಹ ಕೆಲಸ ಮಾಡ್ತೀನಾ ನನ್ನ ಹೆತ್ತವರ ಮುಂದೆ ಆ ರೀತಿ ನಡೆದುಕೊಳ್ಳಲು ಇಚ್ಛಿಸುತ್ತೀನಾ ದಯವಿಟ್ಟು ಸಾಕ್ಷ್ಯಗಳಿಲ್ಲದೇ ನನ್ನ ವಿರುದ್ಧ ಆಧಾರ ರಹಿತ ಆರೋಪಗಳನ್ನು ಮಾಡಬೇಡಿ ಎಂದು ಮನವಿ ಮಾಡಿದ್ದಾರೆ.

# ಕಾಂತಾರ ಚಾಪ್ಟರ್-1 ಕಲಾವಿದ ಸಾವು

**ಈಗಾಗಲೇ 3ನೇ ಸಾವು**



ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸುತ್ತಿರುವ ಬಹುನಿರೀಕ್ಷಿತ ಚಿತ್ರ 'ಕಾಂತಾರ ಚಾಪ್ಟರ್-1' ಸಹ ಕಲಾವಿದ ವಿಜು ವಿ.ಕೆ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ದೈವದ ಉತ್ಸವ ಚಿತ್ರೀಕರಣಕ್ಕೂ ಮುನ್ನವೇ ಸಹ ಕಲಾವಿದ ಸಾವನ್ನಪ್ಪಿದ್ದು ಕಾಂತಾರ ಚಿತ್ರತಂಡವನ್ನು ಚಿಂತೆಗೀಡಾಗುವಂತೆ ಮಾಡಿದೆ. ಹೌದು ತೀರ್ಥಹಳ್ಳಿ ಬ್ಯಾಕ್ ವಾಟರ್‌ನಲ್ಲಿ ಚಿತ್ರೀಕರಣಕ್ಕೆ ಸಿದ್ಧತೆ ನಡೆದಿತ್ತು. ದೈವದ ನೇಮೋತ್ಸವದ ಚಿತ್ರೀಕರಣಕ್ಕೆ ಕಾಂತಾರ ಚಿತ್ರತಂಡ ಸಕಲ ಸಿದ್ಧತೆ ಮಾಡಿಕೊಂಡಿತ್ತು. ದೈವದ ಉತ್ಸವ ಸನ್ನಿವೇಶ ಚಿತ್ರೀಕರಣಕ್ಕಾಗಿ ಬ್ಯಾಕ್ ವಾಟರ್‌ನಲ್ಲಿ ಅದ್ದೂರಿ ಸೆಟ್ ಕೂಡ ಹಾಕಲಾಗಿತ್ತು. ಇದೇ ಚಿತ್ರೀಕರಣದಲ್ಲಿ ಕೇರಳದ ನಟ ಬಿಜು ವಿಕೆ ಭಾಗಿಯಾಗಬೇಕಿತ್ತು, ದುರಾದೃಷ್ಟವಶಾತ್ ದೈವದ ಉತ್ಸವ ಚಿತ್ರೀಕರಣಕ್ಕೂ ಮುನ್ನ ಸಹ ಕಲಾವಿದ ಸಾವನ್ನಪ್ಪಿದ್ದಾರೆ. ಕೇರಳದ ತ್ರಿಶೂರ್ ಮೂಲದ ಮಿಮಿಕ್ರಿ ಕಲಾವಿದ ವಿಜು ಕಾಂತರ ಚಲನಚಿತ್ರಕ್ಕಾಗಿ ಆಗುಂಬೆ ಸಮೀಪದ ಯಡೂರಿನ ಹೋಂ ಸ್ಟೇ ಒಂದರಲ್ಲಿ ತಂಗಿದ್ದರು. ಬುಧವಾರ ರಾತ್ರಿ ಏಕಾಏಕಿ ವಿಜು ಅವರಿಗೆ ಎದೆ ನೋವು ಕಾಣಿಸಿಕೊಂಡಿದೆ.

ತೀರ್ಥಹಳ್ಳಿಯ ಆಸ್ಪತ್ರೆಗೆ ರವಾನಿಸುವ ವೇಳೆ ಮಾರ್ಗ ಮಧ್ಯೆ ವಿಜು ಕೊನೆಯುಸಿರೆಳೆದಿದ್ದಾರೆ. ಸದ್ಯ ವಿಜು ಅವರ ಮೃತದೇಹ ತೀರ್ಥಹಳ್ಳಿಯ ಜೆ.ಸಿ ಆಸ್ಪತ್ರೆಯಲ್ಲಿರಿಸಲಾಗಿದೆ. ಪೊಲೀಸರು ಕೇರಳದಿಂದ ವಿಜು ಕುಟುಂಬಸ್ಥರ ಆಗಮನಕ್ಕೆ ಕಾಯುತ್ತಿದ್ದಾರೆ.

ಸಿನಿ ವಾಹಿನಿ

# ಮತ್ತೆ ದರ್ಶನ್ ಜೊತೆ ಮಾಂಡ್ರೆ ನಟನೆ

**ಬರೋಬ್ಬರಿ 17 ವರ್ಷಗಳ ಬಳಿಕ**


ದರ್ಶನ್ ನಟನೆಯ 'ದಿ ಡೆವಿಲ್' ಸಿನಿಮಾದ ಚಿತ್ರೀಕರಣ ಬಹುತೇಕ ಪೂರ್ಣವಾಗಿದೆ. ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳು ಭರದಿಂದ ಸಾಗಿವೆ. ಸಿನಿಮಾನಲ್ಲಿ ರಚನಾ ರೈ ನಾಯಕಿಯಾಗಿ ನಟಿಸಿದ್ದಾರೆ. ಅವರ ಜೊತೆಗೆ ಕನ್ನಡದ ಜನಪ್ರಿಯ ನಾಯಕ ನಟಿಯೊಬ್ಬರು ಬರೋಬ್ಬರಿ 17 ವರ್ಷಗಳ ಬಳಿಕ ನಟ ದರ್ಶನ್ ಜೊತೆಗೆ ನಟಿಸುತ್ತಿದ್ದಾರೆ. 'ಡೆವಿಲ್' ಸಿನಿಮಾನಲ್ಲಿ ಅವರದ್ದು ಬಲು ವಿಶೇಷವಾದ ಪಾತ್ರ. ದರ್ಶನ್ ನಟನೆಯ 'ದಿ ಡೆವಿಲ್' ಸಿನಿಮಾದ ಚಿತ್ರೀಕರಣ ಇನ್ನೇನು ಮುಗಿಯುವ ಹಂತದಲ್ಲಿದೆ. ಹಲವಾರು ಅಡೆ-ತಡೆಗಳ ಬಳಿಕ ಕೊನೆಗೂ ಸಿನಿಮಾದ ಚಿತ್ರೀಕರಣ ಪೂರ್ಣವಾಗುತ್ತಿದೆ. ಸಿನಿಮಾನಲ್ಲಿ ದರ್ಶನ್ ಜೊತೆಗೆ ಹಲವು ಹೊಸ, ಹಳೆಯ ಕಲಾವಿದರು ನಟಿಸಿದ್ದಾರೆ. ಸಿನಿಮಾನಲ್ಲಿ ರಚನಾ ರೈ ನಾಯಕಿಯಾಗಿ ನಟಿಸಿದ್ದಾರೆ. ಅಂದಹಾಗೆ ಇದೇ ಸಿನಿಮಾನಲ್ಲಿ ಮತ್ತೊಬ್ಬ ಜನಪ್ರಿಯ ನಾಯಕಿಯೂ ನಟಿಸಿದ್ದಾರೆ. ಕನ್ನಡದ ಈ ನಟಿ ಬರೋಬ್ಬರಿ 17 ವರ್ಷಗಳ ಬಳಿಕ ದರ್ಶನ್ ಜೊತೆಗೆ ಸಿನಿಮಾನಲ್ಲಿ ನಟಿಸುತ್ತಿದ್ದಾರೆ. ಬೆಂಗಳೂರಿನ ಚೆಲುವೆ, ಬಹುಭಾಷಾ ನಟಿ ಶರ್ಮಿಳಾ ಮಾಂಡ್ರೆ, ದರ್ಶನ್ ನಟನೆಯ 'ದಿ ಡೆವಿಲ್' ಸಿನಿಮಾನಲ್ಲಿ ನಟಿಸಿದ್ದಾರೆ.

# ಶೂಟಿಂಗ್ ಸೆಟ್‌ನಲ್ಲಿ ನೀರಿನ ಟ್ಯಾಂಕರ್ ಸ್ಫೋಟ

ತೆಲುಗಿನ 'ದಿ ಇಂಡಿಯಾ ಹೌಸ್' ಸಿನಿಮಾ ಶೂಟಿಂಗ್ ಸೆಟ್‌ನಲ್ಲಿ ಭಾರೀ ಅವಘಡ ಸಂಭವಿಸಿದೆ. ಚಿತ್ರೀಕರಣದ ವೇಳೆ ನೀರಿನ ಟ್ಯಾಂಕರ್ ಸ್ಫೋಟಗೊಂಡು, ಪ್ರವಾಹ ರೀತಿಯಲ್ಲಿ ನೀರು ನುಗ್ಗಿದ ಪರಿಣಾಮ ಹಲವರು ಗಾಯಗೊಂಡಿದ್ದಾರೆ.

ನೀರಿನ ದೊಡ್ಡ ಟ್ಯಾಂಕರ್ ಒಡೆದು ಪ್ರವಾಹ ಸೃಷ್ಟಿಯಾದ ಪರಿಣಾಮ ಸಹಾಯಕ ಕ್ಯಾಮೆರಾಮೆನ್ ಮತ್ತು ಇನ್ನೂ ಕೆಲವು ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ವರದಿಗಳು ತಿಳಿಸಿವೆ.

ಈ ಕುರಿತ ವಿಡಿಯೋ ಮತ್ತು ಫೋಟೋಗಳು ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿವೆ. ಶಂಷಾಬಾದ್ ಬಳಿ ಸಿನಿಮಾ ಶೂಟಿಂಗ್‌ಗಾಗಿ ದೊಡ್ಡ ನೀರಿನ ಟ್ಯಾಂಕರ್ ನಿರ್ಮಾಣ ಮಾಡಲಾಗಿತ್ತು. ಭಾರೀ ಒತ್ತಡದಿಂದಾಗಿ ನೀರಿನ ಟ್ಯಾಂಕರ್ ಸ್ಫೋಟಗೊಂಡು ಪ್ರವಾಹವೇ ಸೃಷ್ಟಿಯಾಯ್ತು. ಭಾರೀ ಪ್ರಮಾಣದ ನೀರಿನ ವೇಗಕ್ಕೆ ಸಿಕ್ಕಿ ಕ್ಯಾಮೆರಾಮೆನ್, ಇತರ ಸಿಬ್ಬಂದಿ ಗಾಯಗೊಂಡಿದ್ದಾರೆ.



# ನ್ಯೂಜಿಲೆಂಡ್ ವಿರುದ್ಧ 8 ಪಂದ್ಯಗಳನ್ನಾಡಲಿದೆ ಟೀಂ ಇಂಡಿಯಾ



**ಟೀಂ ಇಂಡಿಯಾಕ್ಕೂ ಉತ್ತಮ ಅವಕಾಶ**

ಮುಂದಿನ ವರ್ಷ ಅಂದರೆ 2026 ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿ ನಡೆಯಲಿದೆ. ಈ ಪಂದ್ಯಾವಳಿ ಹಾಲಿ ಚಾಂಪಿಯನ್ ಟೀಂ ಇಂಡಿಯಾಕ್ಕೆ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಭಾರತ ತಂಡಕ್ಕೆ ತನ್ನ ಹಾಲಿ ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳುವ ಒತ್ತಡದ ಜೊತೆಗೆ ಈ ಪಂದ್ಯಾವಳಿಯ ಆತಿಥ್ಯದ ಜವಾಬ್ದಾರಿಯನ್ನು ಬಿಸಿಸಿಐ ಹೊತ್ತಿದೆ. ಅಂದರೆ ಈ ಪಂದ್ಯಾವಳಿ ಭಾರತದಲ್ಲಿ ನಡೆಯಲಿದೆ. ಹೀಗಾಗಿ ಟೀಂ ಇಂಡಿಯಾ ಈ ಚುಟುಕು ವಿಶ್ವಸಮರಕ್ಕಾಗಿ ವಿಭಿನ್ನ ಯೋಜನೆಗಳನ್ನು ಹಾಕಿಕೊಂಡಿದ್ದು, ಟಿ20 ವಿಶ್ವಕಪ್ ಪ್ರಾರಂಭವಾಗುವ ಮೊದಲು ನ್ಯೂಜಿಲೆಂಡ್ ವಿರುದ್ಧ ಬಿಳಿ ಚೆಂಡಿನ ಸರಣಿಯನ್ನು ಆಡಲಿದೆ.

**ನ್ಯೂಜಿಲೆಂಡ್ ತಂಡದ ಭಾರತ ಪ್ರವಾಸ:** ನ್ಯೂಜಿಲೆಂಡ್ ತಂಡವು ವೈಟ್ ಬಾಲ್ ಸರಣಿಗಾಗಿ ಭಾರತ ಪ್ರವಾಸ ಕೈಗೊಳ್ಳುವ ಸಾಧ್ಯತೆ ಇದೆ ಎಂಬ ವರದಿಗಳಿವೆ. ಈ ಸರಣಿಯು ಜನವರಿ 11 ರಿಂದ ಜನವರಿ 30 ರವರೆಗೆ ನಡೆಯಲಿದ್ದು, ಮೂರು ಏಕದಿನ ಪಂದ್ಯಗಳು ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ. ಟೀಂ ಇಂಡಿಯಾಗೆ ಒಳ್ಳೆಯ ವಿಷಯವೆಂದರೆ ಈ ಸರಣಿಯು ಐಸಿಸಿ ಟಿ20 ವಿಶ್ವಕಪ್ 2026 ಕ್ಕೂ ಮೊದಲು ನಡೆಯಲಿದೆ. ಐಸಿಸಿ ಟಿ20 ವಿಶ್ವಕಪ್ 2026 ಟೂರ್ನಮೆಂಟ್ ಫೆಬ್ರವರಿ 8, 2026 ರಿಂದ ಪ್ರಾರಂಭವಾಗಲಿದ್ದು, ಅದರ ಫೈನಲ್ ಪಂದ್ಯ ಮಾರ್ಚ್ 8 ರಂದು ನಡೆಯಲಿದೆ. ಈ ಟೂರ್ನಮೆಂಟ್‌ನಲ್ಲಿ ಒಟ್ಟು 20 ತಂಡಗಳು ಭಾಗವಹಿಸಲಿವೆ. ನ್ಯೂಜಿಲೆಂಡ್ ತಂಡದ ಬಗ್ಗೆ ಹೇಳುವುದಾದರೆ, 2026 ರ ಟಿ20 ವಿಶ್ವಕಪ್‌ಗೆ ಮೊದಲು ಭಾರತದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಅವಕಾಶವೂ ಅವರಿಗೆ ಸಿಗಲಿದೆ. ಕಿವೀಸ್ ತಂಡವು ಭಾರತದ ವಿರುದ್ಧದ ಈ ಸರಣಿಯಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿರುವ ಅನೇಕ ಬಲಿಷ್ಠ ಆಟಗಾರರನ್ನು ಹೊಂದಿದೆ.

ಟಿ 20 ಸರಣಿಯ ಮೇಲೆ ಸಂಪೂರ್ಣ ಗಮನವಿದ್ದರೂ, ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಆಡುತ್ತಿರುವುದನ್ನು ಕಾಣಬಹುದಾದ್ದರಿಂದ ಏಕದಿನ ಸರಣಿಯ ಮೇಲೂ ಗಮನವಿರುತ್ತದೆ. ಇತ್ತೀಚೆಗೆ ಮುಕ್ತಾಯಗೊಂಡ ಐಪಿಎಲ್ 2025 ಟೂರ್ನಮೆಂಟ್‌ನಲ್ಲಿ, ಅನೇಕ ಭಾರತೀಯ ಯುವ ಆಟಗಾರರು ಅದ್ಭುತ ಪ್ರದರ್ಶನ ನೀಡಿ ಕ್ರಿಕೆಟ್ ಅಭಿಮಾನಿಗಳ ಹೃದಯ ಗೆದ್ದರು. ಈ ಆಟಗಾರರಲ್ಲಿ ಕೆಲವರನ್ನು ಟಿ20 ವಿಶ್ವಕಪ್ 2026 ಟೂರ್ನಮೆಂಟ್‌ಗಾಗಿ ಭಾರತ ತಂಡದಲ್ಲಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

# ಸಚಿನ್- ಕೊಹ್ಲಿಯನ್ನು ನೋಡಿ ಕಲಿ ಎಂದ ಫ್ಯಾನ್ಸ್

**ವಿವಾದ ಹುಟ್ಟಿಸಿದ ಗಿಲ್ ಬ್ಯಾಟ್**

ಭಾರತ ಟೆಸ್ಟ್ ತಂಡದ ನಾಯಕ ಶುಭ್ಮನ್ ಗಿಲ್ ಅವರ ಬ್ಯಾಟ್‌ನಲ್ಲಿ ಪ್ರಿನ್ಸ್ ಎಂಬ ಹೆಸರು ಮುದ್ರಿಸಿರುವುದು ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಸಚಿನ್ ಮತ್ತು ಕೊಹ್ಲಿ ಅವರಂತೆ ತಮ್ಮ ಬಿರುದನ್ನು ಬ್ಯಾಟ್‌ನಲ್ಲಿ ಪ್ರದರ್ಶಿಸದಿರುವಂತೆ ಅಭಿಮಾನಿಗಳು ಗಿಲ್ ಅವರನ್ನು ಟೀಕಿಸಿದ್ದಾರೆ. ರೋಹಿತ್ ಶರ್ಮಾ ಅವರ ನಿವೃತ್ತಿಯ ಬಳಿಕ ಭಾರತ ಟೆಸ್ಟ್ ತಂಡದ ನಾಯಕತ್ವದ ಜವಾಬ್ದಾರಿ ಹೊತ್ತಿರುವ ಯುವ ಬ್ಯಾಟ್ಸ್‌ಮನ್ ಶುಭ್‌ಮನ್ ಗಿಲ್‌ಗೆ ಇಂಗ್ಲೆಂಡ್ ಪ್ರವಾಸ ಬಹಳ ಮುಖ್ಯವಾಗಿದೆ.

ಏಕೆಂದರೆ ಈ ಪ್ರವಾಸದಲ್ಲಿ ಗಿಲ್, ಯುವ ತಂಡವನ್ನು ಕಟ್ಟಿಕೊಂಡು ಬಲಿಷ್ಠ ಆಂಗ್ಲರನ್ನು ಅವರದ್ದೇ ನೆಲದಲ್ಲಿ ಎದುರಿಸಬೇಕಿದೆ. ರೋಹಿತ್, ಕೊಹ್ಲಿ, ಅಶ್ವಿನ್ ಅನುಪಸ್ಥಿತಿಯಲ್ಲಿ ಗಿಲ್ ಯಾವ ರೀತಿಯಾಗಿ ತಂಡವನ್ನು ಮುನ್ನಡೆಸುತ್ತಾರೆ ಎಂಬುದರ ಮೇಲೆ ಕ್ರಿಕೆಟ್ ಪಂಡಿತರ ಕಣ್ಣಿದೆ. ಆದರೆ ಈ ಸರಣಿಯ ಆರಂಭಕ್ಕೂ ಮುನ್ನ, ಶುಭ್‌ಮನ್ ಗಿಲ್ ಕ್ರಿಕೆಟ್ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಇದಕ್ಕೆ ಕಾರಣ ಶುಭ್‌ಮನ್ ಗಿಲ್ ಅವರ ಬ್ಯಾಟ್ ಮೇಲಿರುವ ಅದೊಂದು ಹೆಸರು.

**ಗಿಲ್ ನಡೆಗೆ ಫ್ಯಾನ್ಸ್ ಬೇಸರ;** ವಾಸ್ತವವಾಗಿ ಶುಭ್‌ಮನ್ ಗಿಲ್ ಮಾರ್ಚ್ 2025 ರಲ್ಲಿಯೇ ದೇಶದ ಪ್ರಸಿದ್ಧ ಕಂಪನಿ ಎಂಆರ್‌ಎಫ್ ಜೊತೆಗೆ ಬ್ಯಾಟ್ ಪ್ರಾಯೋಜಕತ್ವ ಒಪ್ಪಂದಕ್ಕೆ ಸಹಿ ಹಾಕಿದರು. ಈ ಕಂಪನಿಯು ಕಳೆದ ಹಲವಾರು ವರ್ಷಗಳಿಂದ ಭಾರತದ ಸ್ಟಾರ್ ಆಟಗಾರರೊಂದಿಗೆ ಪ್ರಾಯೋಜಕತ್ವದ ಒಪ್ಪಂದಗಳನ್ನು ಮಾಡಿಕೊಂಡು ಬರುತ್ತಿದೆ. ಇದರಲ್ಲಿ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿಯಂತಹ ಆಟಗಾರರು ಸೇರಿದ್ದಾರೆ. ಇದೀಗ ಇವರುಗಳ ಪಟ್ಟಿಗೆ ಭಾರತ ಟೆಸ್ಟ್ ತಂಡದ ನೂತನ ನಾಯಕ ಶುಭ್‌ಮನ್ ಗಿಲ್ ಕೂಡ ಸೇರಿದ್ದು, ಇತ್ತೀಚೆಗಷ್ಟೇ ತಮ್ಮ ಬ್ಯಾಟ್ ಹಿಡಿದು ಫೋಟೋಗೆ ಪೋಸ್ ನೀಡಿದ್ದರು. ಇದೀಗ ಗಿಲ್ ತಮ್ಮ ಬ್ಯಾಟ್ ಮೇಲೆ 'ಪ್ರಿನ್ಸ್' ಎಂದು ಬರೆಯಿಸಿಕೊಂಡಿರುವುದು ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದೆ.




**ದಿಗ್ಗಜರನ್ನು ನೋಡಿ ಕಲಿ:** ಅಷ್ಟಕ್ಕೂ ಗಿಲ್ ತಮ್ಮ ಬ್ಯಾಟ್ ಮೇಲೆ ಪ್ರಿನ್ಸ್ ಎಂದು ಬೇರೆ ಯಾರದ್ದೋ ಹೆಸರನ್ನು ಬರೆಸಿಕೊಂಡಿಲ್ಲ. ಬದಲಿಗೆ ಅವರನ್ನು ಭಾರತ ಕ್ರಿಕೆಟ್‌ನ ಪ್ರಿನ್ಸ್ ಎಂದು ಕರೆಯಲಾಗುತ್ತದೆ. ಅಭಿಮಾನಿಗಳೇ ಗಿಲ್ ಅವರಿಗೆ ಈ ಬಿರುದು ನೀಡಿದ್ದಾರೆ. ಆದರೆ ಈ ಬಿರುದನ್ನು ನೀಡಿದ ಅಭಿಮಾನಿಗಳಿಗೆ ಗಿಲ್ ಅವರ ಈ ನಡೆ ಇಷ್ಟವಾಗಿಲ್ಲ.

ಅಭಿಮಾನಿಗಳು ಅವರನ್ನು ಕ್ರಿಕೆಟ್ ದಂತಕಥೆಗಳಾದ ಸಚಿನ್ ತೆಂಡೂಲ್ಕರ್ ಮತ್ತು ವಿರಾಟ್ ಕೊಹ್ಲಿ ಅವರೊಂದಿಗೆ ಹೋಲಿಸುವ ಮೂಲಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಏಕೆಂದರೆ ಸಚಿನ್ ತೆಂಡೂಲ್ಕರ್ ಅವರಿಗೆ ಕ್ರಿಕೆಟ್ ದೇವರು ಎಂದು ಹಾಗೂ ವಿರಾಟ್ ಕೊಹ್ಲಿಗೆ ಕಿಂಗ್ ಎಂದು ಬಿರುದು ನೀಡಿದ್ದರಾದರೂ ಈ ಇಬ್ಬರು ಆಟಗಾರರು ಎಂದಿಗೂ ತಮ್ಮ ಬ್ಯಾಟ್‌ಗಳ ಮೇಲೆ ಅಂತಹ ಬಿರುದುಗಳನ್ನು ಬರೆಸಿಕೊಂಡಿರಲಿಲ್ಲ. ಇದನ್ನು ಗಿಲ್‌ಗೆ ನೆನಪಿಸಿರುವ ಫ್ಯಾನ್ಸ್, ಸಚಿನ್ ಎಂದಿಗೂ ತಮ್ಮ ಬ್ಯಾಟ್ ಮೇಲೆ ಗಾಡ್ ಆಫ್ ಕ್ರಿಕೆಟ್ ಎಂದು ಬರೆಸಿಕೊಳ್ಳಲಿಲ್ಲ. ಇತ್ತ ವಿರಾಟ್ ಕೊಹ್ಲಿ ಕೂಡ ತಮ್ಮ ಬ್ಯಾಟ್ ಮೇಲೆ ಕಿಂಗ್ ಎಂದು ಬರೆಸಿಕೊಂಡಿರಲಿಲ್ಲ. ಇದು ಆಟದ ಬಗೆಗಿನ ಅವರ ನಮ್ರತೆ ಮತ್ತು ಸಮರ್ಪಣೆಯನ್ನು ತೋರಿಸುತ್ತದೆ ಎಂದು ಫ್ಯಾನ್ಸ್ ಸೋಶಿಯಲ್ ಮೀಡಿಯಾದಲ್ಲಿ ಗಿಲ್‌ರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

# ಟೆಸ್ಟ್ ಸರಣಿ ಆರಂಭಕ್ಕೂ ಮುನ್ನ ರೋಹಿತ್, ಕೊಹ್ಲಿಯನ್ನು ನೆನಪಿಸಿಕೊಂಡ ಗಂಭೀರ್

ಜೂನ್ 20 ರಿಂದ ಟೀಂ ಇಂಡಿಯಾದ ಇಂಗ್ಲೆಂಡ್ ಪ್ರವಾಸ ಆರಂಭವಾಗಲಿದೆ. ಇದಕ್ಕಾಗಿ ಭಾರತ ಯುವ ತಂಡ ಕಠಿಣ ತಯಾರಿ ನಡೆಸುತ್ತಿದೆ.

ಸರಣಿಗೆ ಆಯ್ಕೆಯಾದ ಎಲ್ಲಾ ಆಟಗಾರರು ಈಗಾಗಲೇ ತಂಡವನ್ನು ಸೇರಿಕೊಂಡಿದ್ದಾರೆ. ಇದೇ ವೇಳೆ ಹೊಸ ಆಟಗಾರರನ್ನು ತಂಡಕ್ಕೆ ಸ್ವಾಗತಿಸಿದ ಮುಖ್ಯ ಕೋಚ್ ಗೌತಮ್ ಗಂಭೀರ್, ಇತ್ತೀಚೆಗೆ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾದ ರೋಹಿತ್ ಶರ್ಮಾ-ವಿರಾಟ್ ಕೊಹ್ಲಿ ಅವರನ್ನು ಸಹ ಈ ಸಮಯದಲ್ಲಿ ನೆನಪಿಸಿಕೊಂಡಿದ್ದಾರೆ. ಹಾಗೆಯೇ ಗಂಭೀರ್, ಎಲ್ಲಾ ಆಟಗಾರರಲ್ಲಿ ಉತ್ಸಾಹ ತುಂಬುವ ಭಾಷಣ ಮಾಡಿದ ವಿಡಿಯೋವನ್ನು ಇದೀಗ ಬಿಸಿಸಿಐ ತನ್ನ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದೆ.



**ಕರುಣ್ ಹೊಗಳಿದ ಗಂಭೀರ್**

**ರೋಹಿತ್, ವಿರಾಟ್‌ರನ್ನು ನೆನಪಿಸಿಕೊಂಡ ಗಂಭೀರ್:** ಇಂಗ್ಲೆಂಡ್ ವಿರುದ್ಧದ ಮುಂಬರುವ ಟೆಸ್ಟ್ ಸರಣಿಗೂ ಮುನ್ನ ಗೌತಮ್ ಗಂಭೀರ್ ತಮ್ಮ ಭಾಷಣದಲ್ಲಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರನ್ನು ಪ್ರಸ್ತಾಪಿಸುವ ಮೂಲಕ ಎಲ್ಲಾರ ಗಮನ ಸೆಳೆದಿದ್ದಾರೆ.

ಇದು ಈಗ ಚರ್ಚೆಯ ಕೇಂದ್ರಬಿಂದುವಾಗಿದೆ. ತಮ್ಮ ಭಾಷಣದಲ್ಲಿ ತಂಡದ ಹೊಸ ಆರಂಭ ಮತ್ತು ಯುವ ಆಟಗಾರರ ಜವಾಬ್ದಾರಿಯ ಮೇಲೆ ಹೆಚ್ಚು ಒತ್ತು ನೀಡಿದ ಗಂಭೀರ್, ತಂಡದೊಳಗಿನ ಹೊಸ ಶಕ್ತಿ ಮತ್ತು ಬದ್ಧತೆಯ ಬಗ್ಗೆ ಮಾತನಾಡಿದರು. ಇದೇ ವೇಳೆ, ಇತ್ತೀಚೆಗೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ, ಇದು ಭಾರತೀಯ ಕ್ರಿಕೆಟ್‌ನಲ್ಲಿ ದೊಡ್ಡ ಬದಲಾವಣೆಗೆ ನಾಂದಿ ಹಾಡಿದೆ.

ಅದೇ ಸಮಯದಲ್ಲಿ, ಆರ್. ಅಶ್ವಿನ್ ಕೂಡ ನಿವೃತ್ತರಾಗಿದ್ದಾರೆ. ತಂಡದ ಹಿರಿಯ ಆಟಗಾರರ ನಿರ್ಗಮನದಿಂದ ಉಂಟಾದ ಶೂನ್ಯವನ್ನು ತುಂಬುವ ಜವಾಬ್ದಾರಿ ಈಗ ಶುಭ್‌ಮನ್ ಗಿಲ್ ಮತ್ತು ಇತರ ಉದಯೋನ್ಮುಖ ಯುವ ಆಟಗಾರರ ಮೇಲಿದೆ ಎಂದು ಗಂಭೀರ್ ಹೇಳಿದ್ದಾರೆ.

'ಈ ಪ್ರವಾಸವನ್ನು ನಾವು ಎರಡು ರೀತಿಯಲ್ಲಿ ನೋಡಬಹುದು. ಮೊದಲನೆಯದ್ದು, ನಮ್ಮ ಮೂವರು ಅತ್ಯಂತ ಅನುಭವಿ ಆಟಗಾರರು ಈಗ ತಂಡದಲ್ಲಿ ಇಲ್ಲ.

ಅವರ ಅನುಪಸ್ಥಿತಿಯಲ್ಲಿ ನಮಗೆ ದೇಶಕ್ಕಾಗಿ ಏನಾದರೂ ಮಾಡಲು ಈ ಉತ್ತಮ ಅವಕಾಶ ಸಿಕ್ಕಿದೆ. ತಂಡದ ಉತ್ಸಾಹವನ್ನು ಬಲಪಡಿಸುವ ಮತ್ತು ಇಂಗ್ಲೆಂಡ್‌ನಂತಹ ಕಠಿಣ ಪ್ರವಾಸಕ್ಕೆ ಸಿದ್ಧರಾಗುವ ನಿಟ್ಟಿನಲ್ಲಿ ಹಿರಿಯ ಆಟಗಾರರ ನಿಲುವನ್ನು ಒಂದು ಪ್ರಮುಖ ಹೆಜ್ಜೆ ಎಂದು ಪರಿಗಣಿಸಲಾಗುತ್ತಿದೆ' ಎಂದು ಗಂಭೀರ್ ಹೇಳಿದ್ದಾರೆ.

# ಐಪಿಎಲ್‌ನಲ್ಲಿ ವಿಫಲ ಕ್ರಿಕೆಟ್‌ನಿಂದ ದೂರ ಸರಿದ ರಶೀದ್ ಖಾನ್



ಟಿ20 ಕ್ರಿಕೆಟ್‌ನ ಶ್ರೇಷ್ಠ ಬೌಲರ್‌ಗಳಲ್ಲಿ ಒಬ್ಬರೆನಿಸಿಕೊಂಡಿರುವ ಅಫ್ಘಾನಿಸ್ತಾನದ ರಶೀದ್ ಖಾನ್ ಬಿಗ್ ಬ್ರೇಕ್ ತೆಗೆದುಕೊಂಡಿದ್ದಾರೆ. ಅದು ಕೂಡ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯಿಂದ ಹೊರಗುಳಿಯುವ ಮೂಲಕ. ಅಂದರೆ ಈ ಬಾರಿ ಎಂಎಲ್‌ಸಿ ಲೀಗ್‌ನಲ್ಲಿ ರಶೀದ್ ಖಾನ್ ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯ ಎಂಐ ನ್ಯೂಯಾರ್ಕ್ ತಂಡದ ಪರ ಕಣಕ್ಕಿಳಿಯಬೇಕಿತ್ತು.

ಆದರೆ ಇದೀಗ ವಿಶ್ರಾಂತಿಯ ಕಾರಣ ಅವರು ಟೂರ್ನಿಯಿಂದ ಹೊರಗುಳಿಯಲು ನಿರ್ಧರಿಸಿದ್ದಾರೆ. ಮೇಜರ್ ಲೀಗ್ ಕ್ರಿಕೆಟ್ 2024 ರಲ್ಲಿ ಎಂಐ ನ್ಯೂಯಾರ್ಕ್ ಪರ ಅತ್ಯುತ್ತಮ ಪ್ರದರ್ಶನ ನೀಡಿದ ಬೌಲರ್ ರಶೀದ್ ಖಾನ್. ಕಳೆದ ವರ್ಷ 6.15 ರ ಎಕಾನಮಿ ರೇಟ್‌ನಲ್ಲಿ 10 ವಿಕೆಟ್ ಕಬಳಿಸಿ ಮಿಂಚಿದ್ದರು. ಆದರೆ ಈ ಬಾರಿ ವಿರಾಮದ ಸಲುವಾಗಿ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿಲ್ಲ ಎಂದು ರಶೀದ್ ಖಾನ್ ಎಂಐ ನ್ಯೂಯಾರ್ಕ್ ಫ್ರಾಂಚೈಸಿಗೆ ತಿಳಿಸಿದೆ. ಸದ್ಯ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯಿಂದ ಹಿಂದೆ ಸರಿದಿರುವ ರಶೀದ್ ಖಾನ್, ಎಷ್ಟು ಸಮಯದವರೆಗೆ ವಿರಾಮ ತೆಗೆದುಕೊಂಡಿದ್ದಾರೆ ಎಂಬುದರ ಕುರಿತು ಯಾವುದೇ ಮಾಹಿತಿ ಇಲ್ಲ. ಆದರೆ ಸುದೀರ್ಘ ವೃತ್ತಿಜೀವನ ವನ್ನು ಗಮನದಲ್ಲಿಟ್ಟುಕೊಂಡು ಅವರು ಈ ವಿರಾಮ ತೆಗೆದುಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಈ ಮೂಲಕ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಆದ್ಯತೆ ನೀಡಲು ಅವರು ನಿರ್ಧರಿಸಿದ್ದಾರೆ.

**ಐಪಿಎಲ್‌ನಲ್ಲಿ ಅಟ್ಟರ್ ಫ್ಲಾಪ್:** ಈ ಬಾರಿಯ ಐಪಿಎಲ್‌ನಲ್ಲಿ ಗುಜರಾತ್ ಟೈಟಾನ್ಸ್ ಪರ ಕಣಕ್ಕಿಳಿದಿದ್ದ ರಶೀದ್ ಖಾನ್ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರು. ಅದರಲ್ಲೂ ಐಪಿಎಲ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸೀಸನ್‌ವೊಂದರಲ್ಲಿ ಅವರು 9 ಕ್ಕಿಂತ ಹೆಚ್ಚಿನ ಸರಾಸರಿಯಲ್ಲಿ ರನ್ ಬಿಟ್ಟು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಈ ಬಾರಿ 33 ಸಿಕ್ಸರ್‌ಗಳನ್ನು ಸಹ ಹೊಡೆಸಿಕೊಂಡಿದ್ದಾರೆ. ಈ ಮೂಲಕ ಐಪಿಎಲ್ ಸೀಸನ್‌ವೊಂದರಲ್ಲಿ ಅತ್ಯಧಿಕ ಸಿಕ್ಸ್ ಹೊಡೆಸಿಕೊಂಡ ಬೌಲರ್ ಎಂಬ ಅನಗತ್ಯ ದಾಖಲೆಯನ್ನು ಸಹ ರಶೀದ್ ಖಾನ್ ತಮ್ಮದಾಗಿಸಿಕೊಂಡಿದ್ದಾರೆ.

ಇನ್ನು ಈ ಬಾರಿಯ ಐಪಿಎಲ್‌ನಲ್ಲಿ 15 ಪಂದ್ಯಗಳನ್ನಾಡಿದ ರಶೀದ್ ಖಾನ್ ಒಟ್ಟು 330 ಎಸೆತಗಳನ್ನು ಎಸೆದಿದ್ದಾರೆ. ಈ ವೇಳೆ ನೀಡಿರುವುದು ಬರೋಬ್ಬರಿ 514 ರನ್‌ಗಳು. ಅಂದರೆ ಪ್ರತಿ ಓವರ್‌ಗೆ 9.34ರ ಸರಾಸರಿಯಲ್ಲಿ ರನ್ ನೀಡಿರುವ ಅವರು ಪಡೆದಿರುವುದು ಕೇವಲ 9 ವಿಕೆಟ್‌ಗಳು ಮಾತ್ರ. ಈ ಕಳಪೆ ಫಾರ್ಮ್ ಕಾರಣದಿಂದಲೇ ಇದೀಗ ಕ್ರಿಕೆಟ್‌ನಿಂದ ಕೆಲ ಕಾಲ ದೂರ ಸರಿಯಲು ರಶೀದ್ ಖಾನ್ ನಿರ್ಧರಿಸಿದ್ದಾರೆ. ಹೀಗಾಗಿ ಈ ಬಾರಿಯ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಎಂಐ ನ್ಯೂಯಾರ್ಕ್ ಪರ ಮಾಂತ್ರಿಕ ಲೆಗ್ ಸ್ಪಿನ್ನರ್ ಕಾಣಿಸಿಕೊಳ್ಳುವುದಿಲ್ಲ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966